Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–34 ಆಗಸ್ಟ್ 21–27, 2023 ಪುಟ 16 ರೂ. 10/–
Volume-17 Issue-34 August 21-27, 2023 Pages:16 Price: 10/-

ಸ್ವಾತಂತ್ರ್ಯ, ಪ್ರಜಾಪ್ರಭುತ್ವ ರಕ್ಷಣೆಗಾಗಿ ಅಹೋರಾತ್ರಿ ಮೊಳಗಿದ ದುಡಿಯುವ ವರ್ಗದ ಸಂಕಲ್ಪ



ರಾಜ್ಯದಲ್ಲೂ ಬೇಕಿದೆ 'ನಗರ ಉದ್ಯೋಗ ಖಾತ್ರಿ ಯೋಜನೆ'





ಕಾವೇರಿ ವಿವಾದ: ಸಂಕಷ್ಟ ಹಂಚಿಕೊಳ್ಳೋಣ

ಮೋದಿ ಭಾಷಣ: ವಿಷ ಕಕ್ಕುವ ರಾಜಕಾರಣ

'ಜನೌಷಧಿ ಯೋಜನೆ' ಔಷಧಾಲಯಗಳಿಗೆ ಇಲ್ಲದ ಪ್ರೋತ್ಸಾಹ

ಡಾ. ಅಂಬೇಡ್ಕರ್ ಮತ್ತು ಏಕರೂಪ ನಾಗರಿಕ ಸಂಹಿತೆ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಮೆರಿಕದಿಂದ ವಾಪಸಾದ ನಂತರ, ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಮಧ್ಯಪ್ರದೇಶದಲ್ಲಿ ಬಿಜೆಪಿಯ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತ, ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ತರುವುದು ಅಗತ್ಯ ಎಂದು ಹೇಳಿದರು. ಅದೇ ವೇಳೆಗೆ 22ನೇ ಕಾನೂನು ಆಯೋಗ ಯಾವುದೇ ಕರಡನ್ನು ಮುಂದಿಡದೆ, ಈ ಬಗ್ಗೆ ಅಭಿಪ್ರಾಯಗಳನ್ನು ಆಹ್ವಾನಿಸಿತು. 21ನೇ ಕಾನೂನು ಆಯೋಗವೇ ಈ ಪ್ರಶ್ನೆಯನ್ನು ವಿಶದವಾಗಿ ಪರಿಶೀಲಿಸಿದ ನಂತರ ಸದ್ಯಕ್ಕೆ ಇದರ ಅಗತ್ಯವಿಲ್ಲ, ಅದು ಅಪೇಕ್ಷಣೀಯವೂ ಅಲ್ಲ ಎಂದಿರುವ ಸ್ವಲ್ಪಸಮಯದಲ್ಲೇ ಮತ್ತೆ ಈ ಪ್ರಶ್ನೆಯನ್ನು ಎತ್ತಿರುವುದೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ. “ಏಕರೂಪ ನಾಗರಿಕ ಸಂಹಿತೆಯ ಪ್ರಶ್ನೆಯನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ, ಸ್ವತಃ ಅಂಬೇಡ್ಕರ್ ಅದನ್ನು ಬೆಂಬಲಿಸಿದ್ದರು ಎಂದು ಸಂಘಪರಿವಾರ ಪ್ರಚಾರ ಮಾಡುತ್ತಿದೆ. ಇದು ನಿಜವೇ?



ಅಮೃತ್ ಕೌರ್

ನಮ್ಮ ಸಂವಿಧಾನ ರಚನೆಯಾದಾಗ ಈ ಪ್ರಶ್ನೆಯನ್ನು ಮೂರು ಹಂತಗಳಲ್ಲಿ ಚರ್ಚಿಸಲಾಗಿದೆ. ಮೊದಲಿಗೆ, "ಮೂಲಭೂತ ಹಕ್ಕುಗಳ ಉಪ–ಸಮಿತಿ"ಯಲ್ಲಿ ಚರ್ಚೆಗೆ ಬಂತು. ಜೆಪಿ ಕೃಪಲಾನಿ ಈ ಉಪಸಮಿತಿಯ ಅಧ್ಯಕ್ಷರಾಗಿದ್ದರು, ಮತ್ತು ಇತರ ಸದಸ್ಯರೆಂದರೆ: ಬಿ.ಆರ್. ಅಂಬೇಡ್ಕರ್, ಮೌಲಾನಾ ಅಬುಲ್ ಕಲಾಂ ಆಜಾದ್, ಕೆ.ಎಂ. ಮುನ್ಷಿ, ಅಲ್ಲಾಡಿ ಕೃಷ್ಣಸಾಮಿ ಅಯ್ಯರ್, ರಾಜಕುಮಾರಿ ಅಮೃತ್ ಕೌರ್, ಎಂ. ಆರ್ಮಸಾನಿ, ಕೆ.ಟಿ. ಶಾ, ಜೈರಾಮ್ ದಾಸ್ ದೌಲತ್ ರಾಮ್, ಹಂಸಾ ಮೆಹ್ತಾ, ಶಂಕರ್ ರಾವ್ದೇವ್. ಉಪಸಮಿತಿಯು ಮೂಲಭೂತ ಹಕ್ಕುಗಳನ್ನು ರೂಪಿಸುವಾಗ ಕೆಳಗಿನ ಎರಡು ವಿಧಗಳನ್ನು ನಿರ್ಧರಿಸಿತು.



ಹಂಸಾ ಮೆಹ್ತಾ

1) ಕೂಡಲೇ ಜಾರಿಗೊಳಿಸಬೇಕಾದ ಮೂಲಭೂತ ಹಕ್ಕುಗಳು.
2) ವ್ಯಾಖ್ಯಾವಾಗಿದ್ದರೂ, ಕಾಲಾನಂತರದಲ್ಲಿ ಕಾರ್ಯಗತಗೊಳಿಸಬೇಕಾದ ಗುರಿಗಳು. ಇವುಗಳನ್ನು "ಪ್ರಭುತ್ವ ನೀತಿಗಳ ನಿರ್ದೇಶಕ ತತ್ವಗಳು" ಎಂದು ವ್ಯಾಖ್ಯಾನಿಸಲಾಗಿದೆ.

ಮೊದಲ ವಿಭಾಗವು ನ್ಯಾಯಾಲಯಗಳ ತೀರ್ಪಿಗೆ ಒಳಪಟ್ಟಿರುತ್ತದೆ. ಎರಡನೇ ವಿಭಾಗವು ನ್ಯಾಯಾಂಗ ಪರಾಮರ್ಶೆಗೆ ಒಳಪಡುವುದಿಲ್ಲ. ಏಕರೂಪ ನಾಗರಿಕ ಸಂಹಿತೆಯನ್ನು ಮೂಲಭೂತ ಹಕ್ಕುಗಳಲ್ಲಿ ಅಳವಡಿಸುವುದು ಮೊದಲ ಸಲಹೆಯಾಗಿತ್ತು. ಅಂಬೇಡ್ಕರ್ ಕೂಡ ಅದನ್ನೇ ಪ್ರಸ್ತಾಪಿಸಿದರು. ಆದರೆ ಈ ಉಪಸಮಿತಿಯಲ್ಲಿ ಸುದೀರ್ಘ ಚರ್ಚೆಯ ನಂತರ ಅದನ್ನು "ಪ್ರಭುತ್ವ ನೀತಿಗಳ ನಿರ್ದೇಶಕ ತತ್ವಗಳು”ಗೆ ಸೇರಿಸಲು ನಿರ್ಧರಿಸಲಾಯಿತು.

ಇಂತಹ ನಿರ್ಧಾರವೇಕೆ?

ಒಂದೆಡೆ ಮುಸ್ಲಿಂ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಇನ್ನೊಂದೆಡೆ ಹಿಂದೂ ಧರ್ಮದ ಬೆಂಬಲಿಗರಿಂದಲೂ ತೀವ್ರ ವಿರೋಧ ವ್ಯಕ್ತವಾಗಿತ್ತು. ಏಕೆಂದರೆ, ಅವರಿಗೂ ಹಿಂದೂ ಸಂಪ್ರದಾಯಗಳ ವಿವಿಧ ಆಚರಣೆಗಳನ್ನು ಆಗ ಬದಲಾಯಿಸಬೇಕಾಗುತ್ತದೆ ಎಂದು ತಿಳಿದಿತ್ತು, ಅದನ್ನು ಅವರು ಬಯಸುತ್ತಿರಲಿಲ್ಲ.

ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದ ಮತ್ತು ನಂತರ ನಮ್ಮ ಗಣತಂತ್ರದ ಮೊದಲ ರಾಷ್ಟ್ರಪತಿಯಾದ ರಾಜೇಂದ್ರ ಪ್ರಸಾದ್ ಅವರು ಮೂಲಭೂತ ಹಕ್ಕುಗಳಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಸೇರಿಸಿದರೆ ತಾನು ಅದಕ್ಕೆ ಸಹಿ ಹಾಕುವುದಿಲ್ಲ ಎಂದು ಹೇಳಿದ್ದರು ಎಂಬುದು ಗಮನಿಸಬೇಕಾದ ಸಂಗತಿ. ಅದನ್ನು ನಿರ್ದೇಶಕ ತತ್ವಗಳಲ್ಲಿ ಅಳವಡಿಸಲು ರಾಜಿ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

ಮಹಿಳಾ ಸದಸ್ಯರಾದ ರಾಜಕುಮಾರಿ ಅಮೃತ್ ಕೌರ್, ಹಂಸಾ ಮೆಹ್ತಾ ಮತ್ತು ಆಗ ಸಮಾಜವಾದಿಯಾಗಿದ್ದ ಎಂ. ಆರ್. ಮಸಾನಿ ಇದಕ್ಕೆ ಪರ್ಯಾಯ ಅಭಿಪ್ರಾಯ ವ್ಯಕ್ತಪಡಿಸಿದರು. ಆದಾಗ್ಯೂ, ಕೊನೆಗೆ ಬಹುಮತದಿಂದ ಅದನ್ನು ನಿರ್ದೇಶಕ ತತ್ವಗಳಲ್ಲಿ ಸೇರಿಸಲಾಯಿತು. ಅಂಬೇಡ್ಕರ್ ಅದರ ವಿರುದ್ಧ ಮತಚಲಾಯಿಸಲಿಲ್ಲ ಎಂಬುದು ಗಮನಾರ್ಹ.

> **ಏಕರೂಪ ನಾಗರಿಕ ಸಂಹಿತೆಯನ್ನು ಹೇರುವ ಮೂಲಕ ಮುಸ್ಲಿಂ ಸಮುದಾಯವನ್ನು ಸಂಘರ್ಷಕ್ಕೆ ಪ್ರಚೋದಿಸಲು ಯಾವುದೇ ಸರ್ಕಾರ ಪ್ರಯತ್ನಿಸುವುದಿಲ್ಲ ಮತ್ತು ಹಾಗೆ ಮಾಡುವ ಸರ್ಕಾರವು ಹುಚ್ಚು ಸರ್ಕಾರವಾಗಿರುತ್ತದೆ ಎಂದು ಅಂಬೇಡ್ಕರ್ ಹೇಳಿದ್ದರು.**

‘ಮತಧರ್ಮವನ್ನು ಆಧರಿಸಿದ ವೈಯಕ್ತಿಕ ಕಾನೂನುಗಳು ಭಾರತ ಒಂದು ರಾಷ್ಟ್ರವಾಗದಂತೆ ಹಿಂದಕ್ಕೆಳೆಯುವ ಅಂಶಗಳು, ಅವು ದೇಶವನ್ನು ಪ್ರತ್ಯೇಕ ಬಿಗಿಯಾದ ವಿಭಾಗಗಳಾಗಿ ವಿಭಜಿಸುತ್ತವೆ. ಹಾಗಾಗಿ ಭಾರತೀಯರು ಮುಂದಿನ 5ರಿಂದ 10 ವರ್ಷಗಳಲ್ಲಿ ಏಕರೂಪದ ನಾಗರಿಕ ಕಾನೂನು ಪಡೆಯಬೇಕು’ ಎಂಬುದು ಪರ್ಯಾಯ ಟಿಪ್ಪಣಿಯನ್ನು ಸಲ್ಲಿಸಿದವರ ಅಭಿಪ್ರಾಯವಾಗಿತ್ತು.

ಡಾ. ಬಿ.ಆರ್.ಅಂಬೇಡ್ಕರ್ ಅವರು, ಏಕರೂಪದ ನಾಗರಿಕ ಕಾನೂನನ್ನು ಮೂಲಭೂತ ಹಕ್ಕುಗಳ ಅಡಿಯಲ್ಲಿ ತರಬೇಕು ಮತ್ತು ಧರ್ಮವು ವೈಯಕ್ತಿಕ ಕಾನೂನುಗಳ ಆಧಾರವಾಗಿರಬಾರದು ಎಂದು ಭಾವಿಸಲು, ಹಿಂದೂ ಧರ್ಮವು ಅಸಮಾನತೆಯ ವಿವಿಧ ಅಂಶಗಳನ್ನು ಹೊಂದಿದೆ ಎಂಬುದು ಅವರ ವಿಶ್ಲೇಷಣೆಗೆ ಕಾರಣ. ಅದೇ ರೀತಿಯಲ್ಲಿ, ಇಸ್ಲಾಂ ಧರ್ಮ ಭಾರತದಲ್ಲಿ ಜಾರಿಗೆ ಬಂದ ರೀತಿಯಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ತಪ್ಪು ತತ್ವಗಳನ್ನು ಹೊಂದಿದೆ ಎಂಬುದೂ ಅವರ ಅಭಿಪ್ರಾಯವಾಗಿತ್ತು. ಆದ್ದರಿಂದ ವೈಯಕ್ತಿಕ ಕಾನೂನುಗಳಲ್ಲಿರುವ ಅಸಮಾನತೆಯ ಈ ಅಂಶಗಳನ್ನು ತೆಗೆದುಹಾಕುವುದು ಅವರ ಕಾಳಜಿಯಾಗಿತ್ತು.



ರಾಜೇಂದ್ರ ಪ್ರಸಾದ್

ಅದೇ ರೀತಿಯಲ್ಲಿ ಮದುವೆ/ಆಸ್ತಿಯಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ಸಿಗಬೇಕಾದರೆ ಏಕರೂಪದ ನಾಗರಿಕ ಕಾನೂನು ಅಗತ್ಯ ಎಂಬುದು ಇಬ್ಬರು ಮಹಿಳಾ ಸದಸ್ಯರಾದ ರಾಜಕುಮಾರಿ ಅಮೃತ್ ಕೌರ್ ಮತ್ತು ಹಂಸಾ ಮೆಹ್ತಾ ಅಭಿಪ್ರಾಯ ಪಡಲು ಕಾರಣ. ಏಕರೂಪ ಕಾನೂನು ಪ್ರತಿಪಾದಿಸಿದ ಮತ್ತೊಬ್ಬ ಸದಸ್ಯರಾದ ಮಸಾನಿ ನಂತರ ಅವರು ಸಮಾಜವಾದದ ವಿರೋಧಿಯಾದರೂ ಸಹಾ, ಸಂವಿಧಾನ ಸಭೆಯ ಘಟನೆಗಳ ಸಮಯದಲ್ಲಿ ಅವರು ಸಮಾಜವಾದಿಯಾಗಿದ್ದರು. ಆದ್ದರಿಂದ ಅವರು ಏಕರೂಪ ನಾಗರಿಕ ಸಂಹಿತೆಯನ್ನು ಪ್ರತಿಪಾದಿಸಿದುದರಲ್ಲಿ ಆಶ್ಚರ್ಯವಿಲ್ಲ. ಹಿಂದೂ ಸಂಪ್ರದಾಯವಾದಿ ಮುಖಂಡರಾದ ಕೆ.ಎಂ. ಮುನ್ಷಿ ಬೆಂಬಲಿಸಿದ ಉದ್ದೇಶ ಅಂಬೇಡ್ಕರ್, ಅಮೃತ್ ಕೌರ್, ಹಂಸಾ ಮೆಹ್ತಾ, ಎಂ.ಆರ್.ಮಸಾನಿಯವರ ಉದ್ದೇಶವೇ ಆಗಿರಲಿಲ್ಲ. ಆದಾಗ್ಯೂ, ಮೂಲಭೂತ ಹಕ್ಕುಗಳ ಬದಲು ನಿರ್ದೇಶಕ ಸೂತ್ರಗಳಲ್ಲಿ ಸೇರಿಸಿಕೊಳ್ಳುವ ರಾಜಿಸೂತ್ರವನ್ನು ಅವರೂ ಒಪ್ಪಿಕೊಂಡರು.



ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆಗಳು

ಎರಡನೆಯ ಹಂತದಲ್ಲಿ 23.11.1948 ರಂದು ಪೂರ್ಣ ಸಂವಿಧಾನ ಸಭೆಯಲ್ಲಿ ಸಾಮಾನ್ಯ ನಾಗರಿಕ ಸಂಹಿತೆಯ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಕೊನೆಗೆ ರಾಜಿಸೂತ್ರದಂತೆ ಅದನ್ನು ನಿರ್ದೇಶಕ ಸೂತ್ರಗಳಲ್ಲಿ ಸೇರಿಸಲಾಯಿತು. ಸಾಮಾನ್ಯ ಕಾನೂನುಗಳು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿದ ಅಂಬೇಡ್ಕರ್, ಸಮಾನ ಕ್ರಿಮಿನಲ್ ಕಾನೂನುಗಳೆಲ್ಲ ಈಗಾಗಲೇ ಅಂಗೀಕರಿಸಲ್ಪಟ್ಟಿವೆ ಮತ್ತು ಆಸ್ತಿ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಾಮಾನ್ಯ ಕಾನೂನುಗಳಿವೆ ಮತ್ತು ಮದುವೆ/ಆಸ್ತಿ ವಿಷಯಗಳಲ್ಲಿ ಮಾತ್ರ ವೈಯಕ್ತಿಕ ಕಾನೂನುಗಳಿವೆ. ಮುಂದೆ ಇದರಲ್ಲಿಯೂ ಬದಲಾವಣೆ ತರಲು “ನಿರ್ದೇಶಕ’ ಸೂತ್ರಗಳಲ್ಲಿ ಸೇರಿಸಲಾಗಿದೆ ಎಂದರು. “ಈ ವಿಷಯದ ಬಗ್ಗೆ ಮುಸ್ಲಿಮರ ಭಾವನೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ” ಎಂದ ಅಂಬೇಡ್ಕರ್ ಪ್ರಭುತ್ವವು ಏಕರೂಪದ ನಾಗರಿಕ ಕಾನೂನುಗಳನ್ನು ಎಲ್ಲ ನಾಗರಿಕರಿಗೆ ತರಲು ಪ್ರಯತ್ನಿಸುತ್ತದೆ ಎಂದು ಹೇಳುತ್ತದೆ ಎಂದರು. ಇದನ್ನು ತಕ್ಷಣವೇ ತರಲಾಗುವುದು ಎಂದೇನೂ ಅಲ್ಲ. ಎಲ್ಲ ಸಮುದಾಯಗಳ ಸಮ್ಮತಿಯನ್ನು ಪಡೆದ ನಂತರವೇ ತರಬೇಕು ಎನ್ನುತ್ತ 1937ರಲ್ಲಿ ಮುಸ್ಲಿಮರಿಗೆ ಷರಿಯತ್ ಕಾನೂನನ್ನು ಜಾರಿಗೆ ತಂದಾಗ ಅದು ಸ್ವಇಚ್ಛೆಯ ಮೇಲೆ ನಿಂತಿತ್ತು

ಪ್ರಭುತ್ವ ನೀತಿಗಳ ನಿರ್ದೇಶಕ ತತ್ವಗಳಲ್ಲಿ ಉದ್ಯೋಗದ ಹಕ್ಕು, ಜೀವನ ವೇತನ(ಕನಿಷ್ಟ ವೇತನವಲ್ಲ), ಕಾರ್ಮಿಕರು ಕಾರ್ಖಾನೆಗಳ ನಿರ್ವಹಣೆಯಲ್ಲಿ ಭಾಗವಹಿಸುವ ಹಕ್ಕು, ಪುರುಷರು ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ನೈಸರ್ಗಿಕ ಸಂಪನ್ಮೂಲಗಳನ್ನು ಜನಸಾಮಾನ್ಯರ ಒಳಿತಿಗಾಗಿ ಹಂಚಿಕೊಳ್ಳುವುದು, ಕೆಲವೇ ಜನರಲ್ಲಿ ಸ್ವತ್ತುಗಳು ಮತ್ತು ಸಂಪನ್ಮೂಲಗಳ ಕೇಂದ್ರೀಕರಣವನ್ನು ತಪ್ಪಿಸುವುದು ಮುಂತಾದವುಗಳು ಕೂಡ ಇವೆ. ಸಂಘಪರಿವಾರದವರು ಇವುಗಳ ಬಗ್ಗೆ, ವಿಶೇಷವಾಗಿ ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಬಗ್ಗೆಯಾಗಲೀ, ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ ಎಂಬ ಕಳವಳ ಉಂಟಾಗಿರುವ ಈ ಸಮಯದಲ್ಲಿ ಆರ್ಥಿಕ ಅಸಮಾನತೆಯನ್ನು ತಪ್ಪಿಸಬೇಕು ಎಂಬ ತತ್ವದ ಬಗ್ಗೆ ಏಕೆ ಮೌನವಾಗಿದ್ದಾರೆ? ಈ ಬಗ್ಗೆ ತುರ್ತು ಏಕಿಲ್ಲ? ಕೇವಲ ಏಕರೂಪ ನಾಗರಿಕ ಸಂಹಿತೆಯ ಬಗ್ಗೆಯೇ ಏಕೆ ಈಗ ಈ ತರಾತುರಿ?]

ಎಂದೂ ಅಂಬೇಡ್ಕರ್ ನೆನಪಿದರು.

02.12.1948 ರಂದು ನಡೆದ ಮತ್ತೊಂದು ಚರ್ಚೆಯ ಸಂದರ್ಭದಲ್ಲಿ ಮತ್ತೆ ಈ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಯಿತು. ಏಕರೂಪದ ನಾಗರಿಕ ಕಾನೂನನ್ನು ಹೇರುವ ಮೂಲಕ ಮುಸ್ಲಿಂ ಸಮುದಾಯವನ್ನು ಸಂಘರ್ಷಕ್ಕೆ ಪ್ರಚೋದಿಸಲು ಯಾವುದೇ ಸರ್ಕಾರ ಪ್ರಯತ್ನಿಸುವುದಿಲ್ಲ ಮತ್ತು ಹಾಗೆ ಮಾಡುವ ಸರ್ಕಾರವು ಹುಚ್ಚು ಸರ್ಕಾರವಾಗಿರುತ್ತದೆ ಎಂದು ಆಗ ಉತ್ತರಿಸಿದ ಅಂಬೇಡ್ಕರ್, ಮುಸ್ಲಿಂ ಸದಸ್ಯರು ಭಯಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು. ಈ ಆಧಾರದ ಮೇಲೆ ಏಕರೂಪದ ನಾಗರಿಕ ಸಂಹಿತೆಯ ಪ್ರಶ್ನೆಯನ್ನು ನಿರ್ದೇಶಕ ತತ್ವಗಳ ಅಡಿಯಲ್ಲಿ ಇರಿಸಲಾಗಿದೆ ಎಂದು ಅವರು ಹೇಳಿದರು.

ಉದಾತ್ತತೆಯ ಸುಳಿವೇ ಇಲ್ಲ

ಪ್ರಭುತ್ವ ನೀತಿಗಳ ನಿರ್ದೇಶಕ ತತ್ವಗಳಲ್ಲಿ ಉದ್ಯೋಗದ ಹಕ್ಕು, ಜೀವನ ವೇತನ(ಕನಿಷ್ಟ ವೇತನವಲ್ಲ), ಕಾರ್ಮಿಕರು ಕಾರ್ಖಾನೆಗಳ ನಿರ್ವಹಣೆಯಲ್ಲಿ ಭಾಗವಹಿಸುವ ಹಕ್ಕು, ಪುರುಷರು ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ನೈಸರ್ಗಿಕ ಸಂಪನ್ಮೂಲಗಳನ್ನು ಜನಸಾಮಾನ್ಯರ ಒಳಿತಿಗಾಗಿ ಹಂಚಿಕೊಳ್ಳುವುದು, ಕೆಲವೇ ಜನರಲ್ಲಿ ಸ್ವತ್ತುಗಳು ಮತ್ತು ಸಂಪನ್ಮೂಲಗಳ ಕೇಂದ್ರೀಕರಣವನ್ನು ತಪ್ಪಿಸುವುದು ಮುಂತಾದವುಗಳು ಕೂಡ ಇವೆ. ಸಂಘಪರಿವಾರದವರು ಇವುಗಳ ಬಗ್ಗೆ, ವಿಶೇಷವಾಗಿ ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಬಗ್ಗೆಯಾಗಲೀ, ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ ಎಂಬ ಕಳವಳ ಉಂಟಾಗಿರುವ ಈ ಸಮಯದಲ್ಲಿ ಆರ್ಥಿಕ ಅಸಮಾನತೆಯನ್ನು ತಪ್ಪಿಸಬೇಕು ಎಂಬ ತತ್ವದ ಬಗ್ಗೆ ಏಕೆ ಮೌನವಾಗಿದ್ದಾರೆ? ಈ ಬಗ್ಗೆ ತುರ್ತು ಏಕಿಲ್ಲ? ಕೇವಲ ಏಕರೂಪ ನಾಗರಿಕ ಸಂಹಿತೆಯ ಬಗ್ಗೆಯೇ ಏಕೆ ಈಗ ಈ ತರಾತುರಿ?

ಈ ಮೇಲೆ ಹೇಳಿದಂತೆ ಆಗ ಅಂಬೇಡ್ಕರ್ ಮತ್ತು ಇತರರು ಏಕರೂಪದ ನಾಗರಿಕ ಕಾನೂನನ್ನು ಪ್ರತಿಪಾದಿಸಿದಾಗ ಸಮಾನತೆಯನ್ನು ತರುವ ಉದಾತ್ತ ಉದ್ದೇಶ ಹೊಂದಿದ್ದರು. ಭಾರತೀಯ ಸಮಾಜವನ್ನು ಭಾರತೀಯ ಸಮಾಜವನ್ನು ಜಾತಿ/ಲಿಂಗ ಅಸಮಾನತೆಯಿಂದ ಮುಕ್ತಗೊಳಿಸುವುದು ಅವರ ಗುರಿಯಾಗಿತ್ತು. ಆದರೆ ಇಂದು ಏಕರೂಪದ ನಾಗರಿಕ ಕಾನೂನಿನ ಬಗ್ಗೆ ಮಾತನಾಡುವವರ ಉದ್ದೇಶವನ್ನು ಯಾವುದೇ ರೀತಿಯಲ್ಲಿ ಉದಾತ್ತವೆಂದು ಹೇಳಲು ಸಾಧ್ಯವಿಲ್ಲ. ಬುಡಕಟ್ಟು ಜನರು, ಕ್ರೈಸ್ತರು

ಪುಟ 05 ಕ್ಕೆ

ಸಂಪಾದಕೀಯ

ಕಾವೇರಿ ವಿವಾದ: ಸಂಕಷ್ಟ ಹಂಚಿಕೊಳ್ಳೋಣ

ಕಾವೇರಿ ನದಿ ನೀರಿಗೆ ಕಿಚ್ಚು ಹಚ್ಚುವ ಕೆಲಸ ಆರಂಭವಾಗಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ತಮಿಳುನಾಡಿಗೆ ನೀರು ಬಿಟ್ಟಿರುವುದು “ಅಕ್ಷಮ್ಯ ಅಪರಾಧ” ಎಂದು ಹೇಳಿಕೆ ನೀಡುವ ಮೂಲಕ, ಉರಿಯುವ ಬೆಂಕಿಗೆ ದ್ವೇಷದ ತುಪ್ಪ ಸುರಿದಿದ್ದಾರೆ. ಬಿಜೆಪಿಯ ಬೊಮ್ಮಾಯಿಯವರು ಸ್ವತಃ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದವರು ಇಂತಹ ಬೇಜವಾಬ್ದಾರಿಯುತ ಮಾತುಗಳನ್ನು ಹೇಳುವ ಮೂಲಕ, ಕರ್ನಾಟಕ ಹಾಗೂ ತಮಿಳುನಾಡಿನ ಶಾಂತಿಪ್ರಿಯ ಜನತೆಯ ನಡುವೆ ಸಂಘರ್ಷವನ್ನು ಪ್ರಚೋದಿಸಲು ಮುಂದಾಗಿರುವುದು ಖೇದಕರ ಸಂಗತಿಯಾಗಿದೆ. ಧರ್ಮ, ಜಾತಿ, ಭಾಷೆ, ಮೈಬಣ್ಣದ ಹೆಸರಿನಲ್ಲಿ ಪರಸ್ಪರ ಹೊಡೆದಾಡಲು ಪ್ರೇರೇಪಿಸಿ, ಇದುವೇ ದೇಶಭಕ್ತಿ ಎಂದು ಬಿಂಬಿಸಿ ರಾಜಕಾರಣ ಮಾಡುವುದು ಬಿಜೆಪಿಗರ ಪರಂಪರೆ. ಮಳೆ ನೀರಿನ ಕೊರತೆಯಿಂದ ಕಾವೇರಿಕೊಳ್ಳದ ಅಣೆಕಟ್ಟುಗಳಾದ ಕಬಿನಿ, ಹಾರಂಗಿ, ಹೇಮಾವತಿ, ಕೆ.ಆರ್.ಎಸ್. ನಲ್ಲಿ ಒಳಹರಿವು ಸರಿಸುಮಾರು ಶೇ. 50 ರಷ್ಟು ತಗ್ಗಿದೆ. ಅದರಿಂದಾಗಿ ಎರಡು ರಾಜ್ಯಗಳ ರೈತರಲ್ಲಿ ಆತಂಕ ಉಂಟಾಗಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಸಹ ಇದೇ ರೀತಿ ಮಾತನಾಡಿದ್ದಾರೆ. ತಕ್ಷಣ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ನೀರಿನ ತೀವ್ರ ಕೊರತೆ ಕೇವಲ ಈ ವರ್ಷದ ಬೆಳವಣಿಗೆಯಲ್ಲ. ಹಿಂದೆಯೂ ಇಂತಹ ಪರಿಸ್ಥಿತಿಯನ್ನು ಎರಡು ನೆರೆಯ ರಾಜ್ಯಗಳು ಎದುರಿಸುವೆ. ಮುಖ್ಯಮಂತ್ರಿಗಳಾಗಿದ್ದ ಇವರು ಮೊದಮೊದಲು ತಮಿಳುನಾಡಿಗೆ ಒಂದು ಹನಿ ನೀರನ್ನು ಕೊಡುವುದಿಲ್ಲ ಎಂದು ಜನರನ್ನು ಪರಸ್ಪರ ಎತ್ತಿ ಕಟ್ಟಿದ್ದಾರೆ. ಕೊನೆಗೆ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶದ ಬಳಿಕ ತಮಿಳುನಾಡಿಗೆ ನೀರನ್ನು ಹರಿಸಿ, ತಮಿಳುನಾಡಿನ ಕುರುವೈ ಬೆಳಗಳಿಗೆ ರಕ್ಷಣೆ ನೀಡಿದ್ದಾರೆ. ಚುನಾವಣೆ ಲಾಭದ ಮೇಲೆ ಕಣ್ಣಿಟ್ಟಿರುವ ಕೆಲವು ರಾಜಕೀಯ ಪಕ್ಷಗಳ ಚಿತಾವಣೆಯಿಂದ ಕೆಲವೊಮ್ಮೆ ಅನಗತ್ಯ ಹಿಂಸಾಚಾರವು ನಡೆದ ಚರಿತ್ರೆ ಇದೆ. ಆದ್ದರಿಂದಲೇ ಈ ಸಲ ಸಂಸತ್ ಚುನಾವಣೆ ಸಮೀಪಿಸುತ್ತಿರುವುದರಿಂದ ಕಾವೇರಿ ನದಿ ನೀರಿನ ವಿಷಯದಲ್ಲಿ ರಾಜಕೀಯ ಪೈಪೋಟಿ ತೀವ್ರಗೊಂಡಿದೆ.

ಕರ್ನಾಟಕದಲ್ಲಿ ಹವಾಮಾನ ವೈಪರಿತ್ಯ ಪರಿಸ್ಥಿತಿ ಮುಂದುವರಿದಿದೆ. ಜುಲೈ ತಿಂಗಳ ಅಂತ್ಯದ ವೇಳೆಗೆ ವಾಡಿಕೆಗಿಂತ ಶೇ. 5ರಷ್ಟು ಕಡಿಮೆ ಮಟ್ಟಕ್ಕೆ ಇಳಿದಿದೆ. ದೇಶದ ಒಟ್ಟು 717 ಜಿಲ್ಲೆಗಳ ಪೈಕಿ 263 ಜಿಲ್ಲೆಗಳಲ್ಲಿ ಶೇ. 20ರಷ್ಟು ಮಳೆ ಅಭಾವ ಉಂಟಾಗಿದೆ. ಪೂರ್ವ ಭಾರತದ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮಳೆ ಅಭಾವದ ಪರಿಸ್ಥಿತಿ ಇದೆ. ದಕ್ಷಿಣದ ರಾಜ್ಯಗಳಲ್ಲಿಯೂ ಕೂಡಾ ಮಳೆ ಅಭಾವ ಪರಿಸ್ಥಿತಿ ತೀವ್ರವಾಗುತ್ತಿದೆ. ಕೇರಳ, ಕೊಡಗು ಪ್ರದೇಶದಲ್ಲಿ ಉಂಟಾಗಿರುವ ಮಳೆಯ ಅಭಾವದಿಂದ ಕರ್ನಾಟಕದ ಅಣೆಕಟ್ಟುಗಳಿಗೆ ನೀರಿನ ಒಳ ಹರಿವು ಹಿಂದಿಗಿಂತಲೂ ಹೆಚ್ಚು ಇಳಿಮುಖವಾಗಿದೆ. ಹೀಗಾಗಿ ಎರಡೂ ರಾಜ್ಯಗಳು ಗಂಭೀರ ಸಮಸ್ಯೆಯನ್ನು ಎದುರಿಸುವಂತಾಗಿದೆ. ಕರ್ನಾಟಕದ ರೈತರ ಬೆಳೆಗಳ ರಕ್ಷಣೆಯಾಗಬೇಕು, ತಮಿಳುನಾಡಿನಲ್ಲಿ ಬೆಳೆದು ನಿಂತ ಪೈರಿಗೂ ನೀರು ಬೇಕು. ಅವರೂ ರೈತರು, ಇವರೂ ರೈತರು. ಆಗಾಗ ಎದುರಾಗುವ ಈ ಜಲ ಸಂಕಷ್ಟವನ್ನು ಎರಡೂ ರಾಜ್ಯಗಳು ಪರಸ್ಪರ ಹಂಚಿಕೊಳ್ಳಬೇಕು. ತಮಿಳುನಾಡಿಗೆ ಕರ್ನಾಟಕದಿಂದ ಸಾಧ್ಯವಾಗುವಷ್ಟು ನೀರನ್ನು ಹರಿಸಲು ಕರ್ನಾಟಕ ಸರ್ಕಾರ ಸಿದ್ದವಾಗಿದೆ. ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಹಾಕಿದ ತಕ್ಷಣ ತಮಿಳುನಾಡಿಗೆ ನೀರನ್ನು ಹರಿಸಿದೆ. ಈ ಕ್ರಮವನ್ನು ರಾಜ್ಯದ ಜನತೆಯ ಹಿತಕ್ಕೆ ವಿರದ್ದವಾಗಿದೆ ಎಂದು ಟೀಕಿಸುವುದು ಸಮರ್ಥನೀಯವಲ್ಲ. ಈ ಸಂದರ್ಭದಲ್ಲಿ ತಮಿಳುನಾಡಿಗೆ ಕರ್ನಾಟಕ ಸರ್ಕಾರ 10 ಟಿಎಂಸಿ ನೀರು ಹರಿಸುತ್ತಿದೆ. ತಮಿಳುನಾಡಿಗೆ ಇದು ತೃಪ್ತಿ ತಂದಿರಲಿಕ್ಕಿಲ್ಲ. ಅವರಿಗೆ ಸುಪ್ರೀಂ ಕೋರ್ಟಿನ ಮೊರೆಹೋಗಲು ಎಲ್ಲ ಸ್ವಾತಂತ್ರ್ಯವಿದೆ. ಆದರೆ, ನ್ಯಾಯಾಲಯದ ಹಿಂದಿನ ಸಲಹೆಯಂತೆ ಎರಡೂ ರಾಜ್ಯಗಳ ಸರ್ಕಾರದ ಜವಾಬ್ದಾರಿಯುತ ಪ್ರತಿನಿಧಿಗಳು ಕುಳಿತುಕೊಂಡು ನೀರಿನ ಕೊರತೆಯ ಸಂಕಷ್ಟವನ್ನು ಹಂಚಿಕೊಳ್ಳಲು ಪ್ರಯತ್ನಿಸುವುದು ಹೆಚ್ಚು ಒಳ್ಳೆಯದು.

ತಮಿಳುನಾಡು ಮತ್ತು ಕರ್ನಾಟಕ ಎರಡು ದಕ್ಷಿಣ ಭಾರತದ ದ್ರಾವಿಡ ರಾಜ್ಯಗಳು. ನಾವು ಒಟ್ಟಿಗೆ ಇರಬೇಕಾದದ್ದು ಅನಿವಾರ್ಯ. ಇಂಡಿಯಾ ಎಂಬ ನಮ್ಮ ದೇಶದಲ್ಲಿ ಹಲವು ರಾಜ್ಯಗಳಿವೆ. ಈ ಎಲ್ಲ ರಾಜ್ಯಗಳು ಸೇರಿ ನಮ್ಮ ದೇಶ ಉದಯವಾಗಿದೆ. ಇಲ್ಲಿ ಅನೇಕ ನದಿಗಳಿವೆ. ಅವು ಒಂದು ರಾಜ್ಯದಲ್ಲಿ ಹುಟ್ಟಿ, ಇನ್ನೊಂದು ರಾಜ್ಯದಲ್ಲಿ ಹರಿದು ಸಮುದ್ರ ಸೇರುತ್ತವೆ. ಇವುಗಳಲ್ಲಿ ಹರಿಯುವ ನೀರನ್ನು ನಾವು ಅವಲಂಭಿಸಿರುತ್ತೇವೆ. ಇಲ್ಲಿ ಆಗಾಗ ಅನಾವೃಷ್ಟಿ ಮತ್ತು ಅನೇಕ ಸಲ, ಈ ಸಲವೂ ಹಿಮಾಚಲ ಪ್ರದೇಶ, ಉತ್ತರಖಂಡ್, ಮುಂತಾದ ರಾಜ್ಯಗಳಲ್ಲಿ ಆಗಿರುವ ಭೀಕರ ಅತಿವೃಷ್ಟಿ, ಮೇಘ ಸ್ಪೋಟದಂತಹ ರಾಷ್ಟ್ರೀಯ ದುರಂತಗಳು ಸಂಭವಿಸಿ ಅಪಾರ ಸಾವುನೋವುಗಳಿಗೆ ಕಾರಣವಾಗುತ್ತಿವೆ. ಆಗ ನಾವು ಎಲ್ಲರೂ ಒಂದು, ಒಂದು ದೇಶ ಎಂದುಕೊಳ್ಳುತ್ತೇವೆ. ಸಂತ್ರಸ್ತರಿಗೆ ನೆರವು ಸಂಗ್ರಹಿಸುತ್ತೇವೆ. ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವವರನ್ನು, ಜಾನುವಾರುಗಳನ್ನು ರಕ್ಷಿಸಲು ನಮ್ಮ ಜೀವದ ಹಂಗು ತೊರೆಯುತ್ತೇವೆ. ಕಾವೇರಿ ಜಲವಿವಾದವನ್ನು ಸಹ ನಾವು ಇದೇರೀತಿಯಲ್ಲಿ ಯಾಕೆ ಎದುರಿಸಬಾರದು? ತಮಿಳುನಾಡಿನ ರೈತರು ಬೆಳೆಯುವ ಭತ್ತ ಇಡೀ ದೇಶದ ಜನ ತಮ್ಮ ಹಸಿವು ನೀಗಿಸಲು ಬಳಸುತ್ತಾರೆ. ಕರ್ನಾಟಕ ಬೆಳೆಯುವ ಕೃಷಿ ಉತ್ಪನ್ನಗಳು ಎಲ್ಲ ರಾಜ್ಯದ ಜನಕ್ಕೆ ತಲುಪುತ್ತವೆ. ಅವರು ಬೆಳೆಯುತ್ತಿರುವುದು ದೇಶಕ್ಕಾಗಿ, ದೇಶದ ಅಭಿವೃದ್ದಿಗಾಗಿ. ಹೀಗಿರುವಾಗ ನಮ್ಮಲ್ಲಿ ಯಾಕೆ ಬೇಧ? ಇದ್ದಷ್ಟು ನೀರನ್ನು ಹಂಚಿಕೊಂಡು ಬಳಕೆ ಮಾಡುವುದು ಶ್ರೇಯಸ್ಸುದಾಯಕವಲ್ಲವೇ? ಸಂಕಷ್ಟವನ್ನು ಹಂಚಿಕೊಳ್ಳುವುದು ಎಂದರೆ ಇದೆ.

ಬ್ರಿಟೀಷರಿಂದ ಒಡೆದು ಆಳುವ ನೀತಿಯನ್ನು ಬಳುವಳಿಯಾಗಿ ಉಳಿಸಿಕೊಂಡವರು ರಾಜ್ಯದಲ್ಲಿ ದ್ವೇಷವನ್ನು ಬೆಳೆಸುತ್ತಾರೆ. ಅಂತಹವರನ್ನು ಚುನಾವಣೆಗಳಲ್ಲಾಗಲಿ, ಸಮಾಜದಲ್ಲಾಗಲಿ ನಾವು ಬೆಂಬಲಿಸಬಾರದು. ನಾವು ನಮ್ಮ ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ಇರಬೇಕು. ಮತೀಯ ದ್ವೇಷದ ಕಿಡಿಯನ್ನು ಹೊತ್ತಿಸುವವರನ್ನು ಶಾಂತಿಪ್ರಿಯ ಸಮಾಜ ಪುರಸ್ಕರಿಸಬಾರದು. ಮತ, ಧರ್ಮದ ಹೆಸರಿನಲ್ಲಿ, ಭಾಷೆ, ಬಣ್ಣದ ಹೆಸರಿನಲ್ಲಿ ಸಮಾಜಕ್ಕೆ ಬೆಂಕಿ ಹಚ್ಚುವವರನ್ನು ದೂರದಿಂದಲೇ ಗುರುತಿಸಬೇಕು.

–ನಿತ್ಯಾನಂದಸ್ವಾಮಿ

ಟೋಲ್ ಸುಲಿಗೆಯ ಅಕ್ರಮಕ್ಕೆ ಸರಕಾರವೇ ಸೂತ್ರಧಾರ

ಈ ವಾರ

ಎಸ್.ವೈ.ಗುರುಶಾಂತ್

ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಕೆಲವು ಟೋಲ್ ಗೇಟ್ ಗಳು ಅಕ್ರಮ ಸಂಗ್ರಹಣೆಯಿಂದ ಕೂಡಿದೆ ಎನ್ನುವ ಕೂಗು ಹೊಸದೇನಲ್ಲ. ಆದರೆ ಜನರ ಪ್ರತಿಭಟನೆಯನ್ನು ಕೇಳಿಸಿಕೊಳ್ಳುವ ಮತ್ತು ಅದನ್ನು ಸರಿಪಡಿಸುವ ಯಾವ ಇಚ್ಛಾಶಕ್ತಿಯೂ ರಾಜ್ಯ ಅಥವಾ ಕೇಂದ್ರ ಸರ್ಕಾರಗಳಲ್ಲಿ ಇಲ್ಲ. ಅಕ್ರಮವಾಗಿ ಟೋಲ್ ಹೆಸರಿನಲ್ಲಿ ಸಂಗ್ರಹ ಮಾಡುತ್ತಿರುವ ದೊಡ್ಡ ಹಗರಣವನ್ನು ಸುರತ್ಕಲ್ ಮತ್ತು ಆ ಪರಿಸರದ ನಾಗರಿಕರು, ವಿವಿಧ ಪ್ರಗತಿಪರ ಸಂಘಟನೆಗಳು ನಡೆಸಿದ ಹೋರಾಟದಿಂದ ಬಟ್ಟ ಬಯಲಾಗಿತ್ತು. ಹಾಗೆಯೇ, ಸುರತ್ಕಲ್ ಬಳಿಯ ಟೋಲ್ ' ವಸೂಲಿ ಅಡ್ಡಾ'ವನ್ನು ರದ್ದುಪಡಿಸಲಾಗಿತ್ತು. ಜನತೆಯ ದೀರ್ಘಕಾಲದ ಮತ್ತು ಅತ್ಯಂತ ಕಟಿಬದ್ಧ ಹೋರಾಟದ ಫಲವಾಗಿ ಅಲ್ಲಿ ಯಶಸ್ಸನ್ನು ಸಾಧಿಸಲಾಗಿತ್ತು. ಈ ಒಂದು ಕಣ್ಣು ಕೋರೈಸಿದ ಉದಾಹರಣೆಯನ್ನೇ ಗಮನದಲ್ಲಿರಿಸಿಕೊಂಡು ಕರ್ನಾಟಕ ರಾಜ್ಯದ ಮಾತ್ರವಲ್ಲ, ದೇಶದ ಅನೇಕ ಕಡೆಗಳಲ್ಲಿ ಇರುವ ಎಲ್ಲ ಟೋಲ್ ಗಳ ವಹಿವಾಟು ವ್ಯವಹಾರಗಳನ್ನು ಪರಿಶೀಲಿಸಿ ಸರಿಪಡಿಸಬೇಕಾದ ಅಗತ್ಯ ಇತ್ತು. ಆದರೆ ನಮ್ಮ ಕರ್ನಾಟಕದ ಸರ್ಕಾರವಾಗಲಿ, ಭಾರತ ಸರ್ಕಾರವಾಗಲೀ ಇದರತ್ತ ತಲೆ ಹಾಕಲಿಲ್ಲ. ಈ ಒಟ್ಟು ಪ್ರಸಂಗದಲ್ಲಿ ಕಂಡು ಬಂದ ಒಂದು ಮುಖ್ಯ ಸಂಗತಿ ಎಂದರೆ, ಈ ಟೋಲ್ ಸಂಗ್ರಹ ಎನ್ನುವುದು ಒಂದು ಬಹುದೊಡ್ಡ ಮಾಫಿಯಾ ದಂಧೆ ಎನ್ನುವುದು ಇದರಲ್ಲಿ ಬಂಡವಾಳ ಹೂಡಿದ ' ಉದ್ಯಮಿ' ಗಳಲ್ಲದೆ ಜನತೆಯಿಂದ ಚುನಾಯಿತರಾದ ಶಾಸಕರು, ಸಂಸದರು, ಸಚಿವರು ಮತ್ತು ಇದಕ್ಕೆ ಜೊತೆಗೂಡಿದ ಕೆಲವು ಗ್ಯಾಂಗಗಳು ಕೂಡ ಶಾಮಿಲು ಆಗಿರಬಹುದು ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಹಿಂದೆ ಇಂತಹ ಟೋಲ್ ಅಕ್ರಮದ ವಿರುದ್ಧ ಹೋರಾಟ ನಡೆಸಿದ ಹಿರಿಯ ವಿಚಾರವಾದಿ ಗೋವಿಂದ ಪನ್ಸಾರೆ ಯವರ ಕೊಲೆಯಲ್ಲಿ ಈ ಮಾಫಿಗಳ ಕೈವಾಡವೂ ಇಲ್ಲದಿಲ್ಲ ಎನ್ನುವ ಅನುಮಾನ ಇತ್ತು.

ಟೋಲ್ ಸಂಗ್ರಹಕ್ಕೆ ಸಂಬಂಧಿಸಿದಂತೆ ಸಂಗಾತಿ ಸೀತಾರಾಮ್ ಯೆಚೂರಿ ಅವರ ನೇತೃತ್ವದಲ್ಲಿ ರಚಿತವಾಗಿದ್ದ ಸಂಸದೀಯ ಸಮಿತಿ ನೀಡಿದ ವರದಿಯಲ್ಲಿ ಬಹು ಸ್ಪಷ್ಟವಾಗಿಯೇ ಈ ಟೋಲ್ ಹಣದ ಸಂಗ್ರಹದ ಅಗತ್ಯವೇ ಇಲ್ಲ ಎನ್ನುವುದನ್ನು ಹೇಳಿತ್ತು. ಕಾರಣ ಈಗಾಗಲೇ ಸರ್ಕಾರ ವಾಹನದ ಶುಲ್ಕಗಳು, ತೆರಿಗೆಗಳು ಅಲ್ಲದೆ ಮುಖ್ಯವಾಗಿ ಪೆಟ್ರೋಲ್, ಡೀಸೆಲ್ ಮುಂತಾದ ತೈಲದ ಮಾರಾಟದಲ್ಲಿಯೇ ಈ ಶುಲ್ಕವನ್ನು ವಸೂಲು ಮಾಡಲಾಗಿರುತ್ತದೆ ಎನ್ನುವುದನ್ನು ಅಲ್ಲಿ ತೋರಿಸಲಾಗಿತ್ತು. ಆದರೆ ಭಾರತ ಸರ್ಕಾರ ಈ ಬಗ್ಗೆ ಎಳ್ಳಷ್ಟು ಕ್ರಮಗಳನ್ನು ವಹಿಸಲಿಲ್ಲ, ವಸೂಲಿ ರದ್ದು ಪಡಿಸಲಿಲ್ಲ ಎನ್ನುವುದರಲ್ಲಿ ಈ ಲಕ್ಷಾಂತರ ಕೋಟಿ ರೂ.ಗಳ ವ್ಯವಹಾರ ಇರುವ ಅಕ್ರಮ ಹಗರಣಗಳನ್ನು ನಮಗೆ ಮನಗಾಣಿಸುತ್ತದೆ.

ಟೋಲ್ ಸಂಗ್ರಹದಲ್ಲಿ ಅಕ್ರಮಗಳು ಇರುವುದನ್ನು ಇದೇ 2023 ಜನವರಿಯಲ್ಲಿ ಸಂಸತ್ತಿಗೆ ನೀಡಿದ ಮಹಾ ಲೇಖಪಾಲರ ವರದಿ (ಕಂಟ್ರೋಲರ್ ಅಂಡ್ ಆಡಿಟ್ ಜನರಲ್ ಸಿಎ ಜಿ) ತಿಳಿಸಿದೆ.

ದಕ್ಷಿಣ ಭಾರತ ಟೋಲ್ ಘಟಕಗಳ ನಿರ್ವಹಣೆ ಕುರಿತು ಮಹಾಲೇಖಪಾಲರ ವರದಿ ಹಲವಾರು ವಿಷಯಗಳನ್ನು ವಿಷದೀಕರಿಸಿದೆ. ಇಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ 151 ಟೋಲ್ ಘಟಕಗಳಿವೆ. ಇವುಗಳಲ್ಲಿ 41ನ್ನು ವಿಶೇಷವಾಗಿ, ಪರಿಶೋಧನೆಗೆ ಆಯ್ಕೆ ಮಾಡಲಾಗಿತ್ತು. 2017–18 ರಿಂದ ಜನವರಿ 2022ರ ವರೆಗಿನ ಅವಧಿಯಲ್ಲಿ 41 ನ್ನು ಪರಿಶೋಧನೆಗೆ ಒಳಪಡಿಸಲಾಗಿತ್ತು. ಈ 41 ಘಟಕಗಳಲ್ಲಿ ನಮ್ಮ ರಾಜ್ಯದ ಎರಡು ಟೋಲ್ ಗಳು ಅಂದರೆ ಹೆಬ್ಬಾಳು, ಚಳಗೇರಿ ಸೇರಿವೆ.

ದಕ್ಷಿಣ ಭಾರತದ ಈ ಟೋಲ್ ಗಳಲ್ಲಿ ಟೋಲಿನ ನಿಯಮಗಳನ್ನು ಉಲ್ಲಂಘಿಸಿ 124.18 ಕೋಟಿ ರೂ.ಗಳ ಶುಲ್ಕ ಅಕ್ರಮವಾಗಿ ಸಂಗ್ರಹಿಸಿರುವುದನ್ನು ವರದಿ ಗುರುತಿಸಿದೆ.

ಕರ್ನಾಟಕದ ಚಿತ್ರದುರ್ಗ–ದಾವಣಗೆರೆ–ಹಾವೇರಿ ಜಿಲ್ಲೆಗಳ ನಡುವೆ ಇರುವ 132 ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಹೆಬ್ಬಾಳು, ಚಳಗೇರಿ ಟೋಲ್ ಘಟಕಗಳಲ್ಲಿ ಅಕ್ರಮವಾಗಿ ಸಂಗ್ರಹಿಸಿರುವ ಹಣ 75.95 ಕೋಟಿ, 40.26 ಕೋಟಿ ರೂಪಾಯಿಗಳು. ಯಾವ ಯಾವ ಸಂದರ್ಭಗಳಲ್ಲಿ ಟೋಲ್ ಸಂಗ್ರಹ ಮಾಡಬಾರದು ಎನ್ನುವುದನ್ನು ಟೋಲ್ ಸಂಗ್ರಹ ಹೆದ್ದಾರಿ ಪ್ರಾಧಿಕಾರ ದ 2008 ರ 4(9) ಸೆಕ್ಷನ್ ಹೀಗೆ ಹೇಳುತ್ತದೆ:

ನಾಲ್ಕು ಪಥಗಳಿಂದ ಆರು ಪಥಗಳಿಗೆ ಮೇಲ್ದರ್ಜೆಗೆ ಏರಿಸುವಾಗ ಶುಲ್ಕ ಕಡಿತ ಮಾಡಬೇಕು, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣವಾಗದೆ ಇದ್ದರೆ, ಕಾಮಗಾರಿ ಮುಗಿಯಬೇಕಿದ್ದ ದಿನಾಂಕ ಮುಗಿದ ದಿನಾಂಕದ ನಡುವಿನ ಅವಧಿಯಲ್ಲಿ ಶುಲ್ಕ ವಿಧಿಸಬಾರದು ಎಂಬ ನಿಯಮ ಇದೆ. ಆದರೆ ಇವೆಲ್ಲವನ್ನು ಧಿಕ್ಕರಿಸಲಾಗಿದೆ.

ಇಲ್ಲಿ ಬರುವ ಪ್ರಶ್ನೆ ಎಂದರೆ ಇದು ಏಕಾಏಕಿ ಕೇವಲ ಕಂಟ್ರಾಕ್ಟ್ ಪಡೆದುಕೊಂಡ ಟೋಲ್ ಸಂಗ್ರಹಕಾರರದಿಂದ ನಡೆದಿದ್ದು ಎನ್ನುವುದು ಅಪ್ಪಟ ಸುಳ್ಳು. ಹೆದ್ದಾರಿ ಪ್ರಾದಿಕಾರ ಭಾರತ ಸರ್ಕಾರದ ಅಡಿಯಲ್ಲೇ ಕಾರ್ಯನಿರ್ವಹಿಸುತ್ತದೆ. ಇಷ್ಟು ದೊಡ್ಡ ಮೊತ್ತವನ್ನು ಎಗ್ಗಿಲ್ಲದೆ ಜನ ಸಾಮಾನ್ಯರಿಂದ ಲೂಟಿ ಮಾಡುತ್ತಿರುವುದನ್ನು ಮೋದಿ ಸರ್ಕಾರದ ಭ್ರಷ್ಟತೆಯ ಹಗರಣ ಎನ್ನಬೇಕೇ ಅಥವಾ ದೇಶಪ್ರೇಮ ಎಂದು ಕೊಂಡಾಡಬೇಕೇ?

ಈಗಲಾದರೂ ಸರಕಾರ ಅದನ್ನು ತಡೆಯಬೇಕು. ರಾಜ್ಯ ಸರಕಾರವೂ ಪ್ರತಿಕ್ರಿಯಿಸಲೇಬೇಕು.





ಹಾಸನ ಜಿಲ್ಲೆ:

ಚುನಾವಣಾ ಫಲಿತಾಂಶ ಮತ್ತು ಪರಿಣಾಮ

ಹೆಚ್.ಆರ್. ನವೀನ್ ಕುಮಾರ್

ಚುನಾವಣೆಯಲ್ಲಿ ಹಾಸನ ಜಿಲ್ಲೆಯ ಜನರ ಸಂಕಷ್ಟಗಳ ಕುರಿತು, ಅವರ ಬವಣೆಗಳ ಕುರಿತು ಚರ್ಚೆಯೇ ನಡೆಯಲಿಲ್ಲ. ಬದಲಿಗೆ ಅಭ್ಯರ್ಥಿಗಳ ವ್ಯಕ್ತಿಗತ ಚರ್ಚೆಗಳಲ್ಲೇ ಇಡೀ ಚುನಾವಣೆ ಮುಗಿಯಿತು. ಹಾಸನ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಇದು ಮಲೆನಾಡು, ಅರೆಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳನ್ನು ಹೊಂದಿದೆ. ಇಲ್ಲಿ ಆಲೂಗಡ್ಡೆ, ಕಾಫಿ, ತೆಂಗು, ತಂಬಾಕು, ಮುಸುಕಿನ ಜೋಳ, ರಾಗಿ, ಶುಂಠಿ ಸೇರಿದಂತೆ ವಿವಿಧ ರೀತಿಯ ತರಕಾರಿಗಳನ್ನು ಬೆಳೆಯುತ್ತಾರೆ. ದಿನದಿಂದ ದಿನಕ್ಕೆ ಕೃಷಿ ಆಧಾಯ ಕುಸಿಯುತ್ತಿದ್ದು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರನ್ನು ಮೇಲೆತ್ತುವ ಯಾವ ಚರ್ಚೆಗಳೂ ಪ್ರಸ್ತುತ ಚುನಾವಣೆಯಲ್ಲಿ ಯಾವ ಪ್ರಮುಖ ರಾಜಕೀಯ ಪಕ್ಷಗಳಿಂದಲೂ ನಡೆಯಲಿಲ್ಲ.

ಹಾಸನ ಜಿಲ್ಲೆಯ ಜನ ರಾಜಕಾರಣವನ್ನು ಹಾಸು ಹೊದ್ದು ಮಲಗುತ್ತಾರೆ ಎಂಬ ಮಾತು ರಾಜಕೀಯ ವಲಯದಲ್ಲಿ ಆಗಾಗ ಕೇಳಿ ಬರುತ್ತಿರುತ್ತದೆ. ಮಾತ್ರವಲ್ಲದೇ ಜಿಲ್ಲೆ ಸಾಂಸ್ಕೃತಿಕವಾಗಿ ಶಿಲ್ಪಕಲೆಗಳ ತವರು ಎಂದೇ ಜಗದ್ ವಿಖ್ಯಾತಿಯಾಗಿದ್ದರೂ ಒಂದಲ್ಲಾ ಒಂದು ಕಾರಣಕ್ಕೆ ಜಿಲ್ಲೆಯ ರಾಜಕೀಯ ವಿಷಯಗಳು ಮಾತ್ರ ರಾಜ್ಯ ಮತ್ತು ರಾಷ್ಟ್ರಮಟ್ಟದ ಗಮನವನ್ನು ಸೆಳೆಯುತ್ತಿರುತ್ತವೆ. ಇದಕ್ಕೆ ಹಲವು ಕಾರಣಗಳಿವೆ. ಅದರಲ್ಲಿ ಒಂದು ಕಾರಣ, ಕನ್ನಡದ ಏಕೈಕ ಪ್ರಧಾನಿ ಎಚ್.ಡಿ.ದೇವೇಗೌಡರ ರಾಜಕೀಯ ತವರು ಈ ಹಾಸನ ಜಿಲ್ಲೆ.

2023 ಮೇ ನಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣೆಯ ಕಾವು ರಾಜ್ಯಾದ್ಯಂತ ಏರುತ್ತಿರುವಾಗಲೇ ಜಿಲ್ಲೆಯಲ್ಲಿಯೂ ಇದರ ಕಾವು ಹೆಚ್ಚಾಗಿತ್ತು. ಜಿಲ್ಲೆಯಲ್ಲಿ 7 ವಿಧಾನಸಭಾ ಕ್ಷೇತ್ರಗಳಿದ್ದು ಹಿಂದಿನ ಚುನಾವಣೆಯಲ್ಲಿ 6 ರಲ್ಲಿ ಜೆಡಿಎಸ್ ಮತ್ತು ಒಂದು ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಈ ಬಾರಿಯ ಹಾಸನ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದ ಪ್ರೀತಂ ಜೆ.ಗೌಡ ಅವರನ್ನು ಸೋಲಿಸುವ ಅಭ್ಯರ್ಥಿ ಯಾರಾಗಬೇಕು ಎಂಬ ಚುನಾವಣಾ ಚರ್ಚೆ ಜಿಲ್ಲೆಯಲ್ಲಿ ತಾರಕಕ್ಕೇರಿ ಪ್ರತಿ ದಿನ ಮಾಧ್ಯಮಗಳಲ್ಲಿ ಮತ್ತು ಜನರ ಮಾತುಗಳಲ್ಲಿ ರಾಜ್ಯದ ಗಮನವನ್ನ ಇತ್ತಕಡೆ ಸೆಳೆಯಿತು.

ಈ ನಡುವೆ ಚುನಾವಣೆಯಲ್ಲಿ ಜಿಲ್ಲೆಯ ಜನರ ಸಂಕಷ್ಟಗಳ ಕುರಿತು, ಅವರ ಬವಣೆಗಳ ಕುರಿತು ಚರ್ಚೆಯೇ ನಡೆಯಲಿಲ್ಲ. ಬದಲಿಗೆ ಅಭ್ಯರ್ಥಿಗಳ ವ್ಯಕ್ತಿಗತ ಚರ್ಚೆಗಳಲ್ಲೇ ಇಡೀ ಚುನಾವಣೆ ಮುಗಿಯಿತು. ಹಾಸನ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಇದು ಮಲೆನಾಡು, ಅರೆಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳನ್ನು ಹೊಂದಿದೆ. ಇಲ್ಲಿ ಆಲೂಗಡ್ಡೆ, ಕಾಫಿ, ತೆಂಗು, ತಂಬಾಕು, ಮುಸುಕಿನ ಜೋಳ, ರಾಗಿ, ಶುಂಠಿ ಸೇರಿದಂತೆ ವಿವಿಧ ರೀತಿಯ ತರಕಾರಿಗಳನ್ನು ಬೆಳೆಯುತ್ತಾರೆ. ದಿನದಿಂದ ದಿನಕ್ಕೆ ಕೃಷಿ ಆಧಾಯ ಕುಸಿಯುತ್ತಿದ್ದು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇವರನ್ನು ಮೇಲೆತ್ತುವ ಯಾವ ಚರ್ಚೆಗಳು ಪ್ರಸ್ತುತ ಚುನಾವಣೆಯಲ್ಲಿ ಯಾವ ಪ್ರಮುಖ ರಾಜಕೀಯ ಪಕ್ಷಗಳಿಂದಲೂ ನಡೆಯಲಿಲ್ಲ. ಜಿಲ್ಲೆಯಲ್ಲಿ ಕಾಡಾನೆ ಸೇರಿದಂತೆ ಕಾಡುಪ್ರಾಣಿಗಳ ಹಾವಳಿಯಿಂದಾಗಿ ಹತ್ತಾರು ಜನ ಪ್ರಾಣ ಕಳೆದುಕೊಂಡಿದ್ದಾರೆ ಮಾತ್ರವಲ್ಲದೆ ಸಾವಿರಾರು ಎಕರೆಗಳಲ್ಲಿ ಬೆಳೆ ನಾಶವೂ ಸಂಭವಿಸಿದೆ.

ಬೆಂಗಳೂರಿನಿಂದ ಕೇವಲ 180 ಕಿಲೋಮೀಟರ್ ದೂರವಿದ್ದರೂ, ಪ್ರಮುಖ ಬಂದರು ಪ್ರದೇಶ ಮಂಗಳೂರು ಮತ್ತು ರಾಜಧಾನಿ ಬೆಂಗಳೂರಿನ ನಡುವಿನ ಸಂಪರ್ಕ ಕೊಂಡಿಯಾಗಿದ್ದರೂ ಹಾಸನ ಜಿಲ್ಲೆ ಮಾತ್ರ ಕೈಗಾರಿಕಾ ಅಭಿವೃದ್ದಿಯಲ್ಲಿ ಇದುವರೆಗೂ ಯಾವ ಪ್ರಗತಿಯನ್ನೂ ಕಾಣಲಿಲ್ಲ. ಈ ವಿಚಾರಗಳು ಜಿಲ್ಲೆಯ ರಾಜಕಾರಣದಲ್ಲಿ ಗಮನಾರ್ಹ ಚರ್ಚೆಯಾಗದಿರುವುದು ಕೂಡ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜನರ ವಿಚಾರಗಳು ಪ್ರಧಾನ ಸ್ಥಾನವನ್ನು ಪಡೆಯಲಿಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಇವೆಲ್ಲವುಗಳ ನಡುವೆ ಚುನಾವಣೆ ಶಾಂತಿಯುತವಾಗಿ ನಡೆದಿದೆ. ಈಗಿನ ರಾಜಕೀಯ ಬಲಾ ಬಲ ಮತ್ತು ಅದರ ಮುಂದಿನ ಪರಿಣಾಮಗಳ ಕುರಿತು ಸ್ವಲ್ಪ ಗಮನ ಹರಿಸೋಣ.

ಭದ್ರಕೋಟೆಯಲ್ಲಿ ಎರಡು ಸ್ಥಾನ ಕಳೆದಕೊಂಡ ಜೆಡಿಎಸ್

ಜೆಡಿಎಸ್ ತನ್ನ ಭದ್ರಕೋಟೆಯಾದ ಹಾಸನ ಜಿಲ್ಲೆಯಲ್ಲಿ ಎರಡು ಸ್ಥಾನಗಳನ್ನು ಕಳೆದುಕೊಂಡು ನಾಲ್ಕು ಕ್ಷೇತ್ರಗಳಿಗೆ ತೃಪ್ತಿಪಟ್ಟಿದ್ದರೆ, ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಕಮಲ ಅರಳಿದೆ. ಕಾಂಗ್ರೆಸ್ ಪಕ್ಷ ಖಾತೆ ತೆರೆದಿದೆ. ಆದರೆ ಕಾಂಗ್ರೆಸ್ ನಾಯಕರು ತಮ್ಮ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಬಾರದ ಕಾರಣ ಹಾಗೂ ಒಂದು ಕ್ಷೇತ್ರದಲ್ಲಿ ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡದ ಹಿನ್ನಲೆಯಲ್ಲಿ ಕೂದಲೆಳೆ ಅಂತರದಲ್ಲಿ ನಾಲ್ಕು ಸ್ಥಾನಗಳನ್ನು ಕಳೆದಕೊಂಡಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ದಳಪತಿಗಳ ಹಿಡಿತದಲ್ಲಿದ್ದ ಹಾಸನ ಜಿಲ್ಲೆಯಲ್ಲಿ ಈ ಭಾರಿಯ ಚುನಾವಣೆ ಅಗ್ನಿಪರೀಕ್ಷೆಯಾಗಿತ್ತು. ಕಳೆದ ಬಾರಿ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಆರು ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕರು ಆಯ್ಕೆಯಾಗಿದ್ದರು. ಆದರೆ ಈ ಬಾರಿ ಆರರಲ್ಲಿ ಎರಡು ಕ್ಷೇತ್ರಗಳನ್ನು ಕಳೆದುಕೊಂಡಿದೆ. ಜಿಲ್ಲಾ ಕೇಂದ್ರ ಹಾಸನ ಹೊರತುಪಡಿಸಿ ಬೇಲೂರು, ಹೊಳೆನರಸೀಪುರ, ಸಕಲೇಶಪುರ–ಆಲೂರು–ಕಟ್ಟಾಯ, ಅರಕಲಗೂಡು, ಅರಸೀಕೆರೆ, ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಗಳಲ್ಲಿ ಆರು ಮಂದಿ ಜೆಡಿಎಸ್ ಪಕ್ಷದಿಂದ ಆಯ್ಕೆಯಾಗಿದ್ದರು.

> **ರಾಜ್ಯದಲ್ಲಿ ಕೋಮುವಾದಿ, ಭ್ರಷ್ಟಾಚಾರಿ, ಜನವಿರೋಧಿ ಬಿಜೆಪಿಯನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದ್ದರೂ ಜಿಲ್ಲೆಯಲ್ಲಿ ಮಾತ್ರ ಹಾಲಿ ಬಿಜೆಪಿ ಶಾಸಕ ಪ್ರೀತಂಗೌಡರನ್ನು ಸೋಲಿಸಿ ಬದಲಿಗೆ ಎರಡು ಕ್ಷೇತ್ರದಲ್ಲಿ ಬಿಜೆಪಿಗೆ ಮತ ನೀಡಿದ್ದಾರೆ, ಇದರ ಅಪಾಯವನ್ನು ಅರ್ಥಮಾಡಿಕೊಳ್ಳಬೇಕಿದೆ.**

ಸಕಲೇಶಪುರ–ಆಲೂರು ಕಟ್ಟಾಯ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಸಿಮೆಂಟ್ ಮಂಜು ಗೆದ್ದಿದ್ದಾರೆ, ಅರಸೀಕೆರೆಯಲ್ಲಿ ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಪಕ್ಷ ಸೇರಿದ್ದ ಕೆ.ಎಂ.ಶಿವಲಿಂಗೇಗೌಡ ನಾಲ್ಕನೇ ಭಾರಿಗೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ದಾಖಲೆ ಬರೆದಿದ್ದಾರೆ. ಕಳೆದ ನಾಲ್ಕು ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ತೀವ್ರ ಕಳಪೆ ಸಾಧನೆ ಮಾಡಿತ್ತು. ಆದರೆ, ಈ ಬಾರಿ ಒಬ್ಬರೇ ಶಾಸಕರು ಆಯ್ಕೆಯಾಗಿದ್ದರೂ, ಮೂವರು ಅಭ್ಯರ್ಥಿಗಳು ತೀರ ಕಡಿಮೆ ಅಂತರದಲ್ಲಿ ಪರಾಭವಗೊಂಡಿದ್ದಾರೆ. ಇದಕ್ಕೆ ಕಾರಣ ರಾಜ್ಯಮಟ್ಟದ ನಾಯಕರಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಟಿಕೆಟ್ ಘೋಷಣೆ ನಂತರ ತಮ್ಮ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಬಾರದಿರುವುದು ಎಂಬುದು ಕಾಂಗ್ರೆಸ್ ವಲಯದ ಮಾತು.

ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಮಾಜಿ ಸಚಿವ ಎಚ್.ಡಿ.ರೇವಣ್ಣ ವಿರುದ್ದ ಸ್ಪರ್ಧಿಸಿ 84,951 ಮತಗಳನ್ನು ಪಡೆಯುವ ಮೂಲಕ ಕೇವಲ 3252 ಮತಗಳಿಂದ ಸೋಲು ಕಂಡಿದ್ದಾರೆ.

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಎ.ಗೋಪಾಲಸ್ವಾಮಿ ಎರಡು ಬಾರಿ ಜೆಡಿಎಸ್ನಿಂದ ಶಾಸಕರಾಗಿದ್ದ ಸಿ.ಎನ್.ಬಾಲಕೃಷ್ಣ ವಿರುದ್ಧ ಸ್ಪರ್ಧೆ ಮಾಡಿ 79,023 ಮತಗಳನ್ನು ಪಡೆದು 5648 ಮತಗಳ ಅಂತರದಿಂದ ಸೋಲುಂಡಿದ್ದಾರೆ.

ಬೇಲೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹಿರಿಯ ಮುಖಂಡ ಬಿ.ಶಿವರಾಂ ಕಣಕ್ಕಿಳಿದಿದ್ದು, 55,835 ಮತ ಪಡೆದು 7,736 ಮತಗಳ ಅಂತರದಲ್ಲಿ ಬಿಜೆಪಿ ಅಭ್ಯರ್ಥಿ ಎಚ್.ಕೆ.ಸುರೇಶ್ ವಿರುದ್ಧ ಸೋಲು ಅನುಭವಿಸಿದ್ದಾರೆ. ಬಿ.ಶಿವರಾಂ ಪರ ಯಾವ ಕಾಂಗ್ರೆಸ್ ಮುಖಂಡರು ಬಂದು ಮತಯಾಚನೆ ಮಾಡದಿರುವುದು ಇದಕ್ಕೆ ಕಾರಣವಾಗಿದೆ. ಮತ್ತೊಂದೆಡೆ ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ಸಿದ್ದರಾಮಯ್ಯನವರ ಆಪ್ತ ಎಂ.ಟಿ.ಕೃಷ್ಣೇಗೌಡ ಕಾಂಗ್ರೆಸ್ ಪಕ್ಷದಿಂದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಅವರ ಬದಲು ಡಿಕೆಶಿ ಆಪ್ತ ಶ್ರೀಧರ್ಗೌಡಗೆ ಟಿಕೆಟ್ ನೀಡಿದ್ದು ಕೃಷ್ಣೇಗೌಡ ಪಕ್ಷೇತರರಾಗಿ ಸ್ಪರ್ಧೆ ಮಾಡಿ, 55,038 ಮತಗಳನ್ನು ಪಡೆದು ಜೆಡಿಎಸ್ನ ಅಭ್ಯರ್ಥಿ ಎ.ಮಂಜು ವಿರುದ್ದ 19,605 ಮತಗಳಿಂದ ಪರಾಭವಗೊಂಡಿದ್ದಾರೆ. ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಹಾಸನ: ಇದೆಲ್ಲದರ ನಡುವೆ ಇಡೀ ರಾಜ್ಯದ ಗಮನ ಸೆಳೆದಿದ್ದ ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಅಭ್ಯರ್ಥಿ ಎಚ್.ಪಿ.ಸ್ವರೂಪ್ಪಕಾಶ್ ಬಿಜೆಪಿಯ ಹಾಲಿ ಶಾಸಕ ಪ್ರೀತಂ ಜೆ ಗೌಡ ವಿರುದ್ದ 85,176 ಮತಗಳನ್ನು ಪಡೆದು 7854 ಮತಗಳ ಅಂತರದಿಂದ ಗೆಲುವಿನ ನಗೆ ಬೀರಿದ್ದು, ಹಾಸನ ಜಿಲ್ಲಾ ಕೇಂದ್ರವನ್ನು ಜೆಡಿಎಸ್ ಮತ್ತೆ ತನ್ನ ತೆಕ್ಕೆ ತೆಗೆದುಕೊಂಡಿದೆ.

ಕಾಂಗ್ರೆಸ್ ನಾಯಕರ ಪ್ರಚಾರದ ಕೊರತೆ ಹಾಗೂ ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡದಿರುವ ಸ್ವಯಂಕೃತ ತಪ್ಪಿನಿಂದ ನಾಲ್ಕು ವಿಧಾನಸಭಾ ಕ್ಷೇತ್ರಗಳನ್ನು ಕಳೆದುಕೊಂಡಿದೆ. ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಯಾವ ರೀತಿ ಪಕ್ಷ ಸಂಘಟನೆ ಮಾಡುತ್ತದೋ ಹಾಗೂ ಕಾಂಗ್ರೆಸ್ ಪಕ್ಷ ಕಡಿಮೆ ಅಂತರದಲ್ಲಿ ಸೋತಿರುವ ಕ್ಷೇತ್ರಗಳನ್ನು ಪಡೆದುಕೊಳ್ಳಲು ಏನೆಲ್ಲಾ ಯೋಜನೆಗಳನ್ನು ನೀಡುತ್ತಾರೋ ಎಂಬುದನ್ನು ಕಾದುನೋಡಬೇಕಿದೆ.

ಕೋಮುವಾದಿ ಚಟುವಟಿಕೆಗಳ ಮೂಲಕ ಲಾಭ ಪಡೆದ ಬಿಜೆಪಿ

ಹಾಸನ ಜಿಲ್ಲೆ ಎಂದಿಗೂ ಕೋಮುವಾದಿಗಳ ಅಟ್ಟಹಾಸಕ್ಕೆ ಅವಕಾಶ ಮಾಡಿಕೊಡದೇ ಕೋಮುಸೌಹಾರ್ದತೆಯನ್ನು ಮೆರೆಯುತ್ತಲೇ ಬಂದಿದೆ. ಆದರೆ ಕಳೆದ ಕೆಲವು ವರ್ಷಗಳಿಂದ ಬೇಲೂರು ಮತ್ತು ಸಕಲೇಶಪುರ ಕ್ಷೇತ್ರಗಳಲ್ಲಿ ನಡೆಸಿದ ಕೋಮುವಾದಿ ಚಟುವಟಿಕೆಗಳು ಇಂದು ಈ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಅವಕಾಶವನ್ನು ಮಾಡಿಕೊಟ್ಟಿದೆ. ಮುಖ್ಯವಾಗಿ ಸಕಲೇಶಪುರದಲ್ಲಿ ಗೋರಕ್ಷಣೆಯ ಹೆಸರಿನಲ್ಲಿ ನಡೆದ ದಾಳಿಗಳು ಮತ್ತು ಮಂಗಳೂರಿನ ಹಿಂದುತ್ವ ಕೋಮುವಾದದ ಚಟುವಟಿಕೆಗಳ ಪ್ರಭಾವದಿಂದಾಗಿ ಇಲ್ಲಿ ಬಿಜೆಪಿ ಮತಗಳನ್ನು ಕ್ರೋಡೀಕರಿಸಲು ಸಾಧ್ಯವಾಗಿದೆ. ಮತ್ತೊಂದೆಡೆ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿಯು ಕೂಡ ಚನ್ನಕೇಶವಸ್ವಾಮಿ ದೇವಾಲಯದ ಜಾತ್ರೆಯ ಸಂದರ್ಭದಲ್ಲಿ ಮುಸ್ಲಿಂ ಮೌಲ್ವಿ ತೇರಿಗೆ ಪ್ರಾರ್ಥನೆ ಸಲ್ಲಿಸಬಾರದು ಮತ್ತು ಜಾತ್ರೆಗಳಲ್ಲಿ ಮುಸ್ಲಿಮರು ವ್ಯಾಪಾರ ಮಾಡಬಾರದು ಎಂಬ ಪ್ರಚಾರದ ಜೊತೆಗೆ ಚಿಕ್ಕಮಗಳೂರಿನಲ್ಲಿರುವ ಬಾಬಾಬುಡನ್ ದರ್ಗಾದ ವಿಚಾರದಲ್ಲಿ ಕೋಮುವಾದಿಗಳು ದತ್ತಮಾಲೆ ಅಭಿಯಾನವನ್ನು ನಡೆಸಿದ್ದು ಹಾಗೂ ಇಲ್ಲಿಯ ಬಿಜೆಪಿ ಅಭ್ಯರ್ಥಿ ಸತತವಾಗಿ ಸೋಲುತ್ತಿರುವುದರ ಅನುಕಂಪ ಇವೆಲ್ಲವೂ ಸೇರಿ ಇಲ್ಲಿಯೂ ಬಿಜೆಪಿ ಅಭ್ಯರ್ಥಿ ಗೆಲ್ಲುವಂತಾಗಿದೆ.

ರಾಜ್ಯದಲ್ಲಿ ಕೋಮುವಾದಿ, ಭ್ರಷ್ಟಾಚಾರಿ, ಜನವಿರೋಧಿ ಬಿಜೆಪಿಯನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದ್ದರೂ ಜಿಲ್ಲೆಯಲ್ಲಿ ಮಾತ್ರ ಹಾಲಿ ಬಿಜೆಪಿ ಶಾಸಕ ಪ್ರೀತಂಗೌಡರನ್ನು ಸೋಲಿಸಿ ಬದಲಿಗೆ ಎರಡು ಕ್ಷೇತ್ರದಲ್ಲಿ ಬಿಜೆಪಿಗೆ ಮತ ನೀಡಿದ್ದಾರೆ, ಇದರ ದೂರಗಾಮಿ ಅಪಾಯವನ್ನು ಅರ್ಥಮಾಡಿಕೊಳ್ಳಬೇಕಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ, ನಂ.40/5,
2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ: 080–22234369
ಫೋನ್: 9448578021, 9483966467

ಕಾಯಕ, ದಾಸೋಹಗಳ ನಾಡಿನಲ್ಲಿ ಭಾವೈಕ್ಯದ ಹೊನಲು



"ನಾ ಹಿಂದೂ ಹೈ । ನಾ ಮುಸ್ಲಮಾನ್ ಹೈ । ಹಮ್ ಇನ್ಸಾನ್ ಕೀ ಔಲಾದ್ ಹೈ । ಇನ್ಸಾನ್ ಬನೇಂಗೇ"

ಎಂಬ ಹಳೆಯ ಹಾಡೊಂದು ಎಲ್ಲೆಡೆ ಅನುರಣಿಸತೊಡಗಿತ್ತು. ಊರಿನ ನಾಲ್ಕು ರಸ್ತೆ ಸೇರುವ ಜಾಗದಲ್ಲಿ ಮಹಿಳೆಯರು, ಮಕ್ಕಳು, ರೈತರು, ಶಿಕ್ಷಕರು, ಹೋರಾಟಗಾರರು ಎಲ್ಲೆಡೆಯಿಂದ ದಂಡಿ ದಂಡಿಯಾಗಿ ಬಂದು ಸೇರ ತೊಡಗಿದರು. ಅಂಗನವಾಡಿ ಅಕ್ಕಂದಿರಂತೂ ಬಣ್ಣ ಬಣ್ಣದ ದಿರುಸಿನೊಂದಿಗೆ ಕಲಕಲ ಮಾತನಾಡುತ್ತ ಜನರನ್ನು ಸಾಲಾಗಿ ನಿಲ್ಲಿಸತೊಡಗಿದರು. ಆಶಾ ಅಕ್ಕಂದಿರು ಘೋಷಣೆ ಕೂಗಲು ಸಿದ್ಧರಾಗಿ ನಿಂತಿದ್ದರೆ, ಊರಿನ ಪ್ರಗತಿಪರರು ಮುಂದೆ ನಿಂತು ಮೆರವಣಿಗೆಯ ಮಾರ್ಗದರ್ಶನ ಮಾಡುತ್ತಿದ್ದರು. ತರುಣ-ತರುಣಿಯರು "ನಮ್ಮಲ್ಲಿಲ್ಲ ಹಿಂದೂ ರಕ್ತ, ನಮ್ಮಲ್ಲಿಲ್ಲ ಮುಸ್ಲಿಂ ರಕ್ತ, ನಮ್ಮಲ್ಲಿಲ್ಲ ಕ್ರೈಸ್ತ ರಕ್ತ, ನಮ್ಮಲ್ಲಿಲ್ಲ ದಲಿತ ರಕ್ತ, ನಮ್ಮಲ್ಲಿಲ್ಲ ಲಿಂಗಾಯತ ರಕ್ತ, ನಮ್ಮಲ್ಲಿರುವುದು ಒಂದೇ ರಕ್ತ, ಅದುವೇ ಮಾನವ ಕೆಂಪು ರಕ್ತ, ಅದುವೇ ಮಾನವ ಕೆಂಪು ರಕ್ತ" ಶರಣ-ಸೂಫಿ-ಸಂತ ಸಮಾವೇಶ ಚಿರಾಯುವಾಗಲಿ ಎಂಬ ಘೋಷಣೆ ಮೊಳಗಿಸತೊಡಗಿದರು. ಈ ದೃಶ್ಯ ಎಲ್ಲಿಯದು ಎಂಬ ಕುತೂಹಲ ಹುಟ್ಟುವುದು ಸಹಜ. ಇದು ಬೀದರ ತಾಲೂಕಿನ ಚಿಟಗುಪ್ಪಾ ನಗರದಲ್ಲಿ ದಿನಾಂಕ 7-8-23 ರಂದು ಸೌಹಾರ್ದ ಕರ್ನಾಟಕ ವೇದಿಕೆಯು "ಶರಣ-ಸೂಫಿ-ಸಂತ ಸಮಾವೇಶ" ನಿಮಿತ್ಯ ಹಮ್ಮಿಕೊಂಡಿದ್ದ ಸೌಹಾರ್ದ ನಡಿಗೆಯಲ್ಲಿ ಕಂಡು ಬಂದ ದೃಶ್ಯವಿದು.

ಕರ್ನಾಟಕದ ಹಣೆಮಣಿಯಂತಿರುವ ಬೀದರ ಧರ್ಮ ಸಮನ್ವಯದ ಪ್ರಯೋಗ ಭೂಮಿ. ಹಲವು ಮತ, ಪಂಥ, ಧರ್ಮಿಯರು ಕೂಡಿ ಬಾಳಿದ ಸಾಮರಸ್ಯದ ನೆಲವಿದು. ಇಂಥ ನೆಲದಲ್ಲಿ ಧರ್ಮ ದ್ವೇಷವನ್ನು ಬಿತ್ತಲು ಬಿಡುವುದಿಲ್ಲ ಎಂಬ ಸಂದೇಶವನ್ನು ನೀಡಲೆಂದು ಮತ್ತು ಕೂಡಿ ಬಾಳುವುದರಲ್ಲಿರುವ ಜೀವನ ಸ್ವಾರಸ್ಯವನ್ನು ಎತ್ತಿ ಹಿಡಿಯಲೆಂದು ಸ್ಥಳೀಯರು ಇಂಥದ್ದೊಂದು ಅಪರೂಪದ ಕಾರ್ಯಕ್ರಮ ಆಯೋಜಿಸಿದ್ದರು. ಮೆರವಣಿಗೆಯು ನಗರದ ಮುಖ್ಯ ರಸ್ತೆಗಳನ್ನು ಹಾದು, ನಾಂದೇಡಿ ಮಹೆಮ್ಮೋದ ಗಾರ್ಡನ್ ಫಂಕ್ಷನ್ ಹಾಲ್ ತಲುಪಿತು.

ವಚನ ಗಾಯನದೊಂದಿಗೆ ಸಮಾವೇಶ ಪ್ರಾರಂಭವಾಯಿತು. ನಂತರ ಸೌಹಾರ್ದ ಸಸಿಗೆ ನೀರೆರೆಯುದರೊಂದಿಗೆ ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು. ಉದ್ಘಾಟನೆ ಮಾಡಿದ ಮೀನಾಕ್ಷಿ ಬಾಳಿಯವರು ಬಸವ ನಾಡಿನ ದಾರ್ಶನಿಕ ಅನುಸಂಧಾನವನ್ನು ಹೇಳುತ್ತ, ಕಲ್ಯಾಣ ಕರ್ನಾಟಕವು ಹಲವು ಮತ-ಪಂಥಗಳ ಪ್ರಯೋಗ ಭೂಮಿ. ಇಲ್ಲಿ ಸೂಫಿಗಳೊಂದಿಗೆ ಶರಣ ತತ್ವಗಳ ಕೊಡುಕೊಳುವಿಕೆ ನಡೆದಿದೆ. ಆದ್ದರಿಂದ ಸಂತರು ಮತ್ತು ಸೂಫಿಗಳ ತೋರುಗದ್ದುಗೆಗಳು ಜೊತೆ ಜೊತೆಯಾಗಿ ಪೂಜೆಗೊಳ್ಳುತ್ತಿವೆ. ಸ್ಥಳೀಯ ಕ್ರೈಸ್ತರು ಇತರ ಧರ್ಮಿಯರಿಗೆ ಕೇಕ್ ಮಾಡುವುದನ್ನು ಕಲಿಸಿದ್ದಾರೆ. ಹುಟ್ಟು ಹಬ್ಬದ ದಿನಾಚರಣೆಗಳು ಅವರದೇ ಕೊಡುಗೆ. ರಮಜಾನ್, ಎಳ್ಳಮಾಸೆ, ಕ್ರಿಸ್‌ಮಸ್, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಕೂಡಿಯೇ ಮಾಡುತ್ತಾರೆ. ಧರ್ಮಗಳು ಖಾಸಗಿ ವಿಷಯವಾದರೆ ವಾಸ್ತವ ಬದುಕು ಸಾರ್ವಜನಿಕವಾಗಿದೆ. ಹೀಗಾಗಿ ಹುಟ್ಟು, ಸಾವು, ಮದುವೆ, ಸೀಮಂತ, ಜಾತ್ರೆ, ಉತ್ಸವಗಳನ್ನು ಪರಸ್ಪರ ಕರಳು ಬಳ್ಳಿಯಲ್ಲಿ ಬೆಸೆದು ಕೊಂಡಿವೆ ಎಂದು ಉದಾಹರಣೆಗಳೊಂದಿಗೆ ವಿವರಿಸಿದರು. ನಂತರ ಅತಿಥಿಗಳಾಗಿದ್ದ ಡಾ. ಎಂ.ಎಂ. ಖಾದ್ರಿ ಅವರು ಶರಣತ್ವ ಎನ್ನುವುದು ಸೂಫಿತ್ವದ ಇಸ್ಲಾಮಿಕ್ ರೂಪ. ಆದ್ದರಿಂದ ನಾವುಗಳು ಕೋಮುವಾದಿಗಳ ಸುಳ್ಳು ಸುದ್ದಿಗೆ ಕಿವಿ ಕೊಡಬಾರದು. ಅಚಲವಾದ ಭ್ರಾತೃತ್ವ ನಮ್ಮದು. ಅದನ್ನು ಹಾಳು ಮಾಡಲು ನಾವು ಬಿಡೆವು ಎಂದರು. ಇನ್ನೋರ್ವ ಅತಿಥಿಗಳಾಗಿದ್ದ ಪಾಲ್ ಮಧುಕರ್ ಅವರು ಮಾತನಾಡುತ್ತ ದಯೆಯೇ ಧರ್ಮದ ಮೂಲವೆಂದು ಶರಣರು ಹೇಳಿದ ತತ್ವಗಳನ್ನು ಕ್ರೈಸ್ತರು ವಾಸ್ತವದಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ. ಧರ್ಮಗಳ ಕೆಲಸ ಒಡೆಯುವುದಲ್ಲ, ಕಟ್ಟುವುದು ಎಂದು ಸಾರಿದರು. ನಂತರ ರಾಷ್ಟ್ರೀಯ ಬೌದ್ಧ ಮಹಾಸಭಾದ ಮುಖ್ಯಸ್ಥರಾದ ಮಿಲಿಂದ್ ಗುರೂಜಿಯವರು ಬುದ್ಧನ ಕರುಣೆ ಮಾತ್ರ ಜಗತ್ತನ್ನು ಕೋಮುವಾದಿ, ಭಯೋತ್ಪಾದಕರಿಂದ ರಕ್ಷಿಸುತ್ತದೆ. ನಾವು ಎಲ್ಲ ಧರ್ಮಿಯರು ಕೂಡಿ ಬಾಳುವ ಮೂಲಕವೇ ಧರ್ಮಾಂಧರನ್ನು ಹಿಮ್ಮೆಟ್ಟಿಸಬೇಕು ಎಂದರು. ನಂತರ ಮಕ್ಕಳು ಸಾಮರಸ್ಯ ಸಾರುವ ಸಂವಿಧಾನದ ಮಹತ್ವ ತಿಳಿಸುವ ರೂಪಕವೊಂದನ್ನು ಪ್ರದರ್ಶಿಸಿದರು. ನಂತರ ಹೋರಾಟಗಾರ್ತಿ ಕೆ. ನೀಲಾ ಅವರು ಬಂಡವಾಳಶಾಹಿಗಳು ತಮ್ಮ ಸ್ವಾರ್ಥಕ್ಕಾಗಿ ಧರ್ಮ ಜಗಳ ಮತ್ತು ಕೋಮುದ್ವೇಷ ಬಿತ್ತುತ್ತಾರೆ. ಅದಕ್ಕೆ ನಾವು ಬಲಿಯಾಗಬೇಕಿಲ್ಲ ಎಂದರು.

ಕೊನೆಗೆ ನೇತೃತ್ವ ವಹಿಸಿದ್ದ ಮ.ನಿ.ಪ್ರ ಕೋರಣೇಶ್ವರ ಮಹಾಸ್ವಾಮಿಗಳು ಸಾಮರಸ್ಯ ಎನ್ನುವುದು ನಮ್ಮ ಜನರಿಗೆ ಹೊಸದಾಗಿ ಹೇಳಬೇಕಿಲ್ಲ. ಶತಶತಮಾನಗಳಿಂದ ಅದನ್ನು ಬದುಕುತ್ತಲೆ ಬರುತ್ತಿದ್ದಾರೆ. ದುಡಿಯುವವರಿಗೆ ಧರ್ಮಕ್ಕಿಂತ ಬದುಕು ಮುಖ್ಯ. ವಾಸ್ತವ ಬದುಕೇ ಎಲ್ಲಕ್ಕಿಂತ ದೊಡ್ಡ ಐಕ್ಯತೆ ಧರ್ಮ. ಅಂಥ ಮಾನವ ಧರ್ಮವನ್ನು ಎತ್ತಿ ಹಿಡಿಯೋಣ, ಕೋಮುವಾದಿಗಳನ್ನು ಹಿಮ್ಮೆಟಿಸೋಣ ಎಂದು ಕರೆ ಕೊಟ್ಟರು. ಸಂಗಮೇಶ ಜವಾದಿ ಕಾರ್ಯಕ್ರಮ ನಿರೂಪಿಸಿದರೆ, ವೇದಿಕೆಯ ಸಂಚಾಲಕರಾದ ಡಾ. ಪ್ರಭು ಖಾನಾಪೂರೆ, ಮಹಾರುದ್ರಪ್ಪ ಅಣದೂರ, ಮಾಸಲದಾರ್, ಅಂಬುಬಾಯಿ ಮಾಳಗೆ, ರೇಷ್ಮಾ ಕುಂದನ್, ಜ್ಞಾನದೇವಿ, ಇಸಾ ಬೇಗಂ, ಸಿದ್ರಾಮಪ್ಪಾ ಗೊಂದಳೆ, ಪ್ರಭು ಸಂತೋಷಕರ್, ಚಂದ್ರಶೇಖರ ತಂಗಾ, ಬಸವರಾಜ್ ಮಂಕಲ್, ಭೀಮಶೆಟ್ಟಿ ವಡ್ಡನಕೇರಾ ಮುಂತಾದವರು ಉಪಸ್ಥಿತರಿದ್ದರು. ಕೊನೆಗೆ ಮೇರಿ ಮಾರ್ಗರೇಟ್ ಅವರು ಅರ್ಥಪೂರ್ಣವಾದ ವಂದನಾರ್ಪಣೆ ಮಾಡಿದರು. ಪ್ರೀತಿಯ ಗಾಳಿ ಬೀಸುತ್ತಿದೆ ಎಂಬ ಹಾಡಿನೊಂದಿಗೆ ಸ್ನೇಹ ಸಂದೇಶ ನೀಡಿ ಕಾರ್ಯಕ್ರಮ ಸಂಪನ್ನಗೊಳಿಸಲಾಯಿತು.

ಈಗ ಬೀದರಿನಲ್ಲಿ ಎಲ್ಲಿ ನೋಡಿದಲ್ಲಿ ಸಾಮರಸ್ಯದ ಸಂದೇಶಗಳು ಹರಿದಾಡುತ್ತಿವೆ. ದಿನಾಂಕ 16-8-23ರಂದು ಬಸವಕಲ್ಯಾಣದಲ್ಲಿ "ಶರಣ-ಸೂಫಿ-ಸಂತ ಸಮಾವೇಶ ಅಣಿ ನೆರೆಸಲಾಗಿತ್ತು. "ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯಾ. ಇಂವ ನಮ್ಮವ ಇಂವ ನಮ್ಮವ ಎಂದೆನಿಸಯ್ಯ ನಮ್ಮ ಮನೆಯ ಮಗನೆಂದಿಸಯ್ಯಾ ಕೂಡಲ ಸಂಗಮದೇವಾ" ಎಂಬ ಜಾಗತಿಕ ಭ್ರಾತೃತ್ವ ಸಾರಿದ ಮೊದಲ ಪಾರ್ಲಿಮೆಂಟ್ ನಡೆಸಿದ ಕಾಯಕ ಜೀವಿಗಳ ಕ್ರಾಂತಿ ನೆಲದಲ್ಲಿ ಎಲ್ಲ ಧರ್ಮದ ಬಾಂಧವರು ಸೇರಿ ಸೌಹಾರ್ದ ನಡಿಗೆ ಹಮ್ಮಿಕೊಂಡಿದ್ದರು. ನಗರದ ಗಾಂಧೀ ವೃತ್ತದಿಂದ ಮೆರವಣಿಗೆ ಹೊರಟು ಬಸವ, ಬಾಬಾ, ಗಾಂಧೀ ಮುಂತಾದ ಮಹಾನ್ ದಾರ್ಶನಿಕರ ಪ್ರತಿಮೆಗಳಿಗೆ ಸಾಂಕೇತಿಕ ಮಾಲಾರ್ಪಣೆ ಮಾಡುವ ಮೂಲಕ, ವಿಶ್ವ ಮಾನವ ಸಂದೇಶ ಸಾರುವ ಘೋಷಣೆ, ಹಾಡು, ಸೌಹಾರ್ದ ನೃತ್ಯಗಳೊಂದಿಗೆ ವೇದಿಕೆಗೆ ಬರಲಾಯಿತು. ಮೆರವಣಿಗೆಯಲ್ಲಿ ಪೂಜ್ಯರು, ಫಾದರ್, ಭಂತೇಜಿ, ಮೌಲ್ವಿ, ಮಹಾಂತರು ಹೆಜ್ಜೆ ಹಾಕಿದರು. ಸಮಾರಂಭವನ್ನು ಉದ್ಘಾಟಿಸಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಮೀನಾಕ್ಷಿ ಬಾಳಿಯವರು ಮಾತನಾಡುತ್ತ ಕಲ್ಯಾಣ ಕೇವಲ ಊರಲ್ಲ. ವಿಶ್ವಮಾನವತೆಯನ್ನು ಸಾಕಾರಗೊಳಿಸಿದ ಪ್ರಯೋಗ ಶಾಲೆ. ಸನಾತನಿಗಳ ಪೊಳ್ಳುತನವನ್ನು ಧಿಕ್ಕರಿಸಿದ ಕ್ರಾಂತಿ ಭೂಮಿ. ಆಧ್ಯಾತ್ಮಿಕ ಲೋಕದಲ್ಲಿ ಕಲ್ಯಾಣ ಒಂದು ರೂಪಕ ಎಂದು ಹೇಳಿದರಲ್ಲದೆ ಶರಣರು ಯಾರದೇ ಆಹಾರ ಪದ್ಧತಿಯನ್ನು ಅಪಮಾನಿಸಲಿಲ್ಲ. ಶರಣರ ಹೆಸರು ಹೇಳುತ್ತ ಇನ್ನೊಬ್ಬರ ವೃತ್ತಿ ಮತ್ತು ಆಹಾರದ ಮೇಲೆ ದಾಳಿ ಮಾಡುವುದು ನೀಚತನದ ಪರಮಾವಧಿ ಎಂದು ಹೇಳಿದರು. ಭಾವೈಕ್ಯದ ನಡೆಗಳನ್ನು ಉದಾಹರಣೆಯೊಂದಿಗೆ ವಿವರಿಸಿದರು. ನಂತರ ಅತಿಥಿಗಳಾಗಿ ಆಗಮಿಸಿದ ರಾಷ್ಟ್ರೀಯ ಬೌದ್ಧ ಮಹಾಸಂಘದ ಮಿಲಿಂದ್ ಗುರೂಜಿಯವರು ಕರುಣೆ, ಪ್ರೀತಿ, ಸಹೋದರತೆ ಹೇಳದ ಧರ್ಮಗಳು ಧರ್ಮಗಳಲ್ಲ. ದ್ವೇಷ ಬಿತ್ತುವ ವಿಚಾರಗಳು ಅನರ್ಥಕಾರಿ. ಅಂಥ ಪೊಳ್ಳು ರಾಷ್ಟ್ರಪ್ರೇಮಕ್ಕೆ ಬಲಿಯಾಗಬಾರದು ಎಂದು ಹೇಳಿದರು. ಇನ್ನೋರ್ವ ಅತಿಥಿ ಇಕ್ರಾಮೊದ್ದಿನ್ ಖಾದ್ರಿವಾಲೆ "ಮಜಹಬ್ ನಹೀ ಸಿಖಾತಾ ಆಪಸ್ಮೇ ಬೈರ್ ರಖನಾ। ಹಿಂದೂಸ್ಥಾನ ಹಮಾರ್ ಬಹುತ್ವದ ನೆಲೆವೀಡು. ಇಲ್ಲಿ ಅಲ್ಲಮಪ್ರಭು, ಷಾ ಅಲಂ ಪೀರ್, ಮಾಣಿಕಪ್ರಭು ರಾಜಾ ಬಾಗ್ ಸವಾರ್ ಹೀಗೆ ಎಲ್ಲರೂ ಗುರು-ಶಿಷ್ಯ ಬಂಧದಲ್ಲಿ ಬೆಸೆದುಕೊಂಡಿದ್ದಾರೆ. ಅಸಲಿಗೆ ನಮ್ಮಲ್ಲಿ ಇಲ್ಲದ ದ್ವೇಷವನ್ನು ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಹುಟ್ಟು ಹಾಕುತ್ತಿದ್ದಾರೆ. ನಾವು ಅದಕ್ಕೆ ಬಲಿಯಾಗುವುದು ಬೇಡ ಎಂದರು. ಸಾನಿಧ್ಯ ವಹಿಸಿದ್ದ ಮ.ನಿ.ಪ್ರ ಕೋರಣೇಶ್ವರ ಸ್ವಾಮಿಗಳು ಮಾತನಾಡುತ್ತ, ನಾವೆಲ್ಲರೂ ಬುದ್ಧ, ಬಸವ, ಬಾಬಾ ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯೋಣ. ಇತಿಹಾಸದಿಂದ ಪಾಠ ಕಲಿಯಬೇಕೆ ಹೊರತು ಇತಿಹಾಸದಲ್ಲಾದ ತಪ್ಪುಗಳನ್ನು ಪುನಃ ಘಟಿಸದಂತೆ ಶಾಂತಿ ರಕ್ಷಕರು ಕಾವಲು ಕಾಯಬೇಕು. ಭಾರತ ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಅದನ್ನು ಸುಂದರ ತೋಟವಾಗಿಯೇ ಉಳಿಸೋಣ ಎಂದರು. ವೇದಿಕೆ ಸಂಚಾಲಕ ಮನೋಹರ ಮೈಸೆ ಪ್ರಾಸ್ತಾವಿಕವಾಗಿ ಮಾತನಾಡಿ ಸಮಾಜದಲ್ಲಿ ಸಾಮರಸ್ಯ ಗಟ್ಟಿಗೊಳಿಸುವುದೇ ಕಾರ್ಯಕ್ರಮದ ಉದ್ದೇಶ ಎಂದರು. ವೇದಿಕೆಯ ಆಕಾಶ ಖಂಡಾಳೆ ಸ್ವಾಗತಿಸಿದರು. ನಗರಸಭೆ ಮಾಜಿ ಸದಸ್ಯ ರವೀಂದ್ರ ಕೋಳಕೂರ ನಿರೂಪಿಸಿದರು. ಅಂಗನವಾಡಿ ಅಕ್ಕಂದಿರು ವಚನ ನೃತ್ಯ ಮಾಡಿ ವಚನ ಸಂಗೀತಕ್ಕೆ ಹೆಜ್ಜೆ ಹಾಕಿ ಗಮನ ಸೆಳೆದರು.

ವೇದಿಕೆಯಲ್ಲಿ ರಾಜಾಬಾಗ ಸವಾರ ದರ್ಗಾಸ ಖಾಜಾ ಜೀಯಾ ಉಲ್ ಹಸನ್, ಪೂಜ್ಯ ರವೀಂದ್ರ ಬೌದ್ಧಾಚಾರ್ಯ, ಡಾ ಪ್ರಭು ಖಾನಾಪೂರೆ, ಶ್ರೀದೇವಿ ಚಿವಡೆ, ನರಸಿಂಗರೆಡ್ಡಿ ಗದಲೇಗಾಂವ, ಧನರಾಜ ರಾಜೋಳೆ, ಜಯಶ್ರೀ ಮಂಡೋಳೆ, ಮಾಣಿಕರೆಡ್ಡಿ, ಜುಲ್ಫೇಕರ್ ಚಾಬುಸವಾರ ಮುಂತಾದವರು ಉಪಸ್ಥಿತರಿದ್ದರು. ಪ್ರೀತಿಯ ಗಾಳಿಯ ಹಾಡಿನೊಂದಿಗೆ ಸ್ನೇಹದ ಗಮಲನ್ನು ಎಲ್ಲೆಲ್ಲೂ ಹರಡಿ ಕೋಮುವಾದಿಗಳ ವಿಧ್ವಂಸಕ ಕೃತ್ಯಗಳನ್ನು ಹಿಮ್ಮೆಟ್ಟಿಸುವಂತೆ ವಾತಾವರಣ ನಿರ್ಮಿಸಿದರು. ಜಿಲ್ಲಾ ಸಮಾವೇಶ ನಡೆಸುವ ಸಂಕಲ್ಪದೊಂದಿಗೆ ಮುನ್ನಡೆಯಲಾಯಿತು.



ಡಾ. ಅಂಬೇಡ್ಕರ್ ಮತ್ತು ಏಕರೂಪ ನಾಗರಿಕ ಸಂಹಿತೆ

.... ಪುಟ 2 ರಿಂದ

ಮತ್ತು ಸಿಖ್ಖರಿಗೆ ಏಕರೂಪ ನಾಗರಿಕ ಕಾನೂನಿನಿಂದ ವಿನಾಯಿತಿ ನೀಡುವ ಬಗ್ಗೆ ಬಿಜೆಪಿ ನಾಯಕರು ಮಾತನಾಡುತ್ತಿದ್ದಾರೆ. ಹಾಗಿದ್ದರೆ ಮುಸ್ಲಿಮರನ್ನು ಮಾತ್ರ ಪ್ರತ್ಯೇಕಿಸುವುದೇಕೆ? ಕೇವಲ ಚುನಾವಣಾ ಲಾಭಕ್ಕಾಗಿ ಮತ್ತು ಮತೀಯ ವಿಭಜನೆಯನ್ನು ತೀಕ್ಷ್ಣಗೊಳಿಸುವುದು ಮಾತ್ರ ಸಂಘಪರಿವಾರದ ಉದ್ದೇಶ ಎಂಬುದು ಸ್ಪಷ್ಟವಾಗಿದೆ.

ಅಂಬೇಡ್ಕರ್ ಅವರು ಸಾಮಾನ್ಯ ನಾಗರಿಕ ಕಾನೂನನ್ನು ಹೇರಬಾರದು ಮತ್ತು ಭವಿಷ್ಯದಲ್ಲಿ ಅದನ್ನು ಬಯಸಿದವರಿಗೆ ಮಾತ್ರ ಅನ್ವಯಿಸಬೇಕು ಎಂದು ಹೇಳಿದರು. ಇದು ಕೇವಲ ಪ್ರಜಾಸತ್ತಾತ್ಮಕ ವಿಧಾನವಲ್ಲ; ಆಯಾ ಸಮುದಾಯಗಳೇ ಮುಂದೆ ಬಂದು ಅವುಗಳನ್ನು ಸ್ವೀಕರಿಸಲು ಅನುಕೂಲಕರ ವಾತಾವರಣ ನಿರ್ಮಿಸಬೇಕು ಎಂಬ ಚಿಂತನೆ ಅದರ ಹಿಂದಿದೆ. ಮುಸ್ಲಿಮರ ಮೇಲೆ ಏಕರೂಪ ನಾಗರಿಕ ಸಂಹಿತೆಯನ್ನು ಹೇರುವ ಸರ್ಕಾರ ಹುಚ್ಚು ಸರ್ಕಾರವಾಗುತ್ತದೆ ಎಂದು ಅಂಬೇಡ್ಕರ್ ಹೇಳಿದರು.

ಇಂದಿನ ಸರ್ಕಾರ ಅದಕ್ಕಿಂತಲೂ ಮುಂದೆ ಹೋಗಿ ತನ್ನ ಉಗ್ರ ರಾಜಕೀಯಕ್ಕೆ ಇದನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ ಎಂಬುದು ನಿಸ್ಸಂದೇಹ, ಇದನ್ನು ಎದುರಿಸುವ ದೊಡ್ಡ ಸವಾಲು ಪ್ರಜಾಸತ್ತಾತ್ಮಕ ಶಕ್ತಿಗಳ ಮುಂದಿದೆ. *ಕೃಪೆ-ತೀಕದಿರ್*

ಸಂವಿಧಾನ ಅನುಷ್ಠಾನ ಶಿಕ್ಷಣ ಸುಧಾರಣೆ ಮೇಲೆ ನಿಂತಿದೆ

ಅತಿಥಿ ಅಂಕಣ



ಪ್ರೊ. ಎಂ.ಚಂದ್ರ ಪೂಜಾರಿ

ನಮ್ಮ ಸಂವಿಧಾನದ ಉದ್ದೇಶ ಜಾತ್ಯಾತೀತ, ಪ್ರಜಾಪ್ರಭುತ್ವ, ಸಮಾಜವಾದಿ ಸಮಾಜ ರೂಪಿಸುವುದು. ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಹಾಗು ಮಾಧ್ಯಮಗಳು ಸಂವಿಧಾನ ಉದ್ದೇಶಿಸಿರುವ ಸಮಾಜವನ್ನು ರೂಪಿಸುವ ಹೊಣೆಗಾರಿಕೆಯನ್ನು ಹೊಂದಿವೆ. ಈ ನಾಲ್ಕು ಅಂಗಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲರನ್ನೂ ಶಿಕ್ಷಣ ಸೃಷ್ಟಿಸುತ್ತದೆ. ಶಾಸಕರನ್ನು, ನ್ಯಾಯಧೀಶರನ್ನು, ಅಧಿಕಾರಿಗಳನ್ನು, ಸುದ್ದಿ ಮಾಡುವವರನ್ನು ಮತ್ತು ನಾಲ್ಕು ಅಂಗಗಳಲ್ಲಿ ದುಡಿಯುವ ಎಲ್ಲರನ್ನೂ ಶಿಕ್ಷಣ ಸೃಷ್ಟಿಸುತ್ತದೆ. ಅಷ್ಟು ಮಾತ್ರವಲ್ಲ ವೈದ್ಯರನ್ನು, ಎಂಜಿನೀಯರನ್ನು, ಉಪನ್ಯಾಸಕರನ್ನು, ಗುಮಾಸ್ತರನ್ನು, ಪೋಲಿಸರನ್ನು ಹೀಗೆ ಆಧುನಿಕ ಸಂಸ್ಥೆಗಳಲ್ಲಿ ದುಡಿಯುವ ಎಲ್ಲರನ್ನೂ ಶಿಕ್ಷಣ ಸೃಷ್ಟಿಸುತ್ತದೆ. ಇವರೆಲ್ಲರಿಗೆ ಜಾತ್ಯಾತೀತ, ಪ್ರಜಾಪ್ರಭುತ್ವ, ಸಮಾಜವಾದಿ ಸಮಾಜ ರೂಪಿಸಲು ಅವಶ್ಯವಿರುವ ಪರಿಣಿತಿ ಹಾಗು ಮೌಲ್ಯಗಳನ್ನು ನೀಡುವುದು ಶಿಕ್ಷಣದ ಕರ್ತವ್ಯ.

ಆದರೆ ಸಂವಿಧಾನ ಅನುಷ್ಟಾನಗೊಳಿಸುವ ಜವಾಬ್ದಾರಿ ಹೊತ್ತ ಸರಕಾರಗಳು ಶಿಕ್ಷಣವನ್ನು ಈ ದೃಷ್ಟಿಯಿಂದ ನೋಡಿವಿಯೇ? ಶಿಕ್ಷಣ ನೀತಿಯನ್ನು ರೂಪಿಸುವಾಗ ಭಾಷಾ ಪ್ರಶ್ನೆಗಳು, ಪ್ರಾದೇಶಿಕ ಪ್ರಶ್ನೆಗಳು, ಶಿಕ್ಷಣ ಸಂಸ್ಥೆಗಳ ಒಡೆತನ (ಪಬ್ಲಿಕ್ ವರ್ಸಸ್ ಪ್ರವೈಟ್), ಸ್ಕಿಲ್ ಪ್ರಶ್ನೆಗಳು, ಮೌಲ್ಯದ ಪ್ರಶ್ನೆಗಳು ಬಿಡಿಬಿಡಿಯಾಗಿ ಚರ್ಚೆಯಲ್ಲಿರುತ್ತವೆಯೇ ಹೊರತು ಶಿಕ್ಷಣದ ಮೂಲ ಉದ್ದೇಶ – ಸಂವಿಧಾನ ಉದ್ದೇಶಿಸಿರುವ ಸಮಾಜ ರೂಪಿಸುವ ಉದ್ದೇಶ–ಇಡಿಯಾಗಿ ಚರ್ಚೆಯಲ್ಲಿರುವುದೇ ಇಲ್ಲ. ಇದರಿಂದಾಗಿ ಉನ್ನತ ಶಿಕ್ಷಣ ಅದರಲ್ಲೂ ಸಂಶೋಧನೆ, ಬೋಧನೆ, ಜ್ಞಾನದ ಅನ್ವಯಿಕತೆ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ವಹಣ ಕ್ಷೇತ್ರಗಳಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಎಲ್ಲ ಕ್ಷೇತ್ರಗಳಲ್ಲಿ ಗಣನೀಯ ಬದಲಾವಣೆ ಮಾತ್ರ ಸಂವಿಧಾನ ಅನುಷ್ಠಾನದ ಹಾದಿಯನ್ನು ಸುಗಮಗೊಳಿಸಬಹುದೆಂದು ವಾದಿಸುವ ಲೇಖನ ಇದು.

ಜ್ಞಾನ ಸೃಷ್ಟಿಯ ಸಮಸ್ಯೆಗಳು

ಜ್ಞಾನವನ್ನು ಸತ್ಯವೆಂದು ಸಾಧಿಸಿ ತೋರಿಸಬಹುದಾದ ನಂಬಿಕೆಯೆಂದು ತತ್ವಜ್ಞಾನಿಗಳು ವ್ಯಾಖ್ಯಾನಿಸುತ್ತಾರೆ. ಸತ್ಯವೆಂದು ಸಾಧಿಸುವ ತೋರಿಸುವ ಎರಡು ಮೂರು ವಿಧಾನಗಳಿವೆ – ವಿಜ್ಞಾನದ ವಿಧಾನ, ಸಮಾಜವಿಜ್ಞಾನ/ಮಾನವಿಕದ ವಿಧಾನ ಮತ್ತು ಸ್ಥಳೀಯ ಜ್ಞಾನ ಪರಂಪರೆಯ ವಿಧಾನ. ಪ್ರಶ್ನಿಸಿ, ಪರೀಕ್ಷಿಸಿ, ಅವಲೋಕಿಸಿ, ವಿಶ್ಲೇಷಿಸಿ ತೀರ್ಮಾನಕ್ಕೆ ಬರುವುದು ವಿಜ್ಞಾನ ಮತ್ತು ಸಮಾಜವಿಜ್ಞಾನ ವಿಧಾನಗಳ ತಳಹದಿ. ಆದರೆ ಸ್ಥಳೀಯ ಜ್ಞಾನಪರಂಪರೆ ಪ್ರಶ್ನೆ, ಪರೀಕ್ಷೆಗಳಿಂದ ನಂಬಿಕೆಗೆ ಹೆಚ್ಚು ಮಹತ್ವ ನೀಡುತ್ತಿದೆ. ಮೂರೂ ವಿಧಾನಗಳು ಒಂದೆರಡು ಗಂಭೀರ ಸಮಸ್ಯೆ ಎದುರಿಸುತ್ತಿವೆ. ಒಂದು, ವಿಜ್ಞಾನ, ಸಮಾಜವಿಜ್ಞಾನ ಹಾಗೂ ಸ್ಥಳೀಯ ಜ್ಞಾನ ಪರಂಪರೆಗಳು ಪರಸ್ಪರ ಸಂವಾದ ನಡೆಸುತ್ತಿಲ್ಲ ಮತ್ತು ಸ್ಥಳೀಯ ಜ್ಞಾನಪರಂಪರೆ ಪ್ರಶ್ನೆ, ಪರೀಕ್ಷೆ, ಪರಾಮರ್ಶೆಗೆ ಒಡ್ಡಿಕೊಳ್ಳಲು ತಯಾರಿಲ್ಲ. ಈ ಎರಡೂ ಕೊರತೆಗಳನ್ನು ಸ್ವಲ್ಪ ವಿವರಿಸಬೇಕಾಗಿದೆ. ಮಾರುಕಟ್ಟೆ ಬೇಡಿಕೆಗಳು ವಿಜ್ಞಾನ, ಸಮಾಜವಿಜ್ಞಾನ ಸಂಶೋಧನೆಯ ಆದ್ಯತೆಗಳನ್ನು ಪ್ರಭಾವಿಸಿದಷ್ಟು ತಳಸ್ತರದ ಜನರ ಬದುಕು ಪ್ರಭಾವಿಸುತ್ತಿಲ್ಲ. ಅಂದರೆ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ವಿಷಯದ ಬಗ್ಗೆ ಅಧ್ಯಯನ ನಡೆಸಿದರೆ ಸಂಶೋಧಕರಿಗೆ ಉದ್ಯೋಗ

ತಳಸ್ತರದ ಜನರಿಗೆ ತಮ್ಮ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಬ್ರಾಹ್ಮಣ್ಯದ ಕಣ್ಣಲ್ಲಿ ಲೋಕನೋಡುವ ಅಭ್ಯಾಸದಿಂದ ಹೊರಬರಲಾಗುತ್ತಿಲ್ಲ. ಇದನ್ನು ಸ್ವಲ್ಪ ವಿವರಿಸಬೇಕಾಗಿದೆ. ಬ್ರಾಹ್ಮಣ್ಯ ಒಂದು ಸಿದ್ಧಾಂತ. ಇದು ಜಾತಿ, ಧರ್ಮ, ಲಿಂಗ ಸಮಾತನೆಯನ್ನು ಒಪ್ಪುವುದಿಲ್ಲ. ಶತಮಾನಗಳಿಂದ ಈ ಸಿದ್ಧಾಂತದ ಪ್ರಭಾವಕ್ಕೆ ಒಳಗಾಗಿರುವ ಜನರು ತಮ್ಮ ದಿನನಿತ್ಯದ ಬದುಕಿನಲ್ಲಿ ಜಾತಿ, ಲಿಂಗ, ಧರ್ಮ ತಾರತಮ್ಯಗಳನ್ನು ಚಾಚೂತಪ್ಪದೆ ಪಾಲಿಸುತ್ತಾರೆ. ಇವರಿಗೆ ಸಂವಿಧಾನ ಪ್ರತಿಪಾದಿಸುವ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳು ಪರಿಕೀಯವಾಗಿವೆ. ಇವೇ ಕಾರಣಗಳಿಂದ ಇವರು ಜಾತಿ, ಧರ್ಮಗಳ ಗಡಿಗಳನ್ನು ಮೀರಿ ರಾಜಕೀಯದಲ್ಲಿ ಪಾಲುಗೊಳ್ಳುವುದು ಕಷ್ಟವಾಗಿದೆ. ಜಾತಿ, ಧರ್ಮಗಳ ನೆಲೆಯಲ್ಲಿ ರಾಜಕೀಯ ತೀರ್ಮಾನ ಕೈಗೊಳ್ಳುವುದರಿಂದ ಇವರ ಆಸಕ್ತಿಗೆ ವಿರುದ್ಧವಾದ ಪಾಲಿಸಿ ತರುವವರನ್ನು ಕೂಡ ಇವರು ಅಧಿಕಾರಕ್ಕೇರಿಸುತ್ತಾರೆ.

ಪಡೆಯುವುದು ಸಮಸ್ಯೆಯಾಗುವುದಿಲ್ಲ ಎನ್ನುವ ಗ್ರಹಿಕೆ ಕೆಲಸ ಮಾಡುವುದು. ತೊಂಬತ್ತರ ನಂತರ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿ ಬಂದ ನಂತರ ಈ ಟ್ರೆಂಡ್ ಹೆಚ್ಚಾಗಿದೆ. ಈ ಟ್ರೆಂಡ್‌ನ ಆಪಾಯ ಮಾರುಕಟ್ಟೆ ಬಗ್ಗೆ ಇರುವ ಗ್ರಹಿಕೆಯಲ್ಲಿ ಅಡಗಿದೆ.

ನಿಯೋಲಿಬರಲ್ ಚಿಂತಕರು ಮಾರುಕಟ್ಟೆಯನ್ನು ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ದೇವರ ರೂಪದಲ್ಲಿ ಮಂಡಿಸಿದ್ದಾರೆ. ಅಷ್ಟು ಮಾತ್ರವಲ್ಲ ಮಾರುಕಟ್ಟೆಯಲ್ಲಿ ಎಲ್ಲವೂ ಬೇಡಿಕೆ ಪೂರೈಕೆ ನೆಲೆಯಲ್ಲಿಯೇ ತೀರ್ಮಾನವಾಗುವುದು. ಮಾರುಕಟ್ಟೆಯ ಬೇಡಿಕೆ ಪೂರೈಕೆಗಳ ಬಲವನ್ನು ಸರಕಾರ ಬಿಡಿ ದೇವರು ಬಂದ್ರು ಏರುಪೇರು ಮಾಡಲು ಸಾಧ್ಯವಿಲ್ಲ ಎನ್ನುವ ಚಿತ್ರಣ ಇದೆ. ಇಂತಹ ಬುರಡೆ ಪುರಾಣಗಳನ್ನು ನಮ್ಮ ಪತ್ರಗಳು, ಅರ್ಥಶಾಸ್ತ್ರಜ್ಞರು, ಸರಕಾರಗಳು, ಮಾಧ್ಯಮಗಳು ಹೇಳುತ್ತಲೇ ಇವೆ. ಇದು ಸರಿಯಲ್ಲ. ಮಾರುಕಟ್ಟೆ ಇತರ ಸಂಸ್ಥೆಗಳ ರೀತಿಯಲ್ಲಿ ಮನುಷ್ಯ ಸೃಷ್ಟಿಸಿದ ಸಂಸ್ಥೆ. ನಾವು ಚುನಾಯಿಸಿದ ನಮ್ಮ ಪ್ರತಿನಿಧಿಗಳೇ ಮಾರುಕಟ್ಟೆಯನ್ನು ಸೃಷ್ಟಿಸುವುದು. ಮಾರುಕಟ್ಟೆಯ ಬೇಡಿಕೆ ಪೂರೈಕೆಗಳನ್ನು ಸರಕಾರ ತನ್ನ ಆದ್ಯತೆ ಅನುಸಾರ ಏರುಪೇರು ಮಾಡುತ್ತದೆ. ಮಾರುಕಟ್ಟೆಯಲ್ಲಿ ಖರೀದಿಸುವ ಶಕ್ತಿ ಅಥವಾ ಬೇಡಿಕೆಯುಳ್ಳ ಸರಕುಸೇವೆಗಳು ಮಾತ್ರ ಮುಖ್ಯ. ಜಾತಿ, ಲಿಂಗ, ಧರ್ಮ ಇತ್ಯಾದಿಗಳೆಲ್ಲ ಮುಖ್ಯ ಅಲ್ಲ ಎನ್ನುವ ಗ್ರಹಿಕೆಯೂ ಇದೆ.

ಇದು ಕೂಡ ಸುಳ್ಳು. ಏಕೆಂದರೆ ಜಾತಿ, ಲಿಂಗ, ಧರ್ಮಗಳಿಗೂ ಖರೀದಿಸುವ ಶಕ್ತಿಗೂ ನೇರ ಸಂಬಂಧ ಇದೆ. ಇವತ್ತು ಖರೀದಿಸುವ ಶಕ್ತಿ



ಶ್ರೇಣಿಯ ಮೇಲಿದ್ದವರಲ್ಲಿದ್ದಷ್ಟು ಕೆಳಗಿದ್ದವರಲ್ಲಿ ಇಲ್ಲ, ಪುರುಷರಲ್ಲಿದ್ದಷ್ಟು ಮಹಿಳೆಯರಲ್ಲಿ ಇಲ್ಲ ಮತ್ತು ಬಹುಸಂಖ್ಯಾತರಲಿದ್ದಷ್ಟು ಅಲ್ಪಸಂಖ್ಯಾತರಲ್ಲಿ ಇಲ್ಲ. ಸರಕುಸೇವೆಗಳ ಬೇಡಿಕೆಗಳೇ ಮಾರುಕಟ್ಟೆಯಲ್ಲಿ ಮುಖ್ಯವಾಗುತ್ತಿದ್ದರೆ ದಲಿತರ ಹೊಟೇಲೆಂದು ಬೋರ್ಡ್ ಹಾಕಿ ವ್ಯಾಪಾರ ಮಾಡುವುದು ಸಮಸ್ಯೆ ಅಗಬಾರದು. ಆದರೆ ಸಮಸ್ಯೆ ಆಗುತ್ತಿದೆ. ಇವೇ ಕಾರಣಗಳಿಂದ ಸಂಶೋಧನೆಗಳ ಸಂಖ್ಯೆ ಹೆಚ್ಚುತ್ತಾ ಹೋದರೂ ಜನಸಾಮಾನ್ಯರ ಬದುಕಿನ ಗುಣಮಟ್ಟದಲ್ಲಿ ವಿಶೇಷ ಪರಿವರ್ತನೆ ಕಾಣಲು ಸಾಧ್ಯವಾಗುತ್ತಿಲ್ಲ.

ಬಹುತೇಕರು ಇಂದು ಕೂಡ ತಮ್ಮ ಕೃಷಿ, ವ್ಯಾಪಾರ, ಉದ್ದಿಮೆ, ಸೇವಾವಲಯದ ಚಟುವಟಿಕೆಗಳನ್ನು, ತಮ್ಮ ಸಾಮಾಜಿಕ ಹಾಗು



ಸಾಂಸ್ಕೃತಿ ಬದುಕನ್ನು ಸ್ಥಳೀಯ ಜ್ಞಾನಪರಂಪರೆಯ ನೆಲೆಗಟ್ಟಿನಲ್ಲಿಯೇ ಕಟ್ಟಿಕೊಂಡಿದ್ದಾರೆ. ಆದರೆ ಇವು ಎರಡು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿವೆ. ಒಂದು, ಇವಕ್ಕೆ ಭಾರತೀಯ ಜ್ಞಾನಪರಂಪರೆಯ ಸ್ಥಾನಮಾನ ಇಲ್ಲ. ವೇದ, ಉಪನಿಷತ್, ರಾಮಾಯಣ, ಮಹಾಭಾರತ ಇತ್ಯಾದಿಗಳೆಲ್ಲ ಮಹಾಕಾವ್ಯಗಳ ಸ್ಥಾನಮಾನ ಹೊಂದಿವೆ. ಆದರೆ ಮಂಟೇಸ್ವಾಮಿ, ಮಲೆಮದೇಶ್ವರ, ಜುಂಜಪ್ಪ ಕಾವ್ಯಗಳಿಗೆ ಮಹಾಕಾವ್ಯಗಳ ಸ್ಥಾನಮಾನ ಇಲ್ಲ. ಎರಡು, ಇವು ಪ್ರಶ್ನೆ, ಪ್ರಯೋಗ, ಪರಾಮರ್ಶೆಗಳಿಗೆ ಒಡ್ಡಿಕೊಳ್ಳದ ಕಾರಣ ಆರ್ಥಿಕವಾಗಿ ಯಶಸ್ಸು ಕಾಣುತ್ತಿಲ್ಲ. ನಮ್ಮಲ್ಲಿರುವ ಕೃಷಿ, ವ್ಯಾಪಾರ, ಉದ್ದಿಮೆಗಳಲ್ಲಿ ಮುಕ್ಕಾಲು ಭಾಗ ಸಣ್ಣ ಮತ್ತು ಅತೀ ಸಣ್ಣ ಕೃಷಿ, ವ್ಯಾಪಾರ, ಉದ್ದಿಮೆಗಳೇ. ಸಣ್ಣ ಕೃಷಿಕರು ರಸಗೊಬ್ಬರ, ಹಟ್ಟಿಗೊಬ್ಬರ ಬಳಸಿಕೊಂಡು ವೈಜ್ಞಾನಿಕವಾಗಿ ಕೃಷಿ ಮಾಡಿದರೆ ಕನಿಷ್ಠ ಎಕರೆಗೆ ರೂ.21000ದಷ್ಟು ಆದಾಯ ಗಳಿಸಬಹುದು. ಆದರೆ ವೈಜ್ಞಾನಿಕವಾಗಿ ಕೃಷಿ ಮ್ಯಾನೇಜ್ ಮಾಡದಿರುವುದರಿಂದ ಅತ್ಯಂತ ಕಡಿಮೆ ಆದಾಯ (ರೂ.7000ದಷ್ಟು) ಪಡೆಯುತ್ತಿದ್ದಾರೆ. ಇದೇ ರೀತಿ ಸಣ್ಣಪುಟ್ಟ ವ್ಯಾಪಾರ ಉದ್ದಿಮೆಗಳು ತಮ್ಮ ಹಣಕಾಸು, ಮಾರಾಟ, ಉತ್ಪಾದನೆ ಇತ್ಯಾದಿಗಳನ್ನು ಆಧುನಿಕ ಮ್ಯಾನೇಜ್‌ಮೆಂಟ್ ತತ್ವಗಳಿನುಸಾರ ನಡೆಸುತ್ತಿಲ್ಲ. ಇದರಿಂದಾಗಿ ಇವರ ಆದಾಯ ಕೂಡ ಇವರ ಶ್ರಮಕ್ಕೆ ಪೂರಕವಾಗಿಲ್ಲ.

ತಳಸ್ತರದ ಜನರಿಗೆ ತಮ್ಮ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಬ್ರಾಹ್ಮಣ್ಯದ ಕಣ್ಣಲ್ಲಿ ಲೋಕನೋಡುವ ಅಭ್ಯಾಸದಿಂದ ಹೊರಬರಲಾಗುತ್ತಿಲ್ಲ. ಇದನ್ನು ಸ್ವಲ್ಪ ವಿವರಿಸಬೇಕಾಗಿದೆ. ಬ್ರಾಹ್ಮಣ್ಯ ಒಂದು ಸಿದ್ಧಾಂತ. ಇದು ಜಾತಿ, ಧರ್ಮ, ಲಿಂಗ ಸಮಾತನೆಯನ್ನು ಒಪ್ಪುವುದಿಲ್ಲ. ಶತಮಾನಗಳಿಂದ ಈ ಸಿದ್ಧಾಂತದ ಪ್ರಭಾವಕ್ಕೆ ಒಳಗಾಗಿರುವ ಜನರು ತಮ್ಮ ದಿನನಿತ್ಯದ ಬದುಕಿನಲ್ಲಿ ಜಾತಿ, ಲಿಂಗ, ಧರ್ಮ ತಾರತಮ್ಯಗಳನ್ನು ಚಾಚೂತಪ್ಪದೆ ಪಾಲಿಸುತ್ತಾರೆ. ಇವರಿಗೆ ಸಂವಿಧಾನ ಪ್ರತಿಪಾದಿಸುವ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳು ಪರಿಕೀಯವಾಗಿವೆ. ಇವೇ ಕಾರಣಗಳಿಂದ ಇವರು ಜಾತಿ, ಧರ್ಮಗಳ ಗಡಿಗಳನ್ನು ಮೀರಿ ರಾಜಕೀಯದಲ್ಲಿ ಪಾಲುಗೊಳ್ಳುವುದು ಕಷ್ಟವಾಗಿದೆ. ಜಾತಿ, ಧರ್ಮಗಳ ನೆಲೆಯಲ್ಲಿ ರಾಜಕೀಯ ತೀರ್ಮಾನ ಕೈಗೊಳ್ಳುವುದರಿಂದ ಇವರ ಆಸಕ್ತಿಗೆ ವಿರುದ್ಧವಾದ ಪಾಲಿಸಿ ತರುವವರನ್ನು ಕೂಡ ಇವರು ಅಧಿಕಾರಕ್ಕೇರಿಸುತ್ತಾರೆ. ಈ ಎಲ್ಲ ಕಾರಣಗಳಿಂದ ಇವರು ಸಮಾಜೋ–ಆರ್ಥಿಕ ಪರಿವರ್ತನೆಗಳಿಂದ ವಂಚಿತರಾಗಿದ್ದಾರೆ. ಆದುದರಿಂದ ಈ ಜನರ ಜ್ಞಾನಪರಂಪರೆಯೊಂದಿಗೆ ವಿಜ್ಞಾನ, ಸಮಾಜವಿಜ್ಞಾನಗಳು ಸಂವಾದ ನಡೆಸುವ ಅನಿವರ್ಯತೆ ಇದೆ. ಇವರ ಅರ್ಥ, ರಾಜಕೀಯ, ಸಮಾಜ, ಸಂಸ್ಕೃತಿಗಳು ಪಠ್ಯದೊಳಗೆ ಬರುವ ಅಗತ್ಯವಿದೆ. ಪಠ್ಯದಲ್ಲಿರುವವರು ಸಂಶೋಧಕರ 'ಪ್ರಜ್ಞೆಯ ಭಾಗ' ಆಗುತ್ತಾರೆ. ಸಂಶೋಧಕರ ಪ್ರಜ್ಞೆಯ ಭಾಗವಾದರೆ ಇವರ ಅರ್ಥ, ರಾಜಕೀಯ, ಸಮಾಜ, ಸಂಸ್ಕೃತಿಗಳನ್ನು ಬದಲಾಗುತ್ತಿರುವ ಲೋಕದೊಂದಿಗೆ ಸಂವಾದ ನಡೆಸಲು ಅಣಿಗೊಳಿಸಬಹುದು.

ಬೋಧನೆಯ ಸಮಸ್ಯೆಗಳು

1) ಬೋಧಕರ ಉಪನ್ಯಾಸಕ್ಕೂ ಸ್ವಾಮೀಜಿಯ ಪ್ರವಚನಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಎರಡೂ ಕಡೆ ಪ್ರಶ್ನೆ, ವಿಮರ್ಶೆ, ಚರ್ಚೆಗೆ ಅವಕಾಶವಿಲ್ಲ. ಇದನ್ನೇ ಇನ್ನೊಂದು ರೂಪದಲ್ಲಿ ಹೇಳುವುದಾದರೆ ತರಗತಿಗಳು ಜ್ಞಾನ ಸೃಷ್ಟಿ, ಜ್ಞಾನ ವರ್ಗಾವಣೆಗಳಿಗಿಂತ ಹೆಚ್ಚು ಸಮಾಜದಲ್ಲಿರುವ ಅಧಿಕಾರ ಸಂಬಂಧಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಬಳಕೆ ಆಗುತ್ತಿವೆ. 2) ಕಲಿಕೆಯಲ್ಲಿ ಬೋಧನೆಯೇ ಪ್ರಧಾನವಾಗಿದ್ದು ವಿದ್ಯಾರ್ಥಿಗಳು ಪ್ರಯೋಗ, ಪರೀಕ್ಷೆಗಳನ್ನು ಮಾಡಿ ಕಲಿಯುವುದು ಕಡಿಮೆ ಇದೆ. ತರಗತಿಗಳಲ್ಲಿ ಗಂಟೆಗಟ್ಟಲೆ ಉಪನ್ಯಾಸಕರ ಕೊರೆತವನ್ನು ಅನಭವಿಸುವುದು ಉತ್ತಮ ವಿದ್ಯಾರ್ಥಿಯ ಲಕ್ಷಣ ಆಗಿದೆ. 3) ತರಗತಿ ಮತ್ತು ಶಿಕ್ಷಣ ಸಂಸ್ಥೆಗಳು ಲಿಂಗ, ಜಾತಿ, ಧರ್ಮ, ವರ್ಗ ತಾರತಮ್ಯಗಳನ್ನು ಜೀವಂತ ಇಡುವ ಮೌಲ್ಯಗಳನ್ನು ನಮ್ಮ ಸಂಸ್ಕೃತಿ ಹೆಸರಲ್ಲಿ ಆಚರಿಸುತ್ತಿವೆ. ತರಗತಿಗಳಲ್ಲಿ ಹೆಣ್ಣು ಗಂಡು ಬೇರೆ ಬೇರೆ ಬೆಂಚುಗಳಲ್ಲಿ ಕುಳಿತುಕೊಳ್ಳಬೇಕು. ತಪ್ಪಿಕೂಡ ಜೊತೆಜೊತೆ ಕುಳಿತುಕೊಳ್ಳಬಾರದು. ಕೆಲವು ಮೇಸ್ಟುಗಳು ಲಿಂಗ ಪ್ರತ್ಯೇಕತೆ ಬಗ್ಗೆ ಎಷ್ಟು ಜಾಗರೂಕರಾಗಿದ್ದರೆಂದರೆ ಹಾಜರಾತಿ ಪುಸ್ತಕದಲ್ಲೂ ಹೆಣ್ಣುಗಂಡು ವಿದ್ಯಾರ್ಥಿಗಳ ಹೆಸರುಗಳನ್ನು ಜೊತೆಜೊತೆಯಲ್ಲಿ ಬರೆಯಲು ಹಿಂದೆಮುಂದೆ ನೋಡುತ್ತಾರೆ. ಕಾಲೇಜು, ವಿಶ್ವವಿದ್ಯಾಲಯಗಳ ಹಾಸ್ಟೇಲ್‌ಗಳಲ್ಲಿ ಹೆಣ್ಣು ಮಕ್ಕಳ ಹಾಸ್ಟೇಲ್‌ಗಳಿಗಿರುವ ಆವರಣ ಗೋಡೆ, ಸಿಸಿಟಿವಿ ಕ್ಯಾಮರಗಳು, ಸೆಕ್ಯುರಿಟಿಗಳು ಗಂಡು ಮಕ್ಕಳ ಹಾಸ್ಟೇಲ್‌ಗೆ ಇರುವುದಿಲ್ಲ. ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ಬುಡಕಟ್ಟುಗಳಿಗೆ ಪ್ರತ್ಯೇಕ ಹಾಸ್ಟೇಲ್‌ಗಳಿವೆ.ಬಹುತೇಕ ಎಲ್ಲ ಶಾಲೆ, ಕಾಲೇಜುಗಳಲ್ಲಿ ಶಾರದ ಪೂಜೆ, ಗಣೇಶೋತ್ಸವ ನಡೆಯುತ್ತದೆ. ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸತ್ಯ ನಾರಾಯಣ ಪೂಜೆ, ಹೋಮ ಹವನಗಳು ನಡೆಯುತ್ತವೆ. ಇವೆಲ್ಲ ಕಾರಣಗಳಿಂದ ಇಂದು ಉನ್ನತ ಶಿಕ್ಷಣ ಪಡೆದವರು ಮತ್ತು ಪಡೆಯದವರ ನಡುವಿನ ವ್ಯತ್ಯಾಸವನ್ನು ಅವರು ಅನುಭೋಗಿಸುವ ಸರಕುಸೇವೆಗಳಿಂದ ಮಾತ್ರ ಗುರುತಿಸಬಹುದೇ ಹೊರತು ಅವರ ಬದುಕಿನ ಮೌಲ್ಯಗಳಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಇವೆಲ್ಲ ಬದಲಾಗಿ – 1) ಉಪನ್ಯಾಸಕರ ಬೋಧನೆ ಕಡಿಮೆ ಇದ್ದು ವಿದ್ಯಾರ್ಥಿಗಳ ಪ್ರಶ್ನೆ, ವಿಮರ್ಶೆಗಳು ಹೆಚ್ಚಾಗಬೇಕು. ಒಂದು ಗಂಟೆ ತರಗತಿ ಸಮಯದಲ್ಲಿ ಕಾಲು ಭಾಗ ಉಪನ್ಯಾಸಕರ ಬೋಧನೆಗೆ ಬಳಕೆ ಆದರೆ ಮಕ್ಕಾಲು ಭಾಗ ಕೂಡ ವಿದ್ಯಾರ್ಥಿಗಳ ಪ್ರಶ್ನೆ, ಚರ್ಚೆ, ಸಂವಾದಕ್ಕೆ ಮೀಸಲಿಡಬೇಕು. ಈ ಬದಲಾವಣೆ ಚಾಲ್ತಿಗೆ ಬರಬೇಕಾದರೆ ಬೋಧಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಕಲಿಕೆಯನ್ನು ಗ್ರಹಿಸುವ ವಿಧಾನವನ್ನು ಸಂಪೂರ್ಣ ಬದಲಾಯಿಸಿಕೊಳ್ಳಬೇಕಾಗಿದೆ. 2) ಎಲ್ಲ ವಿಷಯಗಳ ಕಲಿಕೆಯಲ್ಲಿ ಪ್ರಯೋಗ, ಪರೀಕ್ಷೆಗಳ ಮೂಲಕ ಮಾಡಿ ಕಲಿಯುವ ಅವಕಾಶ ಹೆಚ್ಚಾಗಬೇಕು. ಸಮಾಜ ವಿಜ್ಞಾನದ ಎಲ್ಲ ವಿಷಯಗಳಲ್ಲೂ ಪ್ರಯೋಗ ಮಾಡಿ ಕಲಿಯುವ ವಿಧಾನಗಳಿವೆ. ಇವುಗಳೊಂದಿಗೆ ➚



ಮೋದಿ ಭಾಷಣ: ವಿಷ ಕಕ್ಕುವ ರಾಜಕಾರಣದ ಪ್ರದರ್ಶನ

ಪ್ರಕಾಶ್ ಕಾರತ್

77ನೇ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಕೆಂಪು ಕೋಟೆಯಿಂದ ಮಾಡಿದ ಭಾಷಣ, ಹಿಂದಿನ ವರ್ಷಗಳಲ್ಲಿ ಮಾಡಿದ ಭಾಷಣದ ಲಕ್ಷಣಗಳನ್ನೇ ಹೊಂದಿತ್ತು. 2014ರಿಂದೀಚೆಗೆ ಭಾರತ ಎಲ್ಲಾ ರಂಗಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ ಎಂಬ ಕ್ಲೀಷೆ ತುಂಬಿದ ಬಹಳಷ್ಟು ಬೊಗಳೆಗಳು ಭಾಷಣದಲ್ಲಿದ್ದವು. ಮುಸ್ಲಿಮರ ಆಡಳಿತದಿಂದ ಆರಂಭವಾಗಿ ಬ್ರಿಟಿಷ್ ಆಡಳಿದೊಂದಿಗೆ ಅಂತ್ಯವಾದ ದಾಸ್ಯದ ಸಾವಿರ ವರ್ಷಗಳಿಗೆ ಹೋಲಿಸಿದರೆ ನಾವು ಒಂದು ಸಾವಿರ ವರ್ಷಗಳ ‘ಅಮೃತ ಕಾಲ’ದತ್ತ ನೋಡಬಹುದಾಗಿದೆ ಎಂಬುದಷ್ಟೇ ಈ ಬಾರಿಯ ಹೊಸ ಸೇರ್ಪಡೆಯಾಗಿತ್ತು. ಎಂದಿನಂತೆ ಸರಕಾರದ ಸಾಧನೆಗಳ ದೊಡ್ಡ ಪಟ್ಟಿಯನ್ನೇ ಅವರು ಬಿಚ್ಚಿಟ್ಟಿದ್ದು ಅವುಗಳಲ್ಲೆಲ್ಲ ಸ್ವತಃ ಮೋದಿಯ ಮುಖ್ಯ ಪಾತ್ರವಿದೆ ಎಂದು ಕೊಚ್ಚಿಕೊಂಡಿದ್ದೇ ಇದೆ.

ಟೈಮ್ ವೇಸ್ಟ್ ಪ್ರಕ್ರಿಯೆ!

ಈ ಬೊಗಳೆ ಕ್ಲೇಮುಗಳನ್ನು ವಿಮರ್ಶಾತ್ಮಕವಾಗಿ ಟೀಕಿಸುವುದು ಮತ್ತು ವಾಸ್ತವತೆಗಳೊಂದಿಗೆ ಅವುಗಳನ್ನು ಮುಖಾಮುಖಿಗೊಳಿಸುವುದು ಸುಮ್ಮನೆ ಸಮಯದ ಅಪವ್ಯಯವಾಗಲಿದೆ. ಅಂಥ ವಿಮರ್ಶಾತ್ಮಕ ಪರಾಮರ್ಶೆಗಳನ್ನು ಹಿಂದೆಯೇ ಮಾಡಲಾಗಿದ್ದು ಈಗ ಹೊಸದೇನೂ ಅಲ್ಲ. ಅದರ ಬದಲಿಗೆ, ಮೋದಿ ಭಾಷಣದ ರಾಜಕೀಯ ಅಂಶಗಳನ್ನು ಪರಿಶೀಲಿಸುವುದು ಹೆಚ್ಚು ಪ್ರಯೋಜನಕಾರಿ.

ಭಾಷಣದ ಆರಂಭದಲ್ಲೇ ಮೋದಿ ಮಣಿಪುರ ಪರಿಸ್ಥಿತಿಯನ್ನು ಪ್ರಸ್ತಾಪಿಸಿದರು. ಆದರೆ ಅವರು ಹೇಳಿದ ವಿಚಾರದಿಂದ ಮಣಿಪುರದವರು ಮತ್ತು ದೇಶದ ಸಂಬಂಧಪಟ್ಟ ಎಲ್ಲಾ ಜನರಿಗೆ ನಿರಾಸೆಯಾಗಿರಲೇಬೇಕು. ಅಲ್ಲಿ ನಡೆದ ಸಂಘರ್ಷ, ಪ್ರಾಣ ಹಾನಿ ಮತ್ತು ಮಹಿಳೆಯರ ಗೌರವಕ್ಕೆ ಚ್ಯುತಿಯಾಗಿದ್ದು ಮೊದಲಾದವುಗಳ ಬಗ್ಗೆ ಪ್ರಧಾನಿ ಹಾಗೇ ತೇಲಿಸಿದಂತೆ ಮಾತನಾಡಿದರು. ಆದರೆ ಕಳೆದ ಕೆಲವು ದಿನಗಳಲ್ಲಿ ರಾಜ್ಯದಲ್ಲಿ ಶಾಂತಿ ಮರಳಿದೆ ಎಂದರು. ಶಾಂತಿ ಸ್ಥಾಪಿಸಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದರು. ಅವರ ಸಂದೇಶ ಸ್ಪಷ್ಟವಾಗಿದೆ. ಜನಾಂಗೀಯ ಸಂಘರ್ಷ ಹದಗೆಡಲು ಕಾರಣರಾದ ಹಾಗೂ ಪಕ್ಷಪಾತಿ ಪಾತ್ರವನ್ನು ವಹಿಸಿದ ಮುಖ್ಯಮಂತ್ರಿ ಬೀರೇನ್ ಸಿಂಗ್‌ರನ್ನು ಹೊಣೆ ಮಾಡುವಂತಿಲ್ಲ ಎನ್ನುವುದೇ ಆ ಸಂದೇಶವಾಗಿದೆ. ವಾಸ್ತವವಾಗಿ, ರಾಜಕೀಯ ಪರಿಹಾರ ಕಂಡುಕೊಳ್ಳಲು ಕೇಂದ್ರ ಸರಕಾರ ಅವರನ್ನೇ ಅವಲಂಬಿಸಿದೆ. ಭಯಾನಕ ಲೈಂಗಿಕ ಅಪರಾಧಗಳ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಯಾವ ಪ್ರಸ್ತಾಪವೂ ಇಲ್ಲ. ಅಥವಾ ಸೂಕ್ಷ್ಮವಾದ ಈಶಾನ್ಯ ರಾಜ್ಯವು ಹೇಗೆ ಜನಾಂಗೀಯ ಘರ್ಷಣೆ ಮತ್ತು ಅರಾಜಕತೆಗೆ ಜಾರಿತು ಎನ್ನುವ ಬಗ್ಗೆ ಕಿಂಚಿತ್ತೂ ವಿಶ್ಲೇಷಣೆಯಿಲ್ಲ.

ಭಾಷಣದಲ್ಲಿನ ರಾಜಕೀಯ ಸ್ಪಷ್ಟವಾಗಿಯೇ 2024ರ ಲೋಕಸಭೆ ಚುನಾವಣೆಯ ರಂಗನ್ನು ಹೊಂದಿತ್ತು. ಹಿಂದಿನ ಸ್ವಾತಂತ್ರ್ಯ ದಿನದ ಭಾಷಣಗಳಂತಲ್ಲದೆ ಈ ಸಲ ಅವರು ಪ್ರತಿಪಕ್ಷಗಳ ಮೇಲೆ ತೀವ್ರ ದಾಳಿ ನಡೆಸಿದರು. ವಂಶ ರಾಜಕಾರಣ, ಭ್ರಷ್ಟಾಚಾರ ಮತ್ತು ತುಷ್ಟೀಕರಣ ರಾಜಕೀಯದ ಮೇಲೆ ದಾಳಿ ಮಾಡಿದರು. ತನ್ನ ಪ್ರೀತಿಯ ವಿಚಾರವನ್ನು ಮತ್ತೆ ಪ್ರಸ್ತಾಪಿಸಿದ ಮೋದಿ, ಕುಟುಂಬ ರಾಜಕಾರಣದ ಪಕ್ಷಗಳು ಒಂದು ‘ಕಾಯಿಲೆ’ ಮತ್ತು ಭಾರತೀಯ ಪ್ರಜಾಪ್ರಭುತ್ವದ ‘ವಿರೂಪ’ ಆಗಿದೆ ಎಂದರು. ಆದರೆ, ವಂಶ ರಾಜಕಾರಣ ವಿರುದ್ಧದ ಅವರ ಈ ವಾಗ್ದಾಳಿಯ ವೇಳೆ, ಬಿಜೆಪಿಯೊಳಗಡೆಯೇ ರಾಜ್ಯಗಳು ಮತ್ತು ರಾಷ್ಟ್ರ ಮಟ್ಟಗಳಲ್ಲಿ ಹೆಚ್ಚೆಚ್ಚು ರಾಜಕೀಯ ವಂಶಗಳೇ ಪ್ರಮುಖ ಸ್ಥಾನಗಳನ್ನು ಹೊಂದಿರುವ ವಾಸ್ತವವನ್ನು ಅವರು ನಿರ್ಲಕ್ಷಿಸಿದ್ದಾರೆ.

ಭಾಷಣದಲ್ಲಿನ ಭ್ರಷ್ಟಾಚಾರ ವಿರುದ್ಧದ ಅವರ ಆರ್ಭಟವು ಪ್ರತಿಪಕ್ಷಗಳ ವಿರುದ್ಧ ಇನ್ನೊಂದು ಸಂಭಾವ್ಯ ಆಯುಧ ಒದಗಿಸಿದೆ. ಅನುಷ್ಠಾನ ನಿರ್ದೇಶನಾಲಯವನ್ನು (ಇ.ಡಿ.) ಪ್ರತಿಪಕ್ಷಗಳ ನಾಯಕರನ್ನು ಬಗ್ಗುಬಡಿಯಲು ಒಂದು ಅಸ್ತ್ರವನ್ನಾಗಿ ಮಾಡಿಕೊಳ್ಳಲಾಗಿದೆ. ಇವರು ಹೇಳುವ ಭ್ರಷ್ಟಾಚಾರವೆನ್ನುವುದು ಪ್ರತಿಪಕ್ಷಗಳ ವಿರುದ್ಧದ ಒಂದು ಅಸ್ತ್ರವಷ್ಟೇ ಎನ್ನುವುದು ಸ್ಪಷ್ಟವಾಗಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರದ ದಾಖಲೆಗಳನ್ನು ನಾವು ಕಂಡಿದ್ದೇವೆ ಹಾಗೂ ಮೋದಿ ಅವುಗಳನ್ನು ಹೇಗೆ ನಿರ್ವಹಿಸಿದ್ದಾರೆ ಎನ್ನುವುದನ್ನೂ ನೋಡಿದ್ದೇವೆ. ರಫೇಲ್ ಯುದ್ಧ ವಿಮಾನ ಖರೀದಿಯಲ್ಲಿನ ಕಣ್ಣಿಗೆ ರಾಚುವಂಥ ಅಪಾರ ವ್ಯತ್ಯಾಸಗಳನ್ನು ಮುಚ್ಚಿ ಹಾಕಲಾಗಿದೆ. ಹೆದ್ದಾರಿಗಳ ನಿರ್ಮಾಣ ಮತ್ತು ಪಿಎಂ–ಜೆಎವೈನಂಥ ವಿವಿಧ ಕೇಂದ್ರ ಸರಕಾರಿ ಯೋಜನೆಗಳ ಅನುಷ್ಠಾನದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದನ್ನು ಇತ್ತೀಚಿನ ಸಿಎಜಿ ವರದಿ ಬಟಾಬಯಲುಗೊಳಿಸಿದೆ.

ಸೂಕ್ಷ್ಮವಾದ ಈಶಾನ್ಯ ರಾಜ್ಯವು ಹೇಗೆ ಜನಾಂಗೀಯ ಘರ್ಷಣೆ ಮತ್ತು ಅರಾಜಕತೆಗೆ ಜಾರಿತು ಎನ್ನುವ ಬಗ್ಗೆ ಕಿಂಚಿತ್ತೂ ವಿಶ್ಲೇಷಣೆಯಿಲ್ಲ.

‘ತುಷ್ಟೀಕರಣ’ ರಾಜಕಾರಣದ ಮೇಲಿನ ದಾಳಿ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಹೊಸ ಅಂಶವಾಗಿದೆ ಹಾಗೂ ಅದು ಭಯಾನಕ ಅಪಶಕುನಕಾರಿಯಾಗಿದೆ. ತುಷ್ಟೀಕರಣ ಎಂದರೆ ಅಲ್ಪಸಂಖ್ಯಾತರ ತುಷ್ಟೀಕರಣ ಎಂದರ್ಥ. ಈ ತುಷ್ಟೀಕರಣವು ರಾಷ್ಟ್ರೀಯ ಸ್ವರೂಪಕ್ಕೆ ಒಂದು ಕಪ್ಪುಚುಕ್ಕೆಯಾಗಿದೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಅದರಿಂದ ಹಾನಿಯಾಗಿದೆ ಎನ್ನುತ್ತಾರೆ ಮೋದಿ. ಕೆಲವೇ ದಿನಗಳ ಹಿಂದೆ ವ್ಯಾಪಕ ಕೋಮು ಹಿಂಸಾಚಾರ ನಡೆದ ನುಹ್‌ನಿಂದ ಕೇವಲ 70 ಕಿಲೋ ಮೀಟರ್ ದೂರದಲ್ಲಿರುವ ಕೆಂಪು ಕೋಟೆಯ ಆವರಣದಿಂದ ಮೋದಿ ಅಲ್ಪಸಂಖ್ಯಾತರನ್ನು ತುಷ್ಟೀಕರಿಸುವುದನ್ನು ಖಂಡಿಸಿದರು. ನುಹ್ ಹಿಂಸಾಚಾರಗಳಲ್ಲಿ ಹಿಂದುತ್ವವಾದಿ ಗೂಂಡಾಗಳ ಆಕ್ರಮಣದಿಂದ ಹೆಚ್ಚು ಕಷ್ಟ ಅನುಭವಿಸಿದವರು ಮಿಯೋ ಮುಸ್ಲಿಮರು. ಹರಿಯಾಣ ರಾಜ್ಯದ ಆಡಳಿತ ಕೂಡ ಮುಸ್ಲಿಮರನ್ನೇ ಟಾರ್ಗೆಟ್ ಮಾಡಿತ್ತು. ಮುಸ್ಲಿಮರ ಮನೆಗಳು ಮತ್ತು ಅಂಗಡಿಗಳನ್ನು ಆಡಳಿತದವರು ಬುಲ್ಡೋಜರ್‌ಗಳಿಂದ ನಿರ್ಮೂಲ ಮಾಡುತ್ತಿರುವ ವೇಳೆ ಮೋದಿ ಅಲ್ಪಸಂಖ್ಯಾತ ತುಷ್ಟೀಕರಣವನ್ನು ಖಂಡಿಸುವುದು ಮುಂದಿನ ವರ್ಷದ ಲೋಕಸಭೆ ಚುನಾವಣೆಗೆ ಸಿದ್ಧತೆಯಾಗಿ ಕೋಮು ಧ್ರುವೀಕರಣ ಮಾಡುವುದು ಎಂದಾಗಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ, ನರೇಂದ್ರ ಮೋದಿಯವರ 10ನೇ ಸ್ವಾತಂತ್ರ್ಯ ದಿನದ ಭಾಷಣವು ಬಿಜೆಪಿ–ಆರ್‌ಎಸ್‌ಎಸ್ ಕೂಟದ ವಿಷಮಯ ರಾಜಕೀಯದ ನಗ್ನ ಪ್ರದರ್ಶನವಾಗತ್ತು.

ಅನು: ವಿಶ್ವ

ಬೋಧಕರು ಸ್ವಲ್ಪ ಪ್ರಯತ್ನಿಸಿದರೆ ಹೊಸ ವಿಧಾನಗಳನ್ನು ಹುಡುಕುವುದು ಕಷ್ಟವಲ್ಲ. 3) ಶಿಕ್ಷಣ ಸಂಸ್ಥೆ ಮತ್ತು ತರಗತಿಗಳ ಎಲ್ಲ ಚಟುವಟಿಕೆಗಳು, ಕಾರ್ಯಕ್ರಮಗಳು, ಸಭೆ, ಸಮಾರಂಭಗಳು ಸಂವಿಧಾನಿಕ, ಪ್ರಜಾಪ್ರಭುತ್ವ ಹಾಗು ಜಾತ್ಯಾತೀತ ಮೌಲ್ಯಗಳಿಗೆ ಅನುಸಾರ ನಡೆಯಬೇಕು.

ಜ್ಞಾನ ಅನ್ವಯಿಕೆಯ ಸಮಸ್ಯೆಗಳು

ಶಿಕ್ಷಣ ಸಂಸ್ಥೆಗಳು ಸೃಷ್ಟಿಸುವ ಜ್ಞಾನವನ್ನು ಆರ್ಥಿಕ ಚಟುವಟಿಕೆಗಳ (ಜಿಡಿಪಿ) ವೃದ್ಧಿಗೆ ಬಳಸುವುದನ್ನೇ ಜ್ಞಾನ ಅನ್ವಯಿಕೆ ಎಂದು ಭಾವಿಸಿವೆ. ಇಂತಹ ನಂಬಿಕೆ ಶಿಕ್ಷಣ ಸಂಸ್ಥೆಗಳ ಬಹುತೇಕ ಭಾಗವನ್ನು ಆವರಿಸಿಕೊಂಡಿದೆ. ಸರಕುಸೇವೆಗಳ ಉತ್ಪಾದನೆಯ ವೃದ್ಧಿ ಅವಶ್ಯ. ಹಾಗೆಂದು ಸರಕುಸೇವೆಗಳ ಉತ್ಪಾದನೆ ಹಾಗು ಪೂರೈಕೆ ಹೆಚ್ಚಾದ ಕೂಡಲೇ ಸಮಾಜದ ಎಲ್ಲರ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಸರಕುಸೇವೆಗಳ ಉತ್ಪಾದನೆಯಲ್ಲಿ ಜಾನಪದೀಯರು ಪಾಲ್ಗೊಳ್ಳಲು ಸಾಧ್ಯವಾದರೆ ಮಾತ್ರ ಅನುಭೋಗದಲ್ಲೂ ಪಾಲ್ಗೊಳ್ಳಲು ಸಾಧ್ಯ. ಇಲ್ಲವಾದರೆ ಇವರು ಸರಕಾರದ ‘ಕನಿಷ್ಠ ಆದಾಯದ ಕಾರ್ಯಕ್ರಮವನ್ನು ಅವಲಂಬಿಸಿ’ ಬದುಕಬೇಕಾಗುತ್ತದೆ. ಆದುದರಿಂದ ಆರ್ಥಿಕ ಪ್ರಗತಿಯಲ್ಲಿ ಸಮಾಜದ ಎಲ್ಲರೂ ಪಾಲ್ಗೊಳ್ಳುವುದು ಅನಿವಾರ್ಯ. ಆದರೆ ಈ ಕೆಳಗಿನ ತೊಡಕುಗಳು ಇವೆ. 1) ಲಿಂಗ, ಜಾತಿ, ಧರ್ಮ ತಾರತಮ್ಯಗಳು ಸೃಷ್ಟಿಸುವ ‘ಸಾಮಾಜಿಕ ಅಸಾಮಾರ್ಥ್ಯ’ಗಳು. 2) ಜನರ ಉಣ್ಣುವ, ಪೂಜಿಸುವ, ಪ್ರೀತಿಸುವ ವಿಷಯಗಳನ್ನು ಬಳಸಿಕೊಂಡು ನಡೆಸುವ ಸಾಂಸ್ಕೃತಿಕ ರಾಜಕೀಯ ಸೃಷ್ಟಿಸುವ ‘ಸಾಂಸ್ಕೃತಿಕ ಅಸಾಮಾರ್ಥ್ಯ’ಗಳು ಮತ್ತು 3) ಬಲವಾದ ದೇಶ ಕಟ್ಟುವ ನೆಪದಲ್ಲಿ ನಡೆಸುವ ‘ಕೇಂದ್ರೀಕೃತ ರಾಜಕೀಯ’ ಸೃಷ್ಟಿಸುವ ರಾಜಕೀಯ ಅಸಾಮಾರ್ಥ್ಯಗಳು ಉತ್ಪಾದಕರಿಗೆ ಆರ್ಥಿಕ ಪ್ರಗತಿಯಲ್ಲಿ ಪಾಲುಗೊಳ್ಳಲು ಅಡ್ಡಿಯಾಗಿವೆ.

ಸಾಮಾಜಿಕ, ಸಾಂಸ್ಕೃತಿಕ ಹಾಗು ರಾಜಕೀಯ ಅಸಾಮರ್ಥ್ಯಗಳನ್ನು ಹೋಗಲಾಡಿಸುವ ಉದ್ದೇಶದಿಂದ ಜಾರಿಗೆ ತಂದ ಕಾಯಿದೆ ಕಾನೂನುಗಳಿವೆ. ವರದಕ್ಷಿಣೆ ನಿಷೇಧ, ಭ್ರೂಣಹತ್ಯೆ ನಿಷೇಧ, ಲೈಂಗಿಕ ದೌರ್ಜನ್ಯ ತಡೆ, ಅಸ್ಪ್ರಶ್ಯತೆ ನಿಷೇಧ ಕಾಯಿದೆಗಳಿವೆ. ಆದರೆ ಅವುಗಳಿಗೆ ಸಾಮಾಜಿಕ, ಸಾಂಸ್ಕೃತಿಕ ಒಪ್ಪಿಗೆ ಇಲ್ಲದ ಕಾರಣ ಅವು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಆದುದರಿಂದ ಜ್ಞಾನ ಅನ್ವಯಿಕೆಯ ವ್ಯಾಪ್ತಿಯನ್ನು ಆರ್ಥಿಕ ಪ್ರಗತಿಗೆ ಸೀಮಿತಗೊಳಿಸುವ ಬದಲು ಸಾಮಾಜಿಕ, ಸಾಂಸ್ಕೃತಿಕ ಹಾಗು ರಾಜಕೀಯ ಕ್ಷೇತ್ರಗಳಿಗೂ ವಿಸ್ತರಿಸುವ ಅವಶ್ಯಕತೆ ಇದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ವಾತಂತ್ರ್ಯಗಳಿಲ್ಲದೆ ರಾಜಕೀಯ ಸಾತಂತ್ರಕ್ಕೆ ಅರ್ಥ ಇರುವುದಿಲ್ಲ ಎನ್ನುವ ಅಂಬೇಡ್ಕರ್ ಮಾತುಗಳು ಇಲ್ಲೂ ಅನ್ವಯವಾಗುತ್ತವೆ. ಮುಕ್ತ ಮಾರುಕಟ್ಟೆ ಬಗ್ಗೆ ಮಾತಾಡುವಾಗ ಮುಕ್ತ ಸಮಾಜದ ಬಗ್ಗೆಯೂ ಮಾತಾಡಬೇಕಾಗುತ್ತದೆ. ಏಕೆಂದರೆ ಮುಕ್ತ ಸಮಾಜದಲ್ಲಿ ಮಾತ್ರ ಮುಕ್ತ ಮಾರುಕಟ್ಟೆ ಸಮಾಜದ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯ.

ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ವಹಣೆ

ವರ್ತಮಾನದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಸಂಪನ್ಮೂಲದ, ಆಕಾಡೆಮಿಕ್, ಆಡಳಿತಾತ್ಮಕ ಮತ್ತು ಮಾನವ ಸಂಪನ್ಮೂಲ ಸೃಷ್ಟಿಸುವ ಸಮಸ್ಯೆಗಳನ್ನು ಎದುರಿಸುತ್ತಿವೆ. 1) ಸಂಪನ್ಮೂಲಕ್ಕೆ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಸಂಪೂರ್ಣವಾಗಿ ಸರಕಾರವನ್ನು ಅವಲಂಬಿಸಿವೆ. ಕೆಲವು ವಿಶ್ವವಿದ್ಯಾಲಯಗಳ ಸ್ವಾಧೀನ ನೂರಾರು ಎಕರೆ ಭೂಮಿ ಮತ್ತು ಇತರ ಭೌತಿಕ ಸವಲತ್ತುಗಳಿವೆ. ಇವನ್ನು ಆದಾಯ ಹುಟ್ಟು ಹಾಕುವ ಯೋಜನೆಗಳಲ್ಲಿ ಬಳಸಿಕೊಳ್ಳಬಹುದು. 2) ಸೇವಾ ‘ಹಿರಿತನ’ ಮತ್ತು ಹೊಣೆಗಾರಿಕೆ ರಹಿತ ‘ಅಕಾಡೆಮಿಕ್ ಬಾಡಿಗಳು’ ಶೈಕ್ಷಣಿಕ ನಿರ್ವಹಣೆ ಮಾಡುತ್ತಿವೆ. ಇದು ಕೇವಲ ಶಿಕ್ಷಣ ಸಂಸ್ಥೆಯ ಸಮಸ್ಯೆಯಲ್ಲ. ಎಲ್ಲ ಸಂಸ್ಥೆಗಳಲ್ಲೂ ಈ ಸಮಸ್ಯೆ ಇದೆ. ಇದರಿಂದಾಗಿ ಮಹಾನ್ ಮೂರ್ಖರನ್ನು ಉನ್ನತ ಹುದ್ದೆಗಳಲ್ಲಿ ನೋಡುತ್ತಿದ್ದೇವೆ. ಹೊಣೆಗಾರಿಕೆ ಕೊರತೆಯಿಂದ ಎಲ್ಲ ಕ್ಷೇತ್ರಗಳಲ್ಲು ಬೇಕಾಬಿಟ್ಟಿ ತೀರ್ಮಾನ ಕೈಗೊಳ್ಳುವುದು ಸಾಮಾನ್ಯವಾಗಿದೆ. ಇವರ ಇಂತಹ ಬೇಕಾಬಿಟ್ಟಿ ತೀರ್ಮಾನಗಳಿಂದ ಸಾಮಾನ್ಯರು ಪಡಬಾರದ ಹಿಂಸೆ ಅನುಭವಿಸುತ್ತಿದ್ದಾರೆ. 3) ಬಂದವರಿಗೆಲ್ಲ ಡಿಗ್ರಿ ಕೊಡುವುದನ್ನೇ ಮಾನವ ಸಂಪನ್ಮೂಲ ಸೃಷ್ಟಿ ಎಂದು ಬಗೆಯಲಾಗಿದೆ. ಇವೆಲ್ಲವೂ ಬದಲಾಗಬೇಕಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ಬದಲೀ ಸಂಪನ್ಮೂಲ ಸೃಷ್ಟಿಯ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಎಕರೆ ಗಟ್ಟಲೆ ಭೂಮಿ ಇದ್ದ ವಿಶ್ವವಿದ್ಯಾಲಯಗಳು ಸೋಲಾರ್ ವಿದ್ಯುತ್ ಉತ್ಪಾದಿಸಿ ಸರಕಾರಕ್ಕೆ ಮಾರಬಹುದು, ಆಕಾಡೆಮಿಕ್ ಟೂರಿಸಂ ಅಥವಾ ಮೆಡಿಕಲ್ ಟೂರಿಸಂ ಬೆಳಸಬಹುದು ಹೀಗೆ ಶಿಕ್ಷಣ ಸಂಸ್ಥೆಯಲ್ಲಿ ದುಡಿಯುವವರು ಮನಸ್ಸು ಮಾಡಿದರೆ ಆದಾಯ ಗಳಿಸುವ ಹಲವು ದಾರಿಗಳನ್ನು ಹುಡುಕಬಹುದು. ಸೇವಾ ಹಿರಿತನಕ್ಕಿಂತ ವಿಷಯದ ಮೇಲಿನ ತಜ್ಞತೆ ಹಾಗು ಹೊಣೆಗಾರಿಕೆಗಳು ಅಕಾಡೆಮಿಕ್ ಬಾಡಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಡಿಗ್ರಿಗಿಂತ ಹೆಚ್ಚು ಕ್ರಿಯೇಟಿವ್, ಕ್ರಿಟಿಕಲ್ ಹಾಗು ಮುನ್ನುಗುವ ಛಾತಿಯುಳ್ಳ ಮಾನವ ಸಂಪನ್ಮೂಲ ಸೃಷ್ಟಿಗೆ ಒತ್ತು ನೀಡಬೇಕಾಗಿದೆ. ಇಂತಹ ಮಾನವ ಸಂಪನ್ಮೂಲ ಮಾತ್ರ ತನ್ನ ಕಣ್ಣ ಮುಂದಾಗುವ ಅನ್ಯಾಯಗಳನ್ನು ಪ್ರಶ್ನಿಸುವ ಮತ್ತು ಸೋತವರೊಂದಿಗೆ ನಿಲ್ಲುವ ಧೈರ್ಯ ಪ್ರದರ್ಶಿಸಲು ಸಾಧ್ಯ.

ಸಮಾರೋಪ

ಶಿಕ್ಷಣ ಅದರಲ್ಲೂ ಉನ್ನತ ಶಿಕ್ಷಣ ಸಂವಿಧಾನವನ್ನು ಅನುಷ್ಠಾನಗೊಳಿಸುವ ಎಲ್ಲರನ್ನು ಸೃಷ್ಟಿಸುತ್ತದೆ. ಜೊತೆಗೆ ವೈದ್ಯರು, ಎಂಜಿನೀಯರ್, ನ್ಯಾಯಧೀಶರು, ವಕೀಲರು, ಉಪನ್ಯಾಸಕರು, ಅಧಿಕಾರಿಗಳು ಎಲ್ಲರನ್ನೂ ಸೃಷ್ಟಿಸುತ್ತದೆ. ಆದುದರಿಂದ ಉದ್ಯೋಗದ ಪರಿಣಿತಿಯಷ್ಟೇ ಮಹತ್ವವನ್ನು ಶಿಕ್ಷಿತರು ರೂಢಿಸಿಕೊಳ್ಳಬೇಕಾದ ಸಂವಿಧಾನಿಕ ಮೌಲ್ಯಗಳಿಗೆ ನೀಡಬೇಕಾಗುತ್ತದೆ. ಸಂವಿಧಾನಿಕ ಮೌಲ್ಯಗಳನ್ನು ಶಿಕ್ಷಣ ನೀಡಲು ಸೋತರೆ (ಸೋತಿದೆ) ಆಧುನಿಕ ಸಂಸ್ಥೆಗಳಲ್ಲಿ ವಸಾಹತುಶಾಹಿ/ಊಳಿಗಮಾನ್ಯ ಮೌಲ್ಯಗಳ ಮಿಶ್ರಣಗಳು ಕಾರುಬಾರು ಮಾಡಬಹುದು (ಮಾಡುತ್ತಿವೆ). ಶಾಸಕಾಂಗ, ಕಾಯಾಂಗ, ನ್ಯಾಯಾಂಗ, ಮಾಧ್ಯಮ ಎಲ್ಲ ಕಡೆಗಳಲ್ಲೂ ಸಂವಿಧಾನಿಕ ಮೌಲ್ಯಗಳ ಬದಲು ಬ್ರಾಹ್ಮಣ್ಯದ ಮೌಲ್ಯಗಳು ಕಾರಬಾರು ಮಾಡುತ್ತಿವೆ. ಕೆಲವು ಪಕ್ಷಗಳು ನೇರವಾಗಿ ಬ್ರಾಹ್ಮಣ್ಯವನ್ನು ಪ್ರತಿಪಾದಿಸಿದರೆ ಇನ್ನೂ ಕೆಲವು ಲಿಬರಲ್ ಪಕ್ಷಗಳು ಪರೋಕ್ಷವಾಗಿ ಬ್ಯಾಹ್ಮಣ್ಯವನ್ನು ಪ್ರತಿಪಾದಿಸುತ್ತಿವೆ. ಬ್ರಾಹ್ಮಣ್ಯವನ್ನು ನೇರವಾಗಿ ಪ್ರತಿಪಾದಿಸುವ ಪಕ್ಷಗಳು ಶಿಕ್ಷಣ ನೀತಿಗಳನ್ನು, ಸಂಸ್ಥೆಗಳನ್ನು ಸಂಪೂರ್ಣವಾಗಿ ತಮ್ಮ ಪಾರ್ಟಿ ಏಜಂಡಾವನ್ನು ಜಾರಿ ತರಲು ಪೂರಕವಾಗಿ ರೂಪಿಸುತ್ತಿವೆ. ಲಿಬರಲ್ ಪಕ್ಷಗಳು ಶಿಕ್ಷಣ ನೀತಿಗಳನ್ನು ರೂಪಿಸುವಾಗ ಸಂವಿಧಾನವನ್ನು ಜಾರಿಗೊಳಿಸುವ ಮಾನವ ಸಂಪನ್ಮೂಲ ಸೃಷ್ಟಿಸುವುದಕ್ಕಿಂತ ಹೆಚ್ಚು ಮಾರುಕಟ್ಟೆಯಲ್ಲಿ ಬೇಡಿಕೆಯುಳ್ಳ ಮಾನವ ಸಂಪನ್ಮೂಲ ಸೃಷ್ಟಿಗೆ ಮಹತ್ವ ನೀಡುತ್ತಿವೆ. ಹೀಗೆ ಶಿಕ್ಷಣ ಸೋಲುತ್ತಿದೆ ಆದುದರಿಂದ ಸಂವಿಧಾನ ಸೋಲುತ್ತಿದೆ. ಸಂವಿಧಾನ ಸೋಲಬಾರದೆಂದಾದರೆ ಸಂವಿಧಾನ ಉದ್ದೇಶಿಸಿರುವ ಸಮಾಜ ನಿರ್ಮಿಸುವ ಮಾನವ ಸಂಪನ್ಮೂಲ ಸೃಷ್ಟಿ ಶಿಕ್ಷಣದ ಉದ್ದೇಶ ಆಗಬೇಕು.

ರಾಜ್ಯದಲ್ಲೂ ಬೇಕಿದೆ 'ನಗರ ಉದ್ಯೋಗ ಖಾತ್ರಿ ಯೋಜನೆ'

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತೆ ಕೇರಳ ರಾಜ್ಯದ ಎಡರಂಗ ಸರ್ಕಾರವು 'ಅಯ್ಯಂಕಾಳಿ ನಗರ ಉದ್ಯೋಗ ಖಾತ್ರಿ ಯೋಜನೆ'ಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಯನ್ನು ನಗರ ವ್ಯವಹಾರಗಳ ನಿರ್ದೇಶನಾಲಯ ಕೇರಳ ವಿಭಾಗವು ಜಾರಿಗೊಳಿಸಿದೆ. ವರ್ಷದಲ್ಲಿ ಸಾಕಷ್ಟು ಕೆಲಸ ಇಲ್ಲದಿದ್ದಾಗ ಕುಟುಂಬಕ್ಕೆ 100 ದಿನ ಕೆಲಸ ನೀಡುವ ಮೂಲಕ ಬಡವರಿಗೆ ಆಸರೆಯಾಗುವುದು ಈ ಯೋಜನೆಯ ಉದ್ದೇಶವಾಗಿದೆ. ಪಾಲಿಕೆ ಮತ್ತು ಪುರಸಭೆಗಳಲ್ಲಿ ಹೆಸರು ನೋಂದಾಯಿಸಿದ 15 ದಿನಗಳೊಳಗೆ ಜಾಬ್ ಕಾರ್ಡ್ ನೀಡಲಾಗುವುದು ಮತ್ತು ಕೆಲಸಕ್ಕೆ ಅರ್ಜಿ ಸಲ್ಲಿಸಿದ 15 ದಿನಗಳಲ್ಲಿ ಕೆಲಸ ನೀಡಲಾಗುವುದು.

ಕರ್ನಾಟಕದಲ್ಲಿಯೂ ಈ ವರ್ಷ ಸಕಾಲಕ್ಕೆ ಮಳೆಯಾಗದ ಕಾರಣ ಹಲವು ಜಿಲ್ಲೆಗಳಲ್ಲಿ ಕೃಷಿ ಉತ್ಪಾದನೆ ಗಣನೀಯವಾಗಿ ಕುಸಿದಿದೆ. ಇದರಿಂದ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಹೆಚ್ಚಾಗಲಿದೆ. ಇಂತಹ ಸಂದರ್ಭಗಳಲ್ಲಿ ನಗರ ಪ್ರದೇಶದ ಬಡವರಿಗೆ ಉದ್ಯೋಗ ಕಲ್ಪಿಸಲು ಸರ್ಕಾರ ಆದ್ಯತೆ ನೀಡಬೇಕು. ದೇಶಾದ್ಯಂತ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಲು ಕೇಂದ್ರದ ಮೇಲೆ ಒತ್ತಡತರಬೇಕು. ನಗರ ಉದ್ಯೋಗ ಖಾತ್ರಿ ಯೋಜನೆ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ರಾಜ್ಯದ ಸಂಸದರು ಪ್ರಾಮಾಣಿಕವಾಗಿ ಶ್ರಮಿಸಬೇಕು. ಕೇರಳದಂತೆ ನಮ್ಮ ರಾಜ್ಯದಲ್ಲೂ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತರಬೇಕು.



ಇಂದು ನಗರಗಳಲ್ಲಿನ ಜನಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಜನಸಂಖ್ಯೆಯ ಬೆಳವಣಿಗೆಗೆ ಅನುಗುಣವಾಗಿ ನಗರಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿಲ್ಲ. ಮತ್ತೊಂದೆಡೆ, ಕೃಷಿಯಲ್ಲಿನ ಬದಲಾವಣೆಗಳು ಬಡವರನ್ನು ಹಳ್ಳಿಗಳಿಂದ ನಗರಗಳಿಗೆ ಓಡಿಸುತ್ತಿವೆ. ನಗರಗಳಲ್ಲಿನ ಕೊಳೆಗೇರಿಗಳ ಸಂಖ್ಯೆ ಹೆಚ್ಚುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ನಗರ ಸುಧಾರಣೆಗಳು ಬಡ ಮತ್ತು ಮಧ್ಯಮ ವರ್ಗದ ಜನರ ಮೇಲೆ ಹೆಚ್ಚಿನ ಹೊರೆಗಳನ್ನು ಹಾಕುತ್ತಿವೆ. ನಗರಗಳಿಗೆ ಅತಿಕ್ರಮಣ ಮಾಡುತ್ತಿರುವ ಕಾರ್ಪೊರೇಟ್‌ಗಳು ಸಣ್ಣ ಉದ್ಯಮಗಳು, ಸ್ವಯಂ ಉದ್ಯೋಗಗಳು ಮತ್ತು ಕುಶಲಕರ್ಮಿಗಳ ಉದ್ಯೋಗಗಳನ್ನು ನಾಶ ಮಾಡುತ್ತಿವೆ. ವಸತಿ, ಆಹಾರ, ಶಿಕ್ಷಣ ಮತ್ತು ವೈದ್ಯಕೀಯ ವೆಚ್ಚಗಳು ಭಾರೀ ಹೊರೆಯಾಗಿವೆ. ಇದರಿಂದಾಗಿ ನಗರಗಳಲ್ಲಿ ಬಡತನ ತೀವ್ರವಾಗಿ ಹೆಚ್ಚುತ್ತಿದೆ. ಆಹಾರದ ಕೊರತೆ, ಕುಟುಂಬಗಳ ಸಾಲದ ಹೊರೆ ಮತ್ತು ಮಾನಸಿಕ ಒತ್ತಡಗಳು ತೀವ್ರಗೊಳ್ಳುತ್ತಿವೆ.

ನಗರ ಜನಸಂಖ್ಯೆಯು ದೇಶದ ಜನಸಂಖ್ಯೆಯ ಸುಮಾರು ಶೇ. 38ರಷ್ಟಿದೆ. ನಗರಗಳ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಪ್ರಮುಖವಾಗಿದೆ. ಕರೋನಾ ಸಮಯದಲ್ಲಿ, ನಗರಗಳ ಬಡವರು ತಮ್ಮ ಹಳ್ಳಿಗಳಿಗೆ ಹೋದಂತೆ ನಗರಗಳು ಎಷ್ಟು ಸೊರಗಿದವು ಎಂಬುದನ್ನು ನಾವು ನೋಡಿದ್ದೇವೆ. ದೇಶದ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ನಗರ–ಪಟ್ಟಣಗಳ ಪಾಲು ಶೇ. 62ರಷ್ಟಿದೆ. ಇಲ್ಲಿನ ಕಾರ್ಮಿಕರ ದುಸ್ಥಿತಿ ಗಮನಾರ್ಹವಾಗಿದೆ. ಅಂತಹ ಕಾರ್ಮಿಕರಿಗೆ ಕೆಲಸ ನೀಡುವುದು ಸರ್ಕಾರಗಳ ಜವಾಬ್ದಾರಿ. ಯುಪಿಎ ಒಂದರ ಆಡಳಿತಾವಧಿಯಲ್ಲಿ ಎಡಪಕ್ಷಗಳ ಒತ್ತಡದಿಂದ ತಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಗರಗಳಲ್ಲಿಯೂ ಜಾರಿಗೊಳಿಸಬೇಕು. ರಾಷ್ಟ್ರೀಯ ನಗರ ಉದ್ಯೋಗ ಖಾತ್ರಿ ಯೋಜನೆ ಅಗತ್ಯವಿದೆ. ಕೆಲಸ ಮಾಡಲು ಸಾಧ್ಯವಾಗುವ ನಗರ ಕಾರ್ಮಿಕರಿಗೆ ವರ್ಷದಲ್ಲಿ 100 ದಿನ ಕೆಲಸ ನೀಡಲು ಕಾನೂನು ಮಾಡುವಂತೆ ಸಿಪಿಎಂ ಮತ್ತು ಎಡಪಕ್ಷಗಳು ಹಲವು ವರ್ಷಗಳಿಂದ ಕೇಂದ್ರಕ್ಕೆ ಒತ್ತಾಯಿಸುತ್ತಿವೆ. ಕೇರಳದಲ್ಲಿ ಸಿಪಿಎಂ ನೇತೃತ್ವದ ಎಡರಂಗ ಸರಕಾರ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಿ ದೇಶಕ್ಕೆ ಮಾದರಿಯಾಗಿದೆ. ಇತ್ತೀಚೆಗೆ ಮುಕ್ತಾಯಗೊಂಡ ಸಂಸತ್ತಿನ ಅಧಿವೇಶನದಲ್ಲಿ, ಆಗಸ್ಟ್ 5 ರಂದು ಅನಂತಪುರದ ಸಂಸದರಾದ ತಳರಿ ರಂಗಯ್ಯ ಅವರು ರಾಷ್ಟ್ರಧ್ವಜದ ವಾಸ್ತುಶಿಲ್ಪಿ ಪಿಂಗಲಿ ವೆಂಕಯ್ಯ ಅವರ ಹೆಸರಿನ 'ರಾಷ್ಟ್ರೀಯ ನಗರ ಉದ್ಯೋಗ ಖಾತರಿ ಯೋಜನೆ'ಗೆ ಖಾಸಗಿ ಸದಸ್ಯರ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದರು.

ನಗರೀಕರಣ–ಬಡತನ

ಬ್ರಿಟಿಷರ ಆಳ್ವಿಕೆಯಲ್ಲಿ ಅವರು ಅನುಸರಿಸಿದ ನೀತಿಗಳಿಂದ ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಆಗಲಿಲ್ಲ. ನಗರೀಕರಣವು ಬಹಳ ನಿಧಾನವಾಗಿ ಪ್ರಾರಂಭವಾಯಿತು ಮತ್ತು ನಿಧಾನವಾಗಿ ಮುಂದುವರೆಯಿತು. 1951 ರಿಂದ 2001 ರವರೆಗೆ ದೇಶದಲ್ಲಿ ಕೇವಲ 2125 ಪಟ್ಟಣಗಳು ಮತ್ತು ನಗರಗಳು ಇದ್ದವು. 2001 ರಿಂದ 2011 ರವರೆಗೆ 2771, ಈಗ ಮೂರು ಸಾವಿರಕ್ಕೂ ಹೆಚ್ಚು ನಗರಗಳಿವೆ. 1971–81ರ ನಡುವೆ ಸಾರ್ವಜನಿಕ ವಲಯದ ಉದ್ಯಮಗಳ ವಿಸ್ತರಣೆಯಿಂದಾಗಿ ನಗರ ಜನಸಂಖ್ಯೆಯು 2001 ರವರೆಗೆ ಬೆಳೆಯುತ್ತಲೇ ಇತ್ತು. ನಂತರದ ಅವಧಿಯಲ್ಲಿ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳ ಅಭಿವೃದ್ಧಿ ಕುಂಠಿತಗೊಂಡರೂ, ಕೃಷಿ ಕೈಗೆಟುಕದೆ ಯುವಕರು ನಗರಗಳತ್ತ ಬಂದರು. ಕೆಲವು ಶ್ರೀಮಂತ ರೈತರು ಪಟ್ಟಣಗಳಲ್ಲಿ ನೆಲೆಸಿದರು ಮತ್ತು ಅವರ ಮಕ್ಕಳು ಶಿಕ್ಷಣಕ್ಕಾಗಿ ಪಟ್ಟಣಗಳಿಗೆ ಬಂದು ನಂತರ ಅಲ್ಲಿಯೇ ನೆಲೆಸಿದರು. ದಲಿತರು ತಮ್ಮ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಮತ್ತು ಜಾತಿ ತಾರತಮ್ಯದಿಂದ ಪಾರಾಗಲು ನಗರ ಪ್ರದೇಶಗಳಿಗೆ ಬಂದು ನೆಲೆಸುತ್ತಿದ್ದಾರೆ. ಇವುಗಳೊಂದಿಗೆ ಸುತ್ತಮುತ್ತಲಿನ ಹಳ್ಳಿಗಳು ನಗರಗಳಲ್ಲಿ ವಿಲೀನಗೊಂಡಿದ್ದರಿಂದ ನಗರ ಜನಸಂಖ್ಯೆಯೂ ಹೆಚ್ಚಾಯಿತು. ಹೆಚ್ಚುತ್ತಿರುವ ಜನಸಂಖ್ಯೆಗೆ ಉದ್ಯೋಗ ಮತ್ತು ವಸತಿ ಕಲ್ಪಿಸುವುದು ಸರ್ಕಾರಗಳ ಜವಾಬ್ದಾರಿಯಾಗಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ದೇಶಾದ್ಯಂತ ನಗರಗಳಲ್ಲಿ 2 ಕೋಟಿ ಮನೆಗಳ ಕೊರತೆ ಇದೆ. ಕೇಂದ್ರದ ಬಿಜೆಪಿ ಸರ್ಕಾರವು 100 ಸ್ಮಾರ್ಟ್ ಸಿಟಿಗಳನ್ನು ನಿರ್ಮಿಸಲು 7,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ನಿರ್ಧರಿಸಿದೆ. ಇದರಲ್ಲಿ ವಸತಿ ಮತ್ತು ಉದ್ಯೋಗ ನೀಡುವ ಯೋಜನೆಗಳಿಲ್ಲ. ಆಳುವವರ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ ಸ್ಮಾರ್ಟ್ ಸಿಟಿಗಳ ನಿರ್ಮಾಣ ಮಾತ್ರ.

ಕಳೆದ 40 ವರ್ಷಗಳಲ್ಲಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹಿಂದೆಂದಿಗಿಂತಲೂ ಹೆಚ್ಚಾಗಿದ್ದು, ವಿದ್ಯಾವಂತ ನಿರುದ್ಯೋಗಿಗಳ ಜತೆಗೆ ತಮಗಿದ್ದ ಉದ್ಯೋಗ ಕಳೆದುಕೊಂಡವರೂ ಹೆಚ್ಚಾಗುತ್ತಿದ್ದಾರೆ. ಮಾರ್ಚ್ 14, 2022 ರಂದು ರಾಷ್ಟ್ರೀಯ ಅಂಕಿಅಂಶಗಳ ಬ್ಯೂರೋ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ನಗರ ನಿರುದ್ಯೋಗವು ಶೇ. 12.6 ಮತ್ತು ಮಹಿಳಾ ನಿರುದ್ಯೋಗವು ಶೇ. 14.3 ಆಗಿದೆ. ಈ ಸಂಖ್ಯೆಯು ವಾಸ್ತವವಾಗಿ ಶೇ. 20.8ಕ್ಕಿಂತ ಹೆಚ್ಚು ಎಂದು ತಜ್ಞರು ಅಂದಾಜಿಸಿದ್ದಾರೆ. ಇದರ ಜೊತೆಗೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಕಡಿಮೆ ಕೂಲಿ, ಅಸುರಕ್ಷಿತ ಉದ್ಯೋಗ... ಇವು ನಗರ ಪ್ರದೇಶದ ಬಡವರನ್ನು ಕಾಡುತ್ತಿರುವ ದೊಡ್ಡ ಸಮಸ್ಯೆಗಳಾಗಿವೆ.

ನಗರಗಳಲ್ಲಿನ ಬಡವರ ಪರಿಸ್ಥಿತಿಗಳು

ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಪ್ರಕಾರ ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಒಟ್ಟು ನಗರಗಳು 26. 2011ರಲ್ಲಿ ಈ 26 ನಗರಗಳ ಒಟ್ಟು ಜನಸಂಖ್ಯೆ 1,58,30,243. ಕಳೆದ 12 ವರ್ಷಗಳಲ್ಲಿ ಈ ಸಂಖ್ಯೆ ಬೃಹದಾಕಾರವಾಗಿ ಬೆಳೆದಿದೆ. ನಗರಗಳ ಜನಸಂಖ್ಯೆಯಲ್ಲಿ ಬೆಂಗಳೂರಿನ ಜನಸಂಖ್ಯೆಯೇ ಅರ್ಧದಷ್ಟಿದೆ. 2011ರಲ್ಲಿ 84 ಲಕ್ಷ ಇದ್ದ ಬೆಂಗಳೂರಿನ ಜನಸಂಖ್ಯೆ ಇಂದು 1.20 ಕೋಟಿ ದಾಟಿದೆ.

ಸರ್ಕಾರದ ಖಾಸಗೀ ಬಂಡವಾಳ ಪರ ನೀತಿಗಳಿಂದಾಗಿ ಮತ್ತು ಸಾರ್ವಜನಿಕ ಉದ್ಯಮಗಳನ್ನು ಆಧುನೀಕರಣಕ್ಕೆ ತಕ್ಕಂತೆ ಪರಿವರ್ತನೆ ಮಾಡದ ಕಾರಣಕ್ಕೆ ಕರ್ನಾಟಕದಲ್ಲಿ ಈ ಹಿಂದೆ ಇದ್ದ ಸಾವಿರಾರು ಜನರಿಗೆ ಉದ್ಯೋಗ ಕೊಡುತ್ತಿದ್ದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಒಡೆತನದ ಹಲವು ಬೃಹತ್ ಉದ್ಯಮಗಳು ಮುಚ್ಚಿಹೋಗಿವೆ. ಭಾರತ ಸರ್ಕಾರದ ವಿದೇಶಿ ಬಟ್ಟೆಗಳ ಆಮದು ನೀತಿ ಮತ್ತು ಆಧುನಿಕಗೊಂಡ ಯಂತ್ರಗಳಿಂದ ತಯ್ಯಾರಿಸಿದ ವಿದೇಶಿ ಬಟ್ಟೆಗಳ ದರ ಪೈಪೋಟಿ ತಾಳಲಾರದೆ, ಸಹಸ್ರಾರು ಜನರಿಗೆ ಉದ್ಯೋಗ ಕೊಡುತ್ತಿದ್ದ ನೂರಾರು ಹತ್ತಿ ಗಿರಣಿಗಳು ಮುಚ್ಚಿಹೋಗಿವೆ. ಎಣ್ಣೆ ಗಿರಣಿ, ಕೈಮಗ್ಗ, ಗುಡಿ ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸಾವಿರಾರು ಸಂಖ್ಯೆಯಲ್ಲಿ ಮುಚ್ಚಿ ಲಕ್ಷಾಂತರ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಒಕ್ಕೂಟ ಸರ್ಕಾರ BEML ಸಂಸ್ಥೆಯನ್ನು ಮಾರಾಟಕ್ಕೆ ಇಟ್ಟಿದೆ. HAL, BHEL, BEL ನಂತಹ ಸಂಸ್ಥೆಗಳಲ್ಲಿನ ಷೇರುಗಳನ್ನು ಮಾರಾಟ ಮಾಡುವ ಮೂಲಕ ಸರ್ಕಾರ ತನ್ನ ಪಾಲಿನ ಬಂಡವಾಳವನ್ನು ನಿರಂತರವಾಗಿ ಹಿಂಪಡೆಯುತ್ತಿದೆ. ಈ ಎಲ್ಲಾ ಸಂಸ್ಥೆಗಳನ್ನು ಖಾಸಗಿ ಬಂಡವಾಳಗಾರರಿಗೆ ಮಾರಾಟ ಮಾಡುವ ಗುರಿಯೊಂದಿಗೆ ಮುನ್ನುಗ್ಗುತ್ತಿದೆ. ಈ ಉದ್ಯಮಗಳಲ್ಲಿ ಉದ್ಯೋಗಿಗಳ ಖಾಯಂ ನೇಮಕಾತಿ ಬದಲಿಗೆ ಗುತ್ತಿಗೆ ಆಧಾರದ ಮೇಲೆ, ನಿಗದಿತ ಅವಧಿಗೆ ನೇಮಕ ಮಾಡಿಕೊಳ್ಳತೊಡಗಿವೆ. ಎಲ್ಲೆಡೆ ಉದ್ಯೋಗ ಲಭ್ಯತೆ ಕಡಿಮೆಯಾಗಿದೆ. ಲಭ್ಯವಿರುವ ಕೆಲವು ಉದ್ಯೋಗಗಳಿಗೆ ತೀವ್ರ ಪೈಪೋಟಿ ಇದೆ. ಇದರ ಪರಿಣಾಮವೆಂದರೆ, ಕಡಿಮೆ ವೇತನ ಮತ್ತು ಕಡಿಮೆ ಕೆಲಸದ ದಿನಗಳು. ನಗರ ಪ್ರದೇಶದ ಬಡವರ ಅತ್ಯಂತ ಅವಲಂಬಿತ ಕ್ಷೇತ್ರ ನಿರ್ಮಾಣ ವಲಯ. ಮಾಲ್‌ಗಳು, ಇವೆಂಟ್ ಮ್ಯಾನೇಜ್ಮೆಂಟ್, ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸೇವೆಗಳು, ರಿಯಲ್ ಎಸ್ಟೇಟ್, ಹಣಕಾಸು ಏಜೆಂಟ್‌ಗಳು, ಗಿಗ್ ವರ್ಕರ್‌ಗಳು, ಪ್ರವಾಸೋದ್ಯಮ, ಸಾರಿಗೆ, ಖಾಸಗಿ ಕಚೇರಿಗಳು, ಸಲಹಾ ಸಂಸ್ಥೆಗಳು, ಮನೆಕೆಲಸದಂತಹ ಕ್ಷೇತ್ರಗಳಲ್ಲಿ ಕೆಲವರು ಉದ್ಯೋಗಾವಕಾಶಗಳನ್ನು ಪಡೆಯುತ್ತಿದ್ದಾರೆ. 1993ರಿಂದ 2012ರವರೆಗೆ ದೇಶದಾದ್ಯಂತ ಉತ್ಪಾದನಾ ವಲಯದಲ್ಲಿ ಕೇವಲ 60 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ.

ಉದ್ಯೋಗ ಸೃಷ್ಟಿಸದ ಹೂಡಿಕೆಗಳು

ರಾಜ್ಯ ಸರ್ಕಾರ ಆಗಾಗ್ಗೆ ಜಾಗತಿಕ ಹೂಡಿಕೆದಾರರ ಸಮಾವೇಶ ಮಾಡುತ್ತಾ ಬಂದಿದೆ. ಕಳೆದ ವರ್ಷ ಅಂದರೆ, 2022 ರ ಜಾಗತಿಕ ಹೂಡಿಕೆದಾರರ ಸಭೆಯ ಸಂದರ್ಭದಲ್ಲಿಯೂ ಕರ್ನಾಟಕ ಸರ್ಕಾರವು ರೂ. 5.20 ಲಕ್ಷ ಕೋಟಿ ಮೌಲ್ಯದ ಹೂಡಿಕೆಯ ತಿಳುವಳಿಕೆ ಪತ್ರಗಳಿಗೆ (ಎಂಒಯು) ಸಹಿ ಹಾಕಿದೆ. ಆದರೆ ಈ ಸಮ್ಮೇಳನಗಳು ಹೊಸ ಹೂಡಿಕೆಗಳನ್ನು ತರಲಿಲ್ಲ ಮತ್ತು ಇವುಗಳಿಂದ ಉದ್ಯೋಗಾವಕಾಶಗಳು ಹೆಚ್ಚಾಗಲಿಲ್ಲ. ಬಂದ ಕೆಲವು ಹೂಡಿಕೆಗಳು ಸೋಲಾರ್ ಮತ್ತು ವಿಂಡ್ ಮಿಲ್‌ಗಳಂತಹ ವಿದ್ಯುತ್ ಉತ್ಪಾದನೆಯಲ್ಲಿವೆ. ಈ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ತೀರಾ ಕಡಿಮೆ. ಕೆಲವು ವೃತ್ತಿಪರರು ದೊಡ್ಡ ನಗರಗಳಲ್ಲಿ ಐಟಿಯಂತಹ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಕಂಡುಕೊಂಡರು. ಆದರೆ ನಗರಗಳಲ್ಲಿನ ಕೌಶಲ್ಯರಹಿತ ಅಥವಾ ಅರೆ–ಕುಶಲ ಕಾರ್ಮಿಕರ ಗತಿ ಏನು? ಇವರಿಗೆ ಉದ್ಯೋಗ ನೀಡದೆ ಈ ಕುಟುಂಬಗಳ ಆದಾಯ ಹೆಚ್ಚದೆ, ಅವರ ಕೊಳ್ಳುವ ಶಕ್ತಿ ಹೆಚ್ಚಾಗದೆ, ಮಾರುಕಟ್ಟೆಯಲ್ಲಿ ಹಣದ ಹರಿವು ಹೆಚ್ಚಾಗದೆ, ಖರೀದಿ ಪ್ರಕ್ರಿಯೆ ಹೆಚ್ಚಾಗುವುದು ಹೇಗೆ? ಈ ರೀತಿಯಾದರೆ ರಾಜ್ಯದ ಅಭಿವೃದ್ಧಿ ಹೇಗೆ?

ಏಳು ಕಂಪನಿಗಳು 'ಉತ್ಪಾದನೆ – ಹಸಿರು ಹೈಡ್ರೋಜನ್ ಮತ್ತು ಉತ್ಪನ್ನಗಳು' ವಲಯದಲ್ಲಿ ರೂ. 2.9 ಲಕ್ಷ ಕೋಟಿ ಹೂಡಿಕೆ ಮಾಡುತ್ತವೆ ಎಂದು ಹೇಳಲಾಗಿದೆ. ಈ ವಲಯದ ಹೂಡಿಕೆದಾರರೆಂದರೆ ACME (ರೂ. 51,865 ಕೋಟಿ), ReNew ಮತ್ತು ABC (ಎರಡೂ ರೂ. 50,000 ಕೋಟಿ), Avaada (ರೂ. 45,000 ಕೋಟಿ) ಮತ್ತು JSW (ರೂ. 43,470 ಕೋಟಿ), ಇತರವುಗಳು.

80,000 ಕೋಟಿ ಹೂಡಿಕೆಯ

ಪುಟ 14 ಕ್ಕೆ





77ನೇ ಸ್ವಾತಂತ್ರ್ಯ ದಿನಾಚರಣೆ
ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಸಂರಕ್ಷಣೆಗಾಗಿ ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರ ಸಂಕಲ್ಪ

ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಸಂಕ್ಷಣೆಗಾಗಿ ಮತ್ತು ತಮ್ಮ ಹಕ್ಕುಗಳ ರಕ್ಷಣೆಗಾಗಿ ಆಗಸ್ಟ್ ಒಂದರಿಂದ 14ರ ವರೆಗೆ ರೈತರು, ಕಾರ್ಮಿಕರು ಮತ್ತು ಕೃಷಿ ಕೂಲಿಕಾರರು ದೇಶಾವ್ಯಾಪಿ ಕರೆ ನೀಡಿದ್ದ ಪ್ರಚಾರಾಂದೋನ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದಿದೆ.

ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲೂಯು) ಸಂಘಗಳ ನೇತೃತ್ವದಲ್ಲಿ ನಡೆದ ಈ ಪ್ರಚಾರಂದೋಲನದಲ್ಲಿ ರಾಜ್ಯದ್ಯಾಂತ 10 ಸಾವಿರಕ್ಕೂ ಹೆಚ್ಚು ಜನ ಭಾಗಿಯಾಗಿದ್ದರು ಎಂದು ತಿಳಿದುಬಂದಿದೆ. 14 ದಿನಗಳ ಪ್ರಚಾರಾಂದೋನದ ನಂತರ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಯಿತು. ಹಲವು ಕಡೆ ಆಗಸ್ಟ್ 14 ರ ಸಂಜೆ 6ರಿಂದ ಮಧ್ಯರಾತ್ರಿ 12ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಮಧ್ಯರಾತ್ರಿ ತ್ರಿವರ್ಣ ಧ್ವಜವನ್ನು ಹಾರಿಸಿದರು.

ಪೆಟ್ರೋಲ್, ಡೀಸಲ್, ರಸಗೊಬ್ಬರ, ಆಹಾರ ಭದ್ರತೆಗಳಿಗಿದ್ದ ಸಬ್ಸಿಡಿ ಕಡಿತ ಮಾಡಲಾಗಿದೆ. ಅಗತ್ಯ ವಸ್ತುಗಳ ಮೇಲಿನ ತೆರಿಗೆಗಳ ಹೆಚ್ಚಳದಿಂದಾಗಿ ಇವುಗಳ ಬೆಲೆ ಹೆಚ್ಚಾಗಿವೆ. ಉದ್ಯೋಗ ಖಾತ್ರಿ ಯೋಜನೆಗೆ ಸರ್ಕಾರ ಅನುದಾನ ಕಡಿತ ಮಾಡಿದೆ. ನಿರುದ್ಯೋಗ ಸಮಸ್ಯೆ ಜನರನ್ನು ಕಾಡುತ್ತಿದೆ. ಕೃಷಿ ಬಿಕ್ಕಟ್ಟಿಗೆ ಸಿಲುಕಿದ್ದು ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಕೃಷಿ ಉತ್ಪಾದನಾ ವೆಚ್ಚಕ್ಕೆ ಶೇ.50 ರಷ್ಟು ಲಾಭಾಂಶ ಸೇರಿಸಿ ಬೆಂಬಲ ಬೆಲೆ ನಿಗದಿ ಮಾಡಬೇಕೆಂದ ಡಾ. ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸ್ಸನ್ನು ಸರ್ಕಾರ ಮಾನ್ಯ ಮಾಡುತ್ತಿಲ್ಲ. ದೇಶದ 39 ಕೋಟಿ ಅಸಂಘಟಿತ ಕಾರ್ಮಿಕರಿಗೆ ಕೆಲಸದ ಭದ್ರತೆ, ಸಾಮಾಜಿಕ ಭದ್ರತೆ ಇಲ್ಲ, ಪಿಂಚಣಿ ವ್ಯವಸ್ಥೆ ಇಲ್ಲ, ಸಾರ್ವಜನಿಕ ಉದ್ಯಮಗಳ ಖಾಸಗೀಕರಣ, ಜನತೆಯ ಐಕ್ಯತೆಯನ್ನು ಒಡೆಯಲು ಕೋಮುವಾದದ ಬಳಕೆ.. ಹೀಗೆ ಜನರನ್ನು ಭಾದಿಸುವ ಹಲವು ವಿಷಯಗಳನ್ನು ಇಟ್ಟು ಜನರಲ್ಲಿ ಜಾಗೃತಿ



ಮೂಡಿಸುವ ಸಲುವಾಗಿ ಪ್ರಚಾರಾಂದೋಲನದ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಲಾಯಿತು.

ರಾಜ್ಯದ್ಯಾಂತ 4 ಲಕ್ಷ ಕರಪತ್ರಗಳನ್ನು ಮುದ್ರಿಸಿ ಜನರ ನಡುವೆ ಹೋಗಿ ಹಂಚಲಾಗಿದೆ. ತಾಲ್ಲೂಕುಗಳ ಮಟ್ಟದಲ್ಲಿ 109 ಸಭೆಗಳು ನಡೆದರೆ, 1165 ಬೀದಿಬದಿ ಸಭೆಗಳು ನಡೆದಿವೆ. 139 ಜಾತಾಗಳು ನಡೆದಿವೆ. ಮೈಸೂರಿನಲ್ಲಿ ಬೈಕ್ ರ್‍ಯಾಲಿ ನಡೆಸಲಾಗಿದೆ ಎಂದು ಸಿಐಟಿಯು ರಾಜ್ಯ ಸಮಿತಿ ಮಾಹಿತಿ ನೀಡಿದೆ.

ಬೆಂಗಳೂರು: ಬೆಂಗಳೂರಿನ ಟೌನ್‌ಹಾಲ್ ಎದುರು ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಹಿರಿಯ ಸಾಹಿತಿ, ಪ್ರಗತಿಪರ ಚಿಂತಕ, ನಾಡೋಜ ಬರಗೂರು ರಾಮಚಂದ್ರಪ್ಪ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಯಾವ ಆಶಯಗಳಿದ್ದವು ಅವು ಸ್ವಾತಂತ್ರ್ಯ ನಂತರವೂ ಸಾಕಾರಗೊಂಡಿಲ್ಲ. ಇದೊಂದು ದೊಡ್ಡ ದುರಂತವೇ ಸರಿ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಆಶಯಗಳು ಸ್ವಾತಂತ್ರ್ಯ ನಂತರದ ಆಶಯಗಳು ಈಗ ಪಲ್ಲಟಗೊಂಡಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಸ್ವಾತಂತ್ರ ಪೂರ್ವದಲ್ಲಿದ್ದ ಆದ್ಯತೆಗಳು ಈಗ ಪಲ್ಲಟಗೊಂಡಿದ್ದು, ದೇಶವನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಕಾರ್ಪೊರೇಟೀಕರಣ ಮತ್ತು ಕೋಮುವಾದೀಕರಣ ಆಶಯಗಳು ಪಲ್ಲಟಗೊಳ್ಳಲು ಕಾರಣವಾಗಿದೆ. ಕಾರ್ಪೊರೇಟೀಕರಣ ಆರ್ಥಿಕ ನೀತಿಗಳನ್ನೇ ಬದಲಾಯಿಸಿದ್ದು ಸಂಪತ್ತಿನ ಕ್ರೋಡೀಕರಣ ಹೆಚ್ಚಾಗಿದೆ. ದೇಶದ ಒಂದಷ್ಟು ಜನರಲ್ಲಿ ಶೇ. 70ರಷ್ಟು ಸಂಪತ್ತು ಕ್ರೋಡೀಕರಣವಾಗಿದೆ. ಇದರಿಂದ ಈ ದೇಶ ಎಷ್ಟರ ಮಟ್ಟಿಗೆ ಶ್ರೀಮಂತವಾಗಿದೆ ಎಂಬುದನ್ನು ಅರಿಯಬಹುದು ಎಂದರು.

ಕಾರ್ಪೊರೇಟೀಕರಣ ಮತ್ತು ಕೋಮುವಾದೀಕರಣ ಒಂದೇ ಕಾಲದಲ್ಲಿ ಬೆಳವಣಿಗೆ ಕಂಡವು. ಕೋಮುವಾದೀಕರಣದಿಂದ ಧರ್ಮ ಧರ್ಮಗಳ ನಡುವೆ ಒಡಕುಂಟಾಯಿತು. ಈ ಐದು ವರ್ಷಗಳಲ್ಲಿ 2 ಸಾವಿರಕ್ಕೂ ಹೆಚ್ಚು ಧಾರ್ಮಿಕ ಘರ್ಷಣೆಗಳು ಸಂಭವಿಸಿವೆ. 4 ಲಕ್ಷಕ್ಕೂ ಹೆಚ್ಚು ದಲಿತರ ಮೇಲೆ ಹಲ್ಲೆಗಳು ನಡೆದಿವೆ ಎಂದು ಬರಗೂರು ವಿವರಿಸಿದರು. ಜಿ.ಎನ್. ನಾಗರಾಜ್, ಬಿ.ಆರ್.ಮಂಜುನಾಥ್, ಟಿ. ಯಶ್ವಂತ್, ಜಿ. ರಾಮಕೃಷ್ಣ, ಬಸವಲಿಂಗಪ್ಪ ಗೌರಮ್ಮ, ಹರಳಹಳ್ಳಿ ಗೋಪಾಲಕೃಷ್ಣ, ಮೀನಾಕ್ಷಿ ಸುಂದರಂ ಮತ್ತಿತರರು ಮಾತನಾಡಿದರು.

ಉಡುಪಿ: ಉಡುಪಿಯಲ್ಲಿ ಕಾಮ್ರೆಡ್ ಶಂಕರ್ ಧ್ವಜಾರೋಹಣ ನೆರವೇರಿಸಿದರು. ಶಶಿಧರ್, ಶೆಟ್ಟಿ ಮತ್ತಿತರರು ಮಾತನಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಬಾಲಕೃಷ್ಣ ಶೆಟ್ಟಿ ಜಾಗತೀಕರಣ ಮತ್ತು ಕೋಮುವಾದೀಕರಣದ ವಿರುದ್ಧ ಕಠಿಣ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಕೃಷಿಕರು, ಕೃಷಿ ಕೂಲಿಕಾರರು ಮತ್ತು ಕಾರ್ಮಿಕರ ಐಕ್ಯತೆಯನ್ನು ಹೆಚ್ಚಿಸಬೇಕೆಂದು ಹೇಳಿದರು.

ತುಮಕೂರು: ತುಮಕೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಜೀಬ್ ಧ್ವಜಾರೋಹಣ ನಡೆಸಿದರು. ಮಧುಗಿರಿ, ಪಾವಗಡ, ತಿಪಟೂರುಗಳಲ್ಲಿ ಕಾರ್ಯಕ್ರಮಗಳನ್ನ ಮಾಡಲಾಯಿತು. ಸೈಯದ್ ಮುಜೀಬ್, ಕಮಲ, ಕಮಲ, ಪಾರ್ವತಮ್ಮ, ಉಮೇಶ್, ಯತಿರಾಜು, ಎನ್.ಕೆ. ಸುಬ್ರಮಣ್ಯ, ಚನ್ನಬಸವಣ್ಣ ಮತ್ತಿತರರು ಮಾತನಾಡಿದರು.

ದಕ್ಷಿಣ ಕನ್ನಡ: ದಕ್ಷಿಣ ಕನ್ನಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. ಜೆ.ಬಾಲಕೃಷ್ಣಶೆಟ್ಟಿ,ಯಾದವಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಮುನೀರ್ ಕಾಟಿಪಳ್ಳ ಮತ್ತಿತರರು ಮಾತನಾಡಿದರು.

ಕೋಲಾರ: ಕೋಲಾರದಲ್ಲಿ ಯಶಸ್ವಿಯಾಗಿ ಕಾರ್ಯಕ್ರಮ ನಡೆಸಲಾಯಿತು. ಎನ್. ಎಲ್.ಭರತ್‌ರಾಜ್, ಗಾಂಧಿನಗರ ನಾರಾಯಣಸ್ವಾಮಿ, ಸಾಹಿತಿ ಗೊಲ್ಲಹಳ್ಳಿ ಶಿವಪ್ರಸಾದ್ ಮತ್ತಿತರರು ಪಾಲ್ಗೊಂಡು ಮಾತನಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಭರತ್ ರಾಜ್, ದೇಶದ ರಾಜ್ಯಾದ್ಯಂತ ಬೀದಿಬದಿ ಸಭೆಗಳು ನಡೆದಿವೆ.

ಮೈಸೂರು, ಮಂಡ್ಯ, ರಾಮನಗರ, ಹಾಸನ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ರಾಯಚೂರು, ದಾರವಾಡ, ಗದಗ, ಗುಲ್ಬರ್ಗ, ಉಡುಪಿ, ಬಳ್ಳಾರಿ, ಕೊಡಗು, ಕೊಪ್ಪಳ, ಉತ್ತರ ಕನ್ನಡ, ಬೆಳಗಾವಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿಯೂ ಪ್ರಚಾರಾಂದೋಲನ ನಡೆದಿರುವ ಬಗ್ಗೆ ವರದಿಯಾಗಿದೆ.





'ಬಿಜೆಪಿ ಹಟಾವೋ, ಮಹಿಳಾ ಬಚಾವೋ' ಗೆ ಮಹಿಳೆಯರ ರಾಷ್ಟ್ರೀಯ ಸಮಾವೇಶದ ಕರೆ



ದೇಶದ 26 ರಾಜ್ಯಗಳಲ್ಲಿ ನಡೆಯುತ್ತಿರುವ ಮಹಿಳಾ ಉದ್ಧಾರ ಮತ್ತು ಸಮಾನತೆಯ ಹೋರಾಟದ ಭಾಗವಾಗಿ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯೂಎ) ಆಗಸ್ಟ್ 17ರಂದು ನವದೆಹಲಿಯಲ್ಲಿ "ಬಿಜೆಪಿ ಆರೆಸ್ಸೆಸ್ ಹಟಾವೊ, ಮಹಿಳಾ ಬಚಾವೊ, ದೇಶ ಬಚಾವೋ' ರಾಷ್ಟ್ರೀಯ ಸಮಾವೇಶವನ್ನು ಸಂಗಟಿಸಿತ್ತು. ಇದರಲ್ಲಿ ವಿವಿಧ ರಾಜ್ಯಗಳಿಂದ ಬಂದ ಮಹಿಳೆಯರು 2014 ರಿಂದ ಆರ್‌ಎಸ್‌ಎಸ್ ಬೆಂಬಲಿತ ಬಿಜೆಪಿ ಸರ್ಕಾರದ ವಿಭಿನ್ನ ನೀತಿಗಳ ಅಡಿಯಲ್ಲಿ ತಾವು ಪಟ್ಟಿರುವ, ಪಡುತ್ತಿರುವ ಪಾಡುಗಳನ್ನು, ದೌರ್ಜನ್ಯಗಳು, ಕೆಲಸದಲ್ಲಿ ಶೋಷಣೆ, ವೇತನ ಅಸನಾನತೆ ಮತ್ತು ಹಣದುಬ್ಬರದ ಪರಿಣಾಮಗಳನ್ನು ನಿವೇದಿಸಿದರು. ಜಾತ್ಯತೀತತೆ, ಪ್ರಜಾಪ್ರಭುತ್ವ ಮತ್ತು ನ್ಯಾಯದ ತತ್ವಗಳನ್ನು ಎತ್ತಿಹಿಡಿಯಲು ಒಂದಾಗಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಸಮಾವೇಶ ಕರೆ ನೀಡಿತು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಬೃಂದಾ ಕಾರಟ್, 'ಹಿಂದುತ್ವ' ಎಂಬ ಪದವನ್ನು ಸೃಷ್ಟಿಸಿದ ವಿನಾಯಕ ದಾಮೋದರ ಸಾವರ್ಕರ್ ಅವರ ಹಾದಿಯಲ್ಲಿ ಪ್ರಸ್ತುತ ಆಡಳಿತ ನಡೆಯುತ್ತಿದೆ, ಅದರ ಪರಿಣಾಮವು ದೇಶದ ಅರ್ಧದಷ್ಟು ಜನಸಂಖ್ಯೆಯ ಮೇಲೆ ಹೆಚ್ಚಿದ ಅಪರಾಧಗಳು, ಸಾಲದ ಹೊರೆ ಮತ್ತು ಆದಾಯದ ನಷ್ಟಗಳ ರೂಪದಲ್ಲಿ ಗೋಚರಿಸುತ್ತಿದೆ ಎಂದು ಹೇಳಿದರು.

"ವೇದಗಳ ನಂತರ ಮನು ಸ್ಮೃತಿ ಹಿಂದೂಗಳಿಗೆ ಮಾರ್ಗದರ್ಶಿ ಪಠ್ಯವಾಗಿ ಉಳಿದಿದೆ ಎಂದು ಸಾವರ್ಕರ್ ಸ್ಪಷ್ಟವಾಗಿ ಹೇಳಿದ್ದಾರೆ ಮತ್ತು ಈ ಪ್ರಾಚೀನ ಪಠ್ಯವು ಮಹಿಳೆಯರ ಸಾಮಾಜಿಕ ಜೀವನದ ಬಗ್ಗೆ ಏನು ಸೂಚಿಸಿದೆ ಎಂದು ನಮಗೆ ತಿಳಿದಿದೆ" ಎಂದು ಅವರು ಹೇಳಿದರು.

2002ರ ಕೋಮು ಹಿಂಸಾಚಾರದ ಸಂದರ್ಭದಲ್ಲಿ ಬಿಲ್ಕಿಸ್ ಬಾನೊ ಮೇಲಿನ ಅತ್ಯಾಚಾರದ ಅಪರಾಧಿಗಳನ್ನು ಬಿಡುಗಡೆ ಮಾಡಿದ್ದಕ್ಕಾಗಿ ಗುಜರಾತ್ ಸರ್ಕಾರವನ್ನು, ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿರುವ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್‌ರನ್ನು ರಕ್ಷಿಸಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ಮತ್ತು ಬಿಜೆಪಿ ನಾಯಕನಾಗಿ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಯಾಗಿದ್ದ , ಮತ್ತು ಈಗ ಅಲ್ಲಿಂದ ಹೊರಹಾಲ್ಪಟ್ಟಿರುವ ಕುಲದೀಪ್ ಸಿಂಗ್ ಸೆಂಗಾರ್‌ರನ್ನು ಇದುವರೆಗೆ ರಕ್ಷಿಸುತ್ತ ಬಂದ ಉತ್ತರಪ್ರದೇಶ ಸರಕಾರವನ್ನು ಕಟುವಾಗಿ ಟೀಕಿಸಿದ ಬೃಂದಾ ಕಾರಟ್, "ಬಿಜೆಪಿ ಹಟಾವೋ, ಮಹಿಳಾ ಬಚಾವೋ" ಘೋಷಣೆಗೆ ಈ ಸಮಯದಲ್ಲಿ ವಿಶೇಷ ಮಹತ್ವವಿದೆ ಎಂದು ಹೇಳಿದರು.

"ಈ ಸರ್ಕಾರದ ನಾಯಕರು ತಮ್ಮ ರಾಜ್ಯ ಸರ್ಕಾರಗಳು 'ಡಬಲ್ ಇಂಜಿನ್' ನಿಂದ ನಡೆಸಲ್ಪಡುತ್ತವೆ ಎಂದು ಆಗಾಗ್ಗೆ ಹೇಳುತ್ತಿರುತ್ತಾರೆ, ಆದರೆ ಈ 'ಡಬಲ್ ಇಂಜಿನ್' ನ ಆರೆಸ್ಸೆಸ್ ಎಂದು ನಾನಿಲ್ಲಿ ಸೇರಿಸಬೇಕು. ಅದು ಜನರ ಮನಸ್ಸಿನಲ್ಲಿ ಯಾವ ವಿಷವನ್ನು ತುಂಬಿದ್ದಾರೆ ಎಂಬುದನ್ನು ನಾವು ಮಣಿಪುರದಲ್ಲಿ ನೋಡುತ್ತಿದ್ದೇವೆ. ಅಲ್ಲಿ ಕುಕಿ ಮತ್ತು ಮೈತೆಯಿ ಸಮುದಾಯಗಳ ನಡುವೆ ಒಂದು ಅಗೋಚರವಾದ ವಿಭಜನ ಉಂಟಾಗಿದೆ. ಇದರಿಂದ ಎಲ್ಲರಿಗಿಂತ ಹೆಚ್ಚಾಗಿ ಬಳಲುತ್ತಿರುವವರು ಮಹಿಳೆಯರು ಮತ್ತು ಮಕ್ಕಳು. ಸಹೋದರ ಸಹೋದರಿಯರನ್ನು ಅತ್ಯಾಚಾರ ಮಾಡಿ ಹತ್ಯೆ ಮಾಡಲಾಗಿದೆ. ಆದರೂ ಒಕ್ಕೂಟ ಸರ್ಕಾರ ಕ್ರಮಕೈಗೊಂಡಿಲ್ಲ' ಎಂದು ಕಾರಟ್ ಹೇಳಿದರು.

ಮಹಿಳೆಯರು ಆಹಾರ ಮತ್ತು ಘನತೆಗಾಗಿ ಒಂದು ಕಠಿಣ ಸಮರವನ್ನು ಎದುರಿಸುತ್ತಿದ್ದಾರೆ ಎಂದು ಸಮಾವೇಶದಲ್ಲಿ ಭಾಗವಹಿಸಿದವರು ಹೇಳಿದರು.

ರಾಜಸ್ಥಾನದ ಬಿಕಾನೇರ್‌ನಿಂದ ಬಂದಿದ್ದ ಶಬ್ನಮ್ ಬಾನೋ ಎಂಬಾಕೆ ಪಡಿತರ ಚೀಟಿ ಹೊಂದಿದ್ದರೂ 10 ವರ್ಷಗಳಿಂದ ಯಾವುದೇ ಪಡಿತರವನ್ನು ಪಡೆದಿಲ್ಲ ಎಂದರು. "ನನ್ನ ಬಡತನವನ್ನು ಸಾಬೀತುಪಡಿಸಲು ನಾನು ಕೆಲವು ಪ್ರಮಾಣಪತ್ರಗಳನ್ನು ಸಲ್ಲಿಸಬೇಕು ಎಂದು ನನಗೆ ತಿಳಿಸಲಾಯಿತು. ನಾನು ಹತಾಶಳಾಗಿದ್ದೆ. ಕೋವಿಡ್ ಸಮಯದಲ್ಲಿ ಅಕ್ಷರಶಃ ಆಹಾರಕ್ಕಾಗಿ ಭಿಕ್ಷೆ ಬೇಡಬೇಕಾದ ಕಷ್ಟದ ಸಮಯವನ್ನು ನಾವು ಎದುರಿಸಿದ್ದೇವೆ. ಈ ಅವಧಿಯಲ್ಲಿ ಎಐಡಿಡಬ್ಲ್ಯುಎ ವತಿಯಿಂದ ನಡೆಯುತ್ತಿರುವ ಪಡಿತರ ಸಮೀಕ್ಷೆಯಲ್ಲಿ ಭಾಗವಹಿಸಿದ್ದೆ. ಸಮೀಕ್ಷೆಯ ಮೂಲಕ ಸಮಸ್ಯೆಗಳನ್ನು ಎದುರಿಸುತ್ತಿರುವವಳು ನಾನೊಬ್ಬಳೇ ಅಲ್ಲ ಎಂದು ಅರಿತುಕೊಂಡೆ; ಪಡಿತರ ಚೀಟಿ ಹೊಂದಿರುವ ಅನೇಕ ಮಹಿಳೆಯರಿಗೆ ಪಡಿತರ ಸಿಗುತ್ತಿಲ್ಲ. ಸಂಘಟನೆಯ ನೆರವಿನಿಂದ ಬೃಹತ್ ಪ್ರತಿಭಟನೆ ನಡೆಸಿ, ಮಹಿಳೆಯರು ಕಲೆಕ್ಟರೇಟ್‌ಗೆ ಘೇರಾವ್ ಹಾಕಿದರು.

ಅವರು ತಮ್ಮ ಜ್ಞಾಪಕ ಪತ್ರದೊಂದಿಗೆ ಕಲೆಕ್ಟರ್‌ಗೆ ಹೋದಾಗ ಕೇಂದ್ರ ಸರ್ಕಾರವು ಈಗ ಇ ಮಿತ್ರ ಪೋರ್ಟಲನ್ನು ಮುಚ್ಚಿದೆ, ಏಕೆಂದರೆ ಒಂದೊಂದು ಗ್ರಾಮದಿಂದ ನಿರ್ದಿಷ್ಟ ಸೀಮಿತ ಸಂಖ್ಯೆಯ ಜನರು ಮಾತ್ರ ಪಡಿತರಕ್ಕೆ ಅರ್ಹರು ಎಂದು ಪರಿಗಣಿಸಲಾಗುವುದು ಎಂದು ತಿಳಿಸಿದರು. ನಿಗದಿಪಡಿಸಿದ ಸಂಖ್ಯೆಯನ್ನು ತಲುಪಿದಾಗ ಪೋರ್ಟಲ್ ಸ್ವಯಂಚಾಲಿತವಾಗಿ ಮುಚ್ಚಲ್ಪಡುತ್ತದೆ. ಅಂದರೆ ಬಹಳಷ್ಟು ಅರ್ಹ ಕುಟುಂಬಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಧಾನ್ಯಗಳನ್ನು ಪಡೆಯಲು ಅರ್ಹರೆಂದು ಪರಿಗಣಿಸಲಾಗಿಲ್ಲ. ಇದು ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಅಡಿಯಲ್ಲಿ ಅನೇಕ ಮಹಿಳೆಯರು ಮತ್ತು ಬಡ ಕುಟುಂಬಗಳನ್ನು ಹೊರಗಿಡುವುದನ್ನು ಸೂಚಿಸುತ್ತದೆ ಎಂದು ಬಾನೋ ಹೇಳಿದರು.

ಒಡಿಶಾದ ಖುರ್ದಾ ಜಿಲ್ಲೆಯ ಬಿಮಾಲಿ ನಾಯಕ್, ಕಿರು ಸಾಲ ಸಂಸ್ಥೆಗಳಿಗೆ (ಎಂಎಫ್ಐ) ಸಾಲವನ್ನು ಕುಟುಂಬವು ಮರುಪಾವತಿಸಲು ಸಾಧ್ಯವಾಗದ ಕಾರಣ ತನ್ನ ಪತಿ ಆತ್ಮಹತ್ಯೆಯಿಂದ ಸಾವನ್ನಪ್ಪಿದರು ಎಂದು ಹೇಳಿದರು. "ಬ್ಯಾಂಕ್‌ನಿಂದ ಸಾಲವನ್ನು ಪಡೆಯಲು ಸಾಧ್ಯವಾಗದೆ, ಬಡ ಮತ್ತು ಅವಿದ್ಯಾವಂತ ಮಹಿಳೆಯರು ಎಂಎಫ್ಐ ಗಳಿಂದ ಸಾಲವನ್ನು ಪಡೆಯ ಬೇಕಾಗಿ ಬರುತ್ತದೆ. ಅದು ಕೇವಲ ಎರಡು ದಾಖಲೆಗಳನ್ನು– ಫೋಟೋ ಮತ್ತು ಆಧಾರ್ ಕಾರ್ಡ್ ಮೇಲೆ ಸಾಲ ಕೊಡುತ್ತದಾದರೂ, ಬಡ್ಡಿ ದರವು ತುಂಬಾ ಹೆಚ್ಚು, ಇದು ಮಹಿಳೆಯರ ಶೋಷಣೆಗೆ ಕಾರಣವಾಗುತ್ತದೆ, ಏಕೆಂದರೆ ಅವರಲ್ಲಿ ಹೆಚ್ಚಿನವರು 22%ದಿಂದ ಆರಂಭವಾಗುವ ಈ ದರಗಳನ್ನು ಪಾವತಿಸುವ ಸ್ಥಿತಿಯಲ್ಲಿಲ್ಲ. ಎಂಎಫ್ಐ ಏಜೆಂಟ್‌ಗಳು ಆಗಾಗ್ಗೆ ಯಾರಾದರೂ ಸುಸ್ತಿದಾರರಾದಾಗ ಅಥವಾ ಕಂತು ಪಾವತಿ ಮಾಡುವಲ್ಲಿ ಅನಿಯಮಿತವಾಗಿದ್ದಾಗ ಮಹಿಳೆಯರನ್ನು "ದುರುಪಯೋಗ, ಅವಮಾನ ಮತ್ತು ಕಿರುಕುಳ"ಗಳಿಗೆ ಒಳಪಡಿಸುತ್ತಾರೆ. ಕ್ರಮೇಣ ಅನೇಕ ಮಹಿಳೆಯರು ಸಾಲದ ಬಲೆಗೆ ಸಿಲುಕಿದರು ಮತ್ತು ಈ ಬಲೆಯಿಂದ ಹೊರಬರಲು, ಅವರು ತಮ್ಮ ಪಾತ್ರೆಗಳು, ಇತರ ಗೃಹೋಪಯೋಗಿ ವಸ್ತುಗಳು ಮತ್ತು ಪಡಿತರ ಚೀಟಿಗಳನ್ನು ಸಹ ಅಡಮಾನ ಇಡಬೇಕಾಗಿ ಬಂತು ಎಂದು ಅವರು ಹೇಳಿದರು. ಸರಕಾರದ ಬ್ಯಾಂಕುಗಳು ಕಡಿಮೆ ಬಡ್ಡಿದರಗಳಲ್ಲಿ ಸಾಲ ಕೊಡುವಂತಿದ್ದರೆ, ಹಲವಾರು ಮಹಿಳೆಯರು ಘನತೆಯಿಂದ ಬದುಕಲು ಸಾಧ್ಯವಾಗುತ್ತಿತ್ತು ಎಂದು ಬಿಮಾಲಿ ನಾಯಕ್ ಹೋರಾಟಗಳಿಂದ ಮಾತ್ರ ಜೀವನೋಪಾಯದ ಸಮರಗಳನ್ನು ಗೆಲ್ಲಲು ಸಾಧ್ಯ ಎಂದರು.

ಇಂತಹ ಹಲವು ಮಹಿಳೆಯರ ಅನುಭವಗಳನ್ನು ಕೇಳಿದ ನಂತರ ಸಮಾವೇಶ ಅಂಗೀಕರಿಸಿದ ನಿರ್ಣಯ ಕೇಂದ್ರ ಸರ್ಕಾರದ ಕಾರ್ಪೊರೇಟ್ ಪರವಾದ ನೀತಿಗಳನ್ನು ಹಿಮ್ಮೆಟ್ಟಿಸಬೇಕು, ಮತ್ತು ಮಹಿಳಾ ಕಲ್ಯಾಣಕ್ಕಾಗಿ ಹಂಚಿಕೆಗಳನ್ನು ಹೆಚ್ಚಿಸಬೇಕ, ಆಹಾರ ಮತ್ತು ಇತರ ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಹೇರಿಕೆಯನ್ನು ಹಿಂಪಡೆಯಬೇಕು ಮತ್ತು ಸಂಪನ್ಮೂಲ ಸಂಗ್ರಹಕ್ಕೆ ಅತಿ ಶ್ರೀಂತರ ಮೇಲೆ ಸಂಪತ್ತು ಮತ್ತು ವಾರಸುದಾರಿಕೆ ತೆರಿಗೆಯನ್ನು ಹಾಕಬೇಕು ಎಂದು ಆಗ್ರಹಿಸಿತು.

2020 ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಗೊಳಿಸಲು ಹೋರಾಡಲು ನಿರ್ಧರಿಸಿದ ಸಮಾವೇಶ ನಿಲ್ಲಿಸಿದ ವಿದ್ಯಾರ್ಥಿವೇತನಗಳನ್ನು ಮತ್ತೆ ಕೊಡಬೇಕು ಎಂದು ಆಗ್ರಹಿಸಿದೆ.

ಪಡಿತರ ವ್ಯವಸ್ಥೆಯನ್ನು ಸೀಮಿತಗೊಳಿಸುವ, ಆಧಾರ್‌ನೊಂದಿಗೆ ಜೋಡಿಸುವ ಮತ್ತು ಬಯೋಮೆಟ್ರಿಕ್ ಯಂತ್ರಗಳನ್ನು ಬಳಸುವುದನ್ನು ವಿರೋಧಿಸಿದ ಸಮಾವೇಶ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿತು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ; ಅಂಗನವಾಡಿ, ಮಧ್ಯಾಹ್ನದ ಊಟ ಮತ್ತು ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಮಾನ್ಯ ಮಾಡಿ; ಮನರೇಗವನ್ನು ಸರಿಯಾಗಿ ಅನುಷ್ಠಾನಗೊಳಿಸಿ ಮತ್ತು ಒಂದು ಕೇಂದ್ರೀಯ ನಗರ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿಗೊಳಿಸಿ ಎಂದು ಸಮಾವೇಶ ಒತ್ತಾರಿಸಿದೆ.

"ನಾವು ಕನಿಷ್ಠ 200 ದಿನಗಳ ಉದ್ಯೋಗ ಖಾತರಿ, ತಕ್ಷಣದ ವೇತನ ಪಾವತಿ ಮತ್ತು ಆಧಾರ್ ಕಾರ್ಡ್‌ಗಳು ಮತ್ತು ಆನ್‌ಲೈನ್ ಹಾಜರಾತಿಯಿಂದ ಯೋಜನೆಯನ್ನು ಡಿಲಿಂಕ್ ಮಾಡಬೇಕೆಂದು ಒತ್ತಾಯಿಸುತ್ತೇವೆ; ಎಂಎಫ್ಐ ಗಳ ಮೇಲೆ ಕಟ್ಟುನಿಟ್ಟಾದ ನಿಯಂತ್ರಣ ಮತ್ತು ಬಡ್ಡಿದರಗಳ ಮೇಲೆ 12 ಶೇ. ಮಿತಿ, ಎಲ್ಲಾ ಮಹಿಳೆಯರಿಗೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ 4ಶೇ. ಬಡ್ಡಿದರದಲ್ಲಿ ಸಾಲ, ಋಣಭಾರದಲ್ಲಿರುವ ಎಸ್‌ಹೆಚ್‌ಜಿ ಮಹಿಳೆಯರಿಗೆ ಒಂದು ಬಾರಿಯ ಸಾಲ ಮನ್ನಾ ನೀಡಬೇಕು" ಎಂದು ಸಮಾವೇಶವು ಅಂಗೀಕರಿಸಿದ ನಿರ್ಣಯ್ನ ಹೇಳಿದೆ.



ಮಣಿಪುರಕ್ಕೆ ಸಿಪಿಐ(ಎಂ) ನಿಯೋಗ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ನೇತೃತ್ವದಲ್ಲಿ ಕೇಂದ್ರ ಸಮಿತಿಯ ಸದಸ್ಯರಾದ ಜಿತೇಂದ್ರ ಚೌಧರಿ (ತ್ರಿಪುರಾ ರಾಜ್ಯ ಸಮಿತಿ ಕಾರ್ಯದರ್ಶಿ), ಸುಪ್ರಕಾಶ್ ತಾಲೂಕ್ದಾರ್ (ಕಾರ್ಯದರ್ಶಿ, ಅಸ್ಸಾಂ ರಾಜ್ಯ ಸಮಿತಿ) ಮತ್ತು ಡೆಬ್ಲಿನಾ ಹೆಂಬ್ರಾಮ್ ಅವರನ್ನೊಳಗೊಂಡ ನಾಲ್ಕು ಸದಸ್ಯರ ನಿಯೋಗವು ಮಣಿಪುರಕ್ಕೆ ಆಗಸ್ಟ್ 18 ರಿಂದ 20, 2023 ರವರೆಗೆ ಭೇಟಿ ನೀಡುತ್ತಿದೆ.

ಹಿಂಸಾಚಾರ ಪೀಡಿತ ಪ್ರದೇಶಗಳಲ್ಲದೆ, ನಿಯೋಗವು ಚುರಾಚಂದ್‌ಪುರ, ಮೊಯಿರಾಂಗ್ ಮತ್ತು ಇಂಫಾಲ್‌ನಲ್ಲಿರುವ ಪರಿಹಾರ ಶಿಬಿರಗಳಿಗೂ ಭೇಟಿ ನೀಡಲಿದೆ. ನಿಯೋಗವು ಇಂಫಾಲದ ರಾಜಭವನದಲ್ಲಿ ರಾಜ್ಯಪಾಲರಾದ ಅನುಸೂಯಾ ಉಯಿಕೆ ಅವರನ್ನು ಮತ್ತು ಹಲವು ಇತರ ನಾಗರಿಕ ಸಮಾಜದ ಸಂಘಟನೆಗಳನ್ನು ಕೂಡ ಭೇಟಿ ಮಾಡಲಿದೆ.

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಮತ್ತು ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡತೊಡಗಿದ್ದಾರೆ. ಅವರು ಹೇಳಿಕೊಳ್ಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅಥವಾ ನವ ಉದಾರವಾದಿ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಈ ಕುರಿತು ಹಿಂದಿನ ಸಂಚಿಕೆಗಳಲ್ಲಿ ಹಲವು "ಸಾಧನೆಗಳ" ಕುರಿತು ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ. ಇದರ ಮುಂದುವರಿದ ಭಾಗವಾಗಿ ಈ ಸಂಚಿಕೆಯಲ್ಲಿ 'ಪ್ರಧಾನ ಮಂತ್ರಿ ಜನ್ ಔಷಧಿ ಯೋಜನೆ' ಕುರಿತಾದ ಲೇಖನ.

ಮೋದಿ 9 ವರ್ಷಗಳು
ಭಾಗ–12

2008 ರಲ್ಲಿಯೇ ರೂಪಿಸಲಾದ 'ಜನೌಷಧಿ ಯೋಜನೆ'

ಔಷಧಾಲಯಗಳಿಗೆ ಇಲ್ಲದ ಪ್ರೋತ್ಸಾಹ

ಜನರ ಬಾಯಲ್ಲಿ 'ಮೋದಿ ಔಷಧಿ ಕೇಂದ್ರ' ಅಥವಾ 'ಮೋದಿ ಮೆಡಿಕಲ್ ಸ್ಟೋರ್' ಎಂದೇ ಕರೆಯಲ್ಪಡುವ 'ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ' ಯಾರಿಗೆ ಗೊತ್ತಿಲ್ಲ ಹೇಳಿ? ಮೋದಿ ಕಡಿಮೆ ಬೆಲೆಗೆ ಔಷಧಿ ದೊರಕುವಂತೆ ಮಾಡಿದ್ದಾರೆ, ಮೋದಿಯವರಿಂದಾಗಿ ನಾಗರೀಕರಿಗೆ ಔಷಧಿ ಖರೀದಿಸುವ ವೆಚ್ಚ ಕಡಿಮೆಯಾಗಿದೆ ಎಂದೇ ಜನರು ಹೇಳುತ್ತಾರೆ. ಸಂಘಪರಿವಾರದವರಂತೂ ಇದು ಬಡವರ ಮೇಲೆ ಮೋದಿಯವರಿಗಿರುವ ಕಾಳಜಿ ಎಂದೇ ಪ್ರಚಾರ ಮಾಡತೊಡಗಿದ್ದಾರೆ. ಆದರೆ, ಈ ಯೋಜನೆಯನ್ನು 2008ರಲ್ಲೇ ರೂಪಿಸಲಾಗಿದೆ. ಇದರ ಮುಂದುವರಿದ ಭಾಗವಾಗಿ ಯೋಜನೆಯನ್ನು ಒಂದಷ್ಟು ವಿಸ್ತರಣೆಗೊಳಿಸಲಾಗಿದೆ.

ಸಿ. ಸಿದ್ದಯ್ಯ

ಜನೌಷಧಿ ಕೇಂದ್ರಗಳ ಸ್ಥಾಪನೆಯಿಂದ ಕಡಿಮೆ ಬೆಲೆಗೆ ಒಂದಷ್ಟು ಜೆನೆರಿಕ್ ಔಷಧಿಗಳು ಸಿಗುವುದು ನಿಜ. ಇದರಿಂದ ನಾಗರೀಕರ ಔಷಧಿ ವೆಚ್ಚ ಕಡಿಮೆ ಆಗುವುದೂ ನಿಜ. ಇದನ್ನು ಮತ್ತಷ್ಟು ವಿಸ್ತಾರಗೊಳಿಸುವ ಅಗತ್ಯವೂ ಇದೆ. ಆದರೆ, ಜನೌಷಧಿ ಕೇಂದ್ರಗಳ ಮೂಲಕ ಮಾರಾಟ ಮಾಡುವ ಜೆನೆರಿಕ್ ಔಷಧಿಗಳಿಗೆ ಒಂದಷ್ಟು ತೆರಿಗೆ ಕಡಿತ (ಸಿಜಿಎಸ್‌ಟಿ ಶೇ.6, ಎಸ್‌ಜಿಎಸ್‌ಟಿ 6 ತೆರಿಗೆ ವಿಧಿಸಲಾಗುತ್ತದೆ, ಬ್ರಾಂಡೆಡ್ ಔಷಧಗಳಿಗೆ ಶೇ. 5 ರಿಂದ ಶೇ. 28 ರ ವರೆಗೆ ಜಿಎಸ್‌ಟಿ ಇದೆ.) ಮಾಡಿರುವುದನ್ನು ಹೊರತುಪಡಿಸಿ, ಜನೌಷಧಿ ಕೇಂದ್ರಗಳನ್ನು ತೆರೆಯಲು, ಅಂಗಡಿ ಮಾಲೀಕರಿಗೆ ಪ್ರೋತ್ಸಾಹ ಧನ ನೀಡಲು ಕೇಂದ್ರ ಸರ್ಕಾರ 2016–2017 ರ ಬಜೆಟ್‌ನಲ್ಲಿ ರೂ. 35 ಕೋಟಿ ಮೀಸಲಿಟ್ಟಿತ್ತು. ಜನೌಷಧಿಗಾಗಿ ಪ್ರತಿ ಬಜೆಟ್ ನಲ್ಲಿಯೂ ಒಂದಷ್ಟು ಹಣ ಮೀಸಲಿಡುವ ಒಕ್ಕೂಟ ಸರ್ಕಾರ 2020–21ರಲ್ಲಿ ರೂ. 68.50, 2021–22 ರಲ್ಲಿ ರೂ. 72.50 ಕೋಟಿ, 2022–23 ರಲ್ಲಿ ರೂ. 100 ಕೋಟಿ, 2023–24 ರಲ್ಲಿ ರೂ. 115 ಕೋಟಿ ಮಾತ್ರ ಮೀಸಲಿಟ್ಟಿದೆ. ಇದರಂತೆ ಕೇಂದ್ರ ಸರ್ಕಾರ ಈ ಯೋಜನೆಗೆ ಕಳೆದ ನಾಲ್ಕು ಬಜೆಟ್ ಅವಧಿಯಲ್ಲಿ ಇದಕ್ಕಾಗಿ ಮೀಸಲಿಟ್ಟ ಒಟ್ಟು ಅನುದಾನ ರೂ. 356 ಕೋಟಿ ಮಾತ್ರ. (ಮಾಹಿತಿ; ಒಕ್ಕೂಟ ಸರ್ಕಾರದ ಬಜೆಟ್ ಅಂಕಿ ಅಂಶ). ಆದರೆ, ನಾಗರೀಕರಿಗೆ 2021–22 ರ ಆರ್ಥಿಕ ವರ್ಷದಲ್ಲಿ 5,300 ಕೋಟಿ, ಒಟ್ಟಾರೆಯಾಗಿ ಕಳೆದ 8 ವರ್ಷಗಳಲ್ಲಿ ರೂ. 18,000 ಕೋಟಿ ಉಳಿತಾಯವಾಗಿದೆ!!

'ಪ್ರಧಾನ ಮಂತ್ರಿ ಜನ್ ಔಷಧಿ ಯೋಜನೆ' (PMJAY) ಎಂಬುದು ಸರ್ಕಾರ, ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು (CPSU) ಮತ್ತು ಖಾಸಗಿ ವಲಯದ ಔಷಧಿ ಉತ್ಪಾದನಾ ಕಂಪನಿಗಳು, ಓಒಜಿ ಸಂಘಗಳು, ಸಹಕಾರ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳನ್ನು ಒಳಗೊಂಡ ಸಾರ್ವಜನಿಕ ಯೋಜನೆ. ಅಂದರೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮೂಲಕ ಕೈಗೆಟುಕುವ ಬೆಲೆಯಲ್ಲಿ ಬ್ರಾಂಡ್ ಇಲ್ಲದ, ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು (ಬ್ರಾಂಡೆಡ್ ಔಷಧಿಗಳಲ್ಲ ಎಂಬುದನ್ನು ಗಮನಿಸಿ) ಲಭ್ಯವಾಗುವಂತೆ ಮಾಡುವ ಒಂದು ಯೋಜನೆ. ಆದರೂ, ಇದನ್ನು ಮೋದಿ ಹೆಸರಿಗೆ ಗಂಟು ಹಾಕಲಾಗಿದೆ.

2008 ರಲ್ಲಿಯೇ ಜನೌಷಧಿ ಮಳಿಗೆ

ಜನೌಷಧಿ ಅಭಿಯಾನವು ನರೇಂದ್ರ ಮೋದಿ ಪ್ರಧಾನಿಯಾದ ನಂತರ ರೂಪಿಸಲಾದ ಯೋಜನೆಯಲ್ಲ. ಭಾರತ ಸರ್ಕಾರ ಪ್ರಾರಂಭಿಸಿದ ಜನೌಷಧಿ ಯೋಜನೆ (ಜೆಎಎಸ್) 2008 ರಲ್ಲಿ ಫಾರ್ಮಾಸ್ಯುಟಿಕಲ್ಸ್ ಇಲಾಖೆಯಿಂದ ಪ್ರಾರಂಭವಾಯಿತು. 25 ನವೆಂಬರ್ 2008 ರಂದು ನವ ದೆಹಲಿಯ ಶಾಸ್ತ್ರಿ ಭವನದಲ್ಲಿ ಜನೌಷಧಿ ಮಳಿಗೆಯನ್ನು CPSU (Central Public Sector Undertakings) ಗಳಾದ IDPL, BPC ಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಮೊದಲ ಜನೌಷಧಿಯನ್ನು ಪ್ರಾರಂಭಿಸುವುದರೊಂದಿಗೆ ಜನೌಷಧಿ ಅಭಿಯಾನವು ಪ್ರಾರಂಭವಾಯಿತು.

ಸೆಪ್ಟೆಂಬರ್ 2015 ರಲ್ಲಿ, 'ಜನ್ ಔಷಧಿ ಯೋಜನೆ'ಯನ್ನು 'ಪ್ರಧಾನ ಮಂತ್ರಿ ಜನ್ ಔಷಧಿ ಯೋಜನೆ' (PMJAY) ಎಂದು ಪರಿಷ್ಕರಿಸಲಾಯಿತು. ನವೆಂಬರ್, 2016 ರಲ್ಲಿ ಇದನ್ನು ಮತ್ತೊಮ್ಮೆ "ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ" (PMBJP) ಎಂದು ಮರುನಾಮಕರಣ ಮಾಡಲಾಯಿತು.

ಜನೌಷಧಿ ಯೋಜನೆ ಪರಿಚಯ:

ಔಷಧ ಬೆಲೆ ನಿಯಂತ್ರಣ ಆದೇಶ, 1995 ರ ಅಡಿಯಲ್ಲಿ, ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರವು ಔಷಧಿಗಳ ಗರಿಷ್ಠ ಚಿಲ್ಲರೆ ಬೆಲೆಗಳು

> ***ಭಾರತದಲ್ಲಿ ಆರೋಗ್ಯವು ರಾಜ್ಯದ ವಿಷಯವಾಗಿದೆ ಮತ್ತು ಭಾರತ ಸರ್ಕಾರ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಮಾತ್ರ ನಿಯಂತ್ರಿಸುತ್ತದೆ. ಭಾರತದ ಸಂವಿಧಾನದ ಪ್ರಕಾರ ಆರೋಗ್ಯವೂ ಮೂಲಭೂತ ಹಕ್ಕಲ್ಲ. ಈ ಅಂಶಗಳು ಜನೌಷಧಿ ಯೋಜನೆಗಳಂತಹ ಆರೋಗ್ಯಕ್ಕೆ ಸಂಬಂಧಿಸಿದ ಯಾವುದೇ ಯೋಜನೆ ಮತ್ತು ಕಾರ್ಯಕ್ರಮದ ಮೇಲೆ ಭಾರಿ ಪರಿಣಾಮ ಬೀರುತ್ತವೆ. ನಾಗರಿಕರ ಆರೋಗ್ಯವನ್ನು ಸುಧಾರಿಸಲು ಮತ್ತು ಅಂಚಿನಲ್ಲಿರುವ ಜನರಿಗೆ ಕೈಗೆಟುಕುವ ಔಷಧಿಗಳೊಂದಿಗೆ ಸಹಾಯ ಮಾಡುವ ಜೆಎಎಸ್ ಅನ್ನು ಮತ್ತಷ್ಟು ವಿಸ್ತರಿಸಬೇಕಾಗಿದೆ. ಭಾರತದ ಔಷಧೀಯ ಉದ್ಯಮವು ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಸಮಂಜಸವಾದ ಬೆಲೆಯಲ್ಲಿ ಉತ್ಪಾದಿಸುತ್ತದೆ. ಆದ್ದರಿಂದ, ಭಾರತೀಯ ಜೆನೆರಿಕ್ಸ್ ಅನೇಕ ದೇಶಗಳಿಗೆ ರಫ್ತಾಗುತ್ತದೆ. ಭಾರತದ ಅಂಚಿನಲ್ಲಿರುವ ಜನಸಂಖ್ಯೆಯ ಅನೇಕ ಬ್ರಾಂಡ್ ಔಷಧಿಗಳನ್ನು ಪಡೆಯಲು ಸಾಧ್ಯವಾಗದ ಕಾರಣ, ಜನಸಂಖ್ಯೆಯ ಹಿತದೃಷ್ಟಿಯಿಂದ ಭಾರತೀಯರಿಗೆ ಅಗ್ಗದ ಜೆನೆರಿಕ್ಗಳನ್ನು ಲಭ್ಯವಾಗುವಂತೆ ಮಾಡುವ ತುರ್ತು ಅಗತ್ಯವಿದೆ. ಔಷಧಗಳ ಸೀಮಿತ ಮತ್ತು ಹಲವು ಔಷಧಿಗಳು ಲಭ್ಯತೆ ಇಲ್ಲದಿರುವುದರಿಂದಾಗಿ ನಾಗರೀಕರಿಗೆ ಹೆಚ್ಚು ಸಹಕಾರಿಯಾಗುತ್ತಿಲ್ಲ. ಜನೌಷಧಿ ಕುರಿತಾಗಿ ಜನರಲ್ಲಿ ಅರಿವು ಮೂಡಿಸಬೇಕಿದೆ. ಸರ್ಕಾರದ ನಿಷ್ಕಾಳಜಿಯಿಂದಾಗಿ ಮತ್ತು ಅದರ ಮುಕ್ತ ಆರ್ಥಿಕ ನೀತಿಗಳಿಂದಾಗಿ ಈ ಯೋಜನೆ ವೇಗವಾಗಿ ವಿಸ್ತಾರಗೊಳ್ಳುತ್ತಿಲ್ಲ. ಇಂತಹ ಯೋಜನೆಗಳನ್ನು ವಿಸ್ತಾರಗೊಳಿಸುವ ಜೊತೆಗೆ, ಆರೋಗ್ಯ ಜನರ ಮೂಲಭೂತ ಹಕ್ಕು ಎಂದು ಘೋಷಣೆಯಾಗಬೇಕು. ಎಲ್ಲರಿಗೂ ಉಚಿತ ಅಥವಾ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ ದೊರಕುವಂತಾಗಬೇಕಿದೆ.***

ಮತ್ತು ಅವುಗಳ ಸೂತ್ರೀಕರಣಗಳನ್ನು ನಿಯಂತ್ರಿಸುತ್ತದೆ. ಎಲ್ಲರಿಗೂ, ವಿಶೇಷವಾಗಿ ಬಡವರು ಮತ್ತು ಹಿಂದುಳಿದವರಿಗೆ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಜೆನೆರಿಕ್ ಔಷಧಿಗಳ ಲಭ್ಯತೆ ಕಾಳಜಿಯ ಭಾಗವಾಗಿ, ಭಾರತ ಸರ್ಕಾರ ಔಷಧೀಯ ಇಲಾಖೆಯ ಮೂಲಕ "ಜನ್ ಔಷಧಿ" ಎಂಬ ಹೆಸರಿನ ಯೋಜನೆಯನ್ನು 2008 ರಲ್ಲಿ ಜನೌಷಧಿ ಸ್ಟೋರ್ಸ್ (JAS) ಅನ್ನು ತೆರೆಯುವ ಮೂಲಕ ಪ್ರಾರಂಭಿಸಿತು. ರಾಸಾಯನಿಕಗಳು ಮತ್ತು ರಸಗೊಬ್ಬರಗಳ ಸಚಿವಾಲಯದ ಅಡಿಯಲ್ಲಿ ಫಾರ್ಮಾಸ್ಯುಟಿಕಲ್ಸ್ ಇಲಾಖೆಯು ಈ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಹಲವಾರು ನಿಯಂತ್ರಕ ಮತ್ತು ಹಣಕಾಸಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.



ಭಾರತದ ಪ್ರತಿ ಜಿಲ್ಲೆಯಲ್ಲಿ ಜನೌಷಧಿ ಮಳಿಗೆಗಳನ್ನು ಸ್ಥಾಪಿಸುವುದು ಅಭಿಯಾನದ ಮೂಲ ಗುರಿಯಾಗಿತ್ತು. ಮಾರ್ಚ್ 2012 ರ ಅಂತ್ಯಕ್ಕೆ 112 ಮಳಿಗೆಗಳನ್ನು ತೆರೆಯಲಾಗಿತ್ತು. ಪ್ರಚಾರದ ವೇಗವರ್ಧಿತ ಬೆಳವಣಿಗೆಯನ್ನು ಹೊಂದಲು, 2016–17 ರ ಅಂತ್ಯದ ವೇಳೆಗೆ 3000 ಜನ ಔಷಧಿ ಮಳಿಗೆಗಳನ್ನು ತೆರೆಯುವ ಮಹತ್ವಾಕಾಂಕ್ಷೆಯ ಗುರಿಯೊಂದಿಗೆ ಹೊಸ ವ್ಯಾಪಾರ ಯೋಜನೆಯನ್ನು ಆಗಸ್ಟ್ 2013 ರಲ್ಲಿ ಬಿಡುಗಡೆ ಮಾಡಲಾಯಿತು.

ಈ ಯೋಜನೆಯು, ಖಾಸಗಿ ಔಷಧೀಯ ಉದ್ಯಮದಿಂದ ಔಷಧಿಗಳ ಅಸಮರ್ಥನೀಯ ಬೆಲೆಗಳ ವಿರುದ್ಧ ಪ್ರಬಲವಾದ ಹಸ್ತಕ್ಷೇಪವನ್ನು ತೋರುತ್ತಿದೆ. ಫಾರ್ಮಾಸ್ಯುಟಿಕಲ್ಸ್ ಇಲಾಖೆಯ ವಿಶೇಷ ವಿಭಾಗವಾದ ಬ್ಯೂರೋ ಆಫ್ ಫಾರ್ಮಾ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಆಫ್ ಇಂಡಿಯಾ (BPSU) ಗೆ ಎಂಬ ನ ಕಾರ್ಯಾಚರಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿದೆ. ರಾಷ್ಟ್ರದಲ್ಲಿ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆಯ ಗುಣಮಟ್ಟವನ್ನು ಸುಧಾರಿಸಲು ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.

> **ಸರ್ಕಾರದ ಅನುದಾನ ರೂ. 72 ಕೋಟಿ: ನಾಗರೀಕರಿಗಾದ ಲಾಭ 5,300 ಕೋಟಿ ರೂ.!!**

ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (PMBJP):

ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ ಯೋಜನೆಯಡಿಯಲ್ಲಿ, 30ನೇ ನವೆಂಬರ್ 2022 ರವರೆಗೆ, ದೇಶಾದ್ಯಂತ 8,916 PMBJ ಕೇಂದ್ರಗಳನ್ನು ತೆರೆಯಲಾಗಿದೆ. ಮಾರ್ಚ್ 2025 ರ ವೇಳೆಗೆ ಈ ಕೇಂದ್ರಗಳನ್ನು 10,500 ಕ್ಕೆ ಹೆಚ್ಚಿಸುವ ಗುರಿಯಿದೆ. ಜನೌಷಧಿ ಔಷಧಿಗಳ ಬೆಲೆಗಳು ಸಾಮಾನ್ಯವಾಗಿ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಿರುವ ಬ್ರಾಂಡೆಡ್ ಔಷಧಿಗಳಿಗಿಂತ ಶೇ. 50ರಿಂದ 90 ರಷ್ಟು ಕಡಿಮೆ. ಉತ್ಪನ್ನಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಮಾತ್ರ ವಿಶ್ವ ಆರೋಗ್ಯ ಸಂಸ್ಥೆ – ಉತ್ತಮ ಉತ್ಪಾದನಾ ಅಭ್ಯಾಸಗಳು (WHO-GMP) ಪ್ರಮಾಣೀಕೃತ ಪೂರೈಕೆದಾರರಿಂದ ಔಷಧಿಗಳನ್ನು ಸಂಗ್ರಹಿಸಲಾಗುತ್ತದೆ. (ಮಾಹಿತಿ– 22, DEC 2022– PIB)

ಈ ಔಷಧ ಕೇಂದ್ರಗಳಲ್ಲಿ ಮಧುಮೇಹ ವಿರೋಧಿ, ಹೃದಯರಕ್ತನಾಳದ ಔಷಧಗಳು, ಕ್ಯಾನ್ಸರ್ ವಿರೋಧಿ, ನೋವು ನಿವಾರಕಗಳು ಮತ್ತು ಜ್ವರನಿವಾರಕಗಳು, ಆಂಟಿಪೈರೆಟಿಕ್ಸ್, ಜಠರ ವಿರೋಧಿಗಳು, ಜೀವಸತ್ವಗಳು, ಖನಿಜಗಳು ಮತ್ತು ಆಹಾರ ಪೂರಕಗಳು, ಉಷ್ಣವಲಯದ ಔಷಧಿಗಳು ಸೇರಿದಂತೆ 1,759 ಔಷಧಗಳು ಮತ್ತು 280 ಶಸ್ತ್ರಚಿಕಿತ್ಸಕಗಳನ್ನು ಒದಗಿಸಲಾಗುತ್ತಿದೆ. ಫಾರ್ಮಾಸ್ಯುಟಿಕಲ್ಸ್ & ಮೆಡಿಕಲ್ ಡಿವೈಸಸ್ ಬ್ಯೂರೋ ಆಫ್ ಇಂಡಿಯಾ (PMBI) 2021–22 ರಲ್ಲಿ 893.56 ಕೋಟಿ ರೂ.ಗಳ ಔಷಧಿಗಳನ್ನು ಮಾರಾಟವನ್ನು ಮಾಡಿದೆ, ಇದು ನಾಗರಿಕರಿಗೆ ಸುಮಾರು 5,300 ಕೋಟಿ ರೂಪಾಯಿಗಳ ಉಳಿತಾಯಕ್ಕೆ ಕಾರಣವಾಯಿತು. 2022–23 ರಲ್ಲಿ 30 ನವೆಂಬರ್ 2022 ರವರೆಗೆ, PMBI 758 ಕೋಟಿ ರೂ.ಗಳ ಔಷಧಿಗಳನ್ನು ಮಾರಾಟವನ್ನು ಮಾಡಿದೆ, ಇದು ನಾಗರಿಕರಿಗೆ ಸರಿಸುಮಾರು 4,500 ಕೋಟಿ ರೂ.ಗಳ ಉಳಿತಾಯಕ್ಕೆ ಕಾರಣವಾಗಿದೆ. ಹೀಗಾಗಿ, ಕಳೆದ 8 ವರ್ಷಗಳಲ್ಲಿ ಈ ಪರಿಯೋಜನಾ ಅಡಿಯಲ್ಲಿ ಜನರಿಗೆ ಸುಮಾರು 18,000 ಕೋಟಿ ರೂ.ಗಳನ್ನು ಉಳಿಸಲಾಗಿದೆ ಎಂದು ಸರ್ಕಾರ ಹೇಳುತ್ತಿದೆ.

ನಾಗರೀಕರಿಗೆ ಉಳಿತಾಯ ಯಾವ ಲೆಕ್ಕದಲ್ಲಿ?

ಜನೌಷಧಿ ಪರಿಯೋಜನಾ ಯೋಜನೆಯಿಂದಾಗಿ ನಾಗರಿಕರಿಗೆ 2021–22 ರ ಆರ್ಥಿಕ ವರ್ಷದಲ್ಲಿ 5,300 ಕೋಟಿ ರೂ. ಉಳಿತಾಯವಾಗಿದೆ ಎಂದು ಸರ್ಕಾರ ಅಂದಾಜು ಮಾಡಿದೆ. ಈ ಲೆಕ್ಕ ಹೇಗಿದೆಯೆಂದರೆ, ಗುಣಮಟ್ಟ ಮತ್ತು ಪರಿಣಾಮಕಾರಿತ್ವದಲ್ಲಿ ಬ್ರಾಂಡೆಡ್ ಔಷಧಿಗಳಂತೆಯೇ ಇರುವ ಜೆನೆರಿಕ್ ಔಷಧಿಗಳನ್ನು, ಬ್ರಾಂಡೆಡ್ ಔಷಧಿಗಳ ದುಬಾರಿ ಬೆಲೆಗೆ ಹೋಲಿಕೆ ಮಾಡಿ, ವ್ಯತ್ಯಾಸದ ಹಣವನ್ನು

ಪುಟ 14 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆಗೆ ಚಂದಾದಾರರಾಗಿ

ರಾಜ್ಯದಾದ್ಯಂತ
ಚಂದಾ ನೊಂದಾವಣೆಯ ವಿಶೇಷ ಅಭಿಯಾನ
2023 ಆಗಸ್ಟ್ 20 ರಿಂದ 27 ವರೆಗೆ
20 ರಂದು ಇಡೀ ದಿನ ನವೀಕರಣ, ನೊಂದಾವಣೆ ಯಶಸ್ವಿಗೊಳಿಸಿ

ಆತ್ಮೀಯರೇ,

ಮಾಧ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಸ್ಥಂಭ ಎಂದು ಕರೆಯಲಾಗುತ್ತದೆ. ಪತ್ರಿಕೆ–ಟಿ.ವಿ.ಯಂತಹ ಸಮೂಹ ಮಾಧ್ಯಮಗಳು ನೊಂದ ಜನರ ಪರವಾಗಿ ನಿಂತು ಆಳುವ ಸರಕಾರಗಳ ಅನ್ಯಾಯಗಳನ್ನು ಪ್ರಶ್ನಿಸಬೇಕು. ಜನರ ನೋವು–ಸಂಕಟಗಳಿಗೆ ದನಿಯಾಗಿ ಒಂದು ರಚನಾತ್ಮಕವಾದ ವಿರೋಧ ಪಕ್ಷದಂತೆ ಹೊಣೆಗಾರಿಕೆಯಿಂದ ಕೆಲಸ ಮಾಡಬೇಕು. ಸಮಾಜದ ಸಾಮಾಜಿಕ ಪರಿಸರವನ್ನು ಕಲುಷಿತಗೊಳಿಸುವ ಮೂಢ ನಂಬಿಕೆಗಳು, ಜಾತಿ ತಾರತಮ್ಯದ ಅಪಮಾನ, ಮತಭ್ರಾಂತಿ–ಕೋಮುದ್ವೇಷ, ಲಿಂಗ ಅಸಮಾನತೆ, ಪುರುಷ ದಬ್ಬಾಳಿಕೆ ಮುಂತಾದ ಸಾಮಾಜಿಕ ಅನಿಷ್ಟಗಳು ಮತ್ತು ದುಷ್ಟತನಗಳ ವಿರುದ್ಧವಾಗಿ ವಿಜ್ಞಾನದ ಸತ್ಯಗಳನ್ನು ಪ್ರತಿಪಾದಿಸುತ್ತಾ, ಸಮಾನತೆಯ ಮೌಲ್ಯಗಳನ್ನು ಎತ್ತಿಹಿಡಿಯುತ್ತ, ಮತೀಯ ಸೌಹಾರ್ದತೆಯ ಸಂದೇಶವನ್ನು ಬಿತ್ತುವ ಮೂಲಕ ಸಮಾಜದ ಪ್ರಗತಿಗೆ ಕೊಡುಗೆ ನೀಡಬೇಕು. ಬ್ರಿಟೀಷರ ಕರಾಳ ದಮನಕಾರಿ ಪ್ರಭುತ್ವದ ದೌರ್ಜನ್ಯಗಳಿಗೆ ಎದೆಕೊಟ್ಟು, ಸಾಮಾಜಿಕ ಹೊಣೆಗಾರಿಕೆಯೆಂಬ ಕ್ರಾಂತಿ ಕುಂಡವನ್ನು ಹೆಗಲಲ್ಲಿ ಹೊತ್ತು, ಕಲ್ಲು–ಮುಳ್ಳುಗಳು–ಕೆಂಡ ಚೆಲ್ಲಿದ ದುರ್ಗಮ ಹೋರಾಟದ ದಾರಿಯಲ್ಲಿ, ಭಾರತದ ಸುದೀರ್ಘ ಸ್ವಾತಂತ್ರ್ಯ ಆಶಯಗಳನ್ನು ಎತ್ತಿಹಿಡಿಯುತ್ತಾ, ತಲೆಎತ್ತಿ ನಿಂತ ಭಾರತದ ಪತ್ರಿಕಾ ಮಾಧ್ಯಮದ ಉನ್ನತ ಆದರ್ಶ ಮತ್ತು ಸಮಾಜಮುಖಿ ಮೌಲ್ಯಗಳೆಲ್ಲವೂ ಈಗ ಬಹುತೇಕ ಮಣ್ಣು ಪಾಲಾಗಿವೆ.

ದುರದೃಷ್ಟವಶಾತ್, ಇಂದಿನ ಹೆಚ್ಚಿನ ಮಾಧ್ಯಮಗಳು ಜನಪರ ಆದರ್ಶ– ಉದಾತ್ತ ಮೌಲ್ಯಗಳನ್ನು ತುಳಿತುಳಿದು ನೈತಿಕ ಅಧಃಪತನದ ಅಂಚಿಗೆ ಬಂದು ನಿಂತಿವೆ. ಇಂದು ಹಲವು ಟಿ.ವಿ.ವಾಹಿನಿಗಳು, ಪತ್ರಿಕೆಗಳು ಸಮಾಜದಲ್ಲಿ ಹರಡುತ್ತಿರುವ ಸುಳ್ಳು ಸುದ್ದಿಗಳು, ಮೌಢ್ಯತೆ ಮತ್ತು ದ್ವೇಷವೆಂಬ ವಿಷದ ದುಷ್ಪರಿಣಾಮಗಳನ್ನು ಅಳಿಸಲು ಪ್ರಜ್ಞಾವಂತ ಜನರು ಹಗಲಿರುಳು ದಣಿದು ಹೋರಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗಿದೆ.

ಪತ್ರಿಕಾ ವೃತ್ತಿ ಎಂಬುದು ಈಗ ಬಹುತೇಕ ‘ಪತ್ರಿಕೋದ್ಯಮ’ವಾಗಿದ್ದು ನಿರ್ಲಜ್ಜ ವ್ಯಾಪಾರವಾಗಿ ಪರಿವರ್ತಿತವಾಗಿದೆ. ಟಿ.ವಿ.ಗಳೆಂಬ ದೃಶ್ಯ ಮಾಧ್ಯಮ ಎಂಬುದು ಬಹುತೇಕ, ಜನರನ್ನು ದಾರಿ ತಪ್ಪಿಸುವ ಟಿ.ಆರ್.ಪಿ. ದಂಧೆಯಾಗಿದೆ. ಜಾಹೀರಾತು ನೀಡುವ ಲಾಭಕೋರ ಕಾರ್ಪೋರೇಟ್ ಕಂಪನಿಗಳು–ಲೂಟಿಕೋರ ಶಕ್ತಿಗಳ ಹಂಗಿನಲ್ಲಿ ಬಿದ್ದಿರುವ ಸಮೂಹ ಮಾಧ್ಯಮಗಳು,

ಸಮಾಜದ್ರೋಹಿ ಧೋರಣೆಗಳನ್ನು ನಿಷ್ಕರುಣೆಯಿಂದ ಅಂಗೀಕರಿಸಿವೆ. ನಮ್ಮ ದೇಶದ ಬಹುಪಾಲು ಮಾಧ್ಯಮಗಳ ಮೇಲೆ ಕಾರ್ಪೋರೇಟ್ ಬಂಡವಾಳವು ಹಿಡಿತ ಸಾಧಿಸಿದ್ದು, ಜನದನಿಗೆ ಜಾಗವೇ ಇಲ್ಲದಂತಾಗಿದೆ. ನೊಂದವರ, ಶೋಷಿತ ಬಡವರ ಮತ್ತು ಅಪಮಾನಿತರ ಕಣ್ಣೀರಿಗೆ ಕಿಂಚಿತ್ತು ಬೆಲೆಯೂ ಇಲ್ಲವಾಗಿದೆ. ಸಮೂಹ ಮಾಧ್ಯಮಗಳ ಮಾನಗೇಡಿತನವು ಪದೇ ಪದೇ ಬಟಾಬಯಲಾಗುತ್ತಿದ್ದರೂ ಮಾಧ್ಯಮಗಳಿಗೆ ಲಜ್ಜೆಯೂ ಇಲ್ಲವಾಗಿದೆ.

ವಾಸ್ತು, ಫಲಜ್ಯೋತಿಷ್ಯ ಮುಂತಾದ ಮೌಢ್ಯಗಳು, ಕೊಲೆ–ರಕ್ತಪಾತ ಮುಂತಾದ ಪಾತಕ ಲೋಕದ ಪರೀಕತ್ತುಗಳು, ಸಿನಿಮಾ–ಕ್ರಿಕೆಟ್ ತಾರೆಯರು ಮತ್ತು ಶ್ರೀಮಂತ ವರ್ಗಗಳ ಅಮೋದ ಪ್ರಮೋದ, ಹುಸಿ ಪ್ರತಿಷ್ಠೆಯ ವಿಜೃಂಭಣೆಗಳು, ಕೀಳು ಅಭಿರುಚಿಯ ಮೋಜುವಾನಿಗಳು, ಗಾಸಿಪ್ಪುಗಳೇ, ಉದ್ರಿಕ್ತ ರಾಜಕೀಯ ಮೇಲಾಟಗಳು, ವ್ಯಕ್ತಿವಾದದ ಆಟಾಟೋಪಗಳು, ಮತಭ್ರಾಂತಿಯ ಮಸಲತ್ತುಗಳು, ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಜಾತಿ–ಅಸ್ಪೃಶ್ಯತೆಗಳನ್ನು, ಮಹಿಳೆ ಕೀಳೆಂದು ನಿರೂಪಿಸುವ ಕೊಳೆತ ಅಸಮಾನ ಮೌಲ್ಯಗಳನ್ನು ಪ್ರತಿಪಾದಿಸುವ ಹಳಸಲು ಫಲಕುಗಳು ನಮ್ಮ ಸಮೂಹ ಮಾಧ್ಯಮಗಳು ಮಾರುವ ಪ್ರಧಾನ ಸರಕುಗಳಾಗಿವೆ.

ಆಳುವ ವರ್ಗಗಳ ಅಣತಿಯಂತೆ ಕುಣಿಯುವ ಮತ್ತು ಚೀರುವ ಟಿ.ವಿ.–ಪತ್ರಿಕೆಗಳು, ಪ್ರಭುತ್ವದ ಉರುಳಿಸುವ ದಾಳ ಮತ್ತು ಅಧಿಕಾರಸ್ಥರ ತಾಳಕ್ಕೆ ತಕ್ಕಂತೆ ಕುಣಿಯುವ ಮಾಧ್ಯಮಗಳು ಹರಡಿರುವ ಸುಳ್ಳಿನ ಪೊರೆಯನ್ನು ಹರಿದು, ಭ್ರಮೆಗಳ ಗುಳ್ಳೆಗಳನ್ನು ಒಡೆದು, ಸತ್ಯ ದರ್ಶನ ಮಾಡಿಸಲು ಜನರ ಹಿತಕಾಯಲು ಕಟಿಬದ್ಧವಾದ ಪರ್ಯಾಯ ಮಾಧ್ಯಮವೇ ಬೇಕು.

ಸಮಾಜದ ಸುತ್ತಮುತ್ತಲು ಕತ್ತಲು ಆವರಿಸುತ್ತಿರುವ ಇಂತಹ ವಿಷಾದನೀಯ ಸನ್ನಿವೇಶದಲ್ಲಿ ತನ್ನ ಕೊರಳಲ್ಲಿ ತುಳಿತಕ್ಕೊಳಗಾದವರ ಮಾತುಗಳನ್ನು ಮಿಳಿತಗೊಳಿಸಿಕೊಂಡು ಗಟ್ಟಿಯಾಗಿ ದನಿ ಎತ್ತುತ್ತಿರುವ ಕೆಲವೇ ಕೆಲವು ಪರ್ಯಾಯ ಮಾಧ್ಯಮಗಳ ಸಾಲಿನಲ್ಲಿ ನಿಂತ ಒಂದು ಜನಪರ ಮಾಧ್ಯಮ ‘ಜನಶಕ್ತಿ’.

ದೇಶದ ರೈತ, ಕೂಲಿಕಾರ–ಕಾರ್ಮಿಕ, ಸೇವಾ ನೌಕರ ಮೊದಲಾದ ಶ್ರಮಿಕರ ಬದುಕಿನ ಮೇಲೆ ಎರಗಿದ ಜಾಗತೀಕರಣ ನೀತಿಗಳ ದುಷ್ಟ ಸ್ವರೂಪಗಳು ಮತ್ತು ಖಾಸಗೀಕರಣದ ನೀತಿಗಳ ದೇಶಿ ವಿರೋಧಿ ಮುಖಗಳು, ಮಹಿಳೆಯರು–ದಲಿತರು, ಆದಿವಾಸಿಗಳು ಮುಂತಾದ ಅವಕಾಶ ವಂಚಿತ ಸಮುದಾಯಗಳ ವಿರುದ್ಧ ನಡೆಯುತ್ತಿರುವ ನಿರಂತರ ಸಂಚುಗಳು ಹಾಗೂ ದೌರ್ಜನ್ಯಗಳ ವಿರುದ್ಧ ಸೆಣೆಸುತ್ತಿರುವ ಪತ್ರಿಕೆ ಜನಶಕ್ತಿ ಕನ್ನಡ ವಾರ ಪತ್ರಿಕೆಯು ತನ್ನ ಸೀಮಿತ ಸಂಪನ್ಮೂಲಗಳ ಇತಿಮಿತಿಯಲ್ಲಿಯೂ ಕೂಡ ದುಡಿಯುವ ಜನರ ಪರವಾದ ಗಟ್ಟಿ ದನಿಯನ್ನು ಮೊಳಗಿಸುತ್ತ ಬಂದಿದೆ. ವಸ್ತುನಿಷ್ಠತೆಯ ಪ್ರತಿಪಾದಕವಾಗಿದೆ.

‘ಸರ್ವ ಜನಾಂಗದ ಶಾಂತಿ ತೋಟ’ ವನ್ನು ಸರ್ವ ಜನಾಂಗದ ಸ್ಮಶಾನವನ್ನಾಗಿ ಮಾಡಲು ಹೊರಟಿರುವ ಕಾರ್ಪೋರೇಟ್–ಕೋಮುವಾದಿ ಶಕ್ತಿಗಳ ವಿಷ ಪ್ರಚಾರದ ಎದುರು ಶಾಂತಿ ಸೌಹಾರ್ದತೆಯ ಸಂದೇಶವಾಹಕವಾಗಿ ಕೆಲಸ ಮಾಡುತ್ತಿರುವ ಜನಪರ ಮಾಧ್ಯಮ ಜನಶಕ್ತಿ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕ್ರೀಡೆ, ರಾಜಕೀಯ, ದೇಶ ವಿದೇಶಗಳ ವಿದ್ಯಾಮಾನಗಳ ವಸ್ತು ನಿಷ್ಠ ವಿಶ್ಲೇಷಣೆ ಜನಶಕ್ತಿಯ ಅಂತಃಸತ್ವವಾಗಿದೆ. ಚಲನಶೀಲ ಜನ ಸಮೂಹದ ಪತ್ರಿಕೆಯಾಗಿರುವ ಜನಶಕ್ತಿ ಪತ್ರಿಕೆಯು ಹಲವು ದಶಕಗಳಿಂದ ನಿರಂತರ ಪ್ರಕಟವಾಗುತ್ತಿದೆ. ಸಿಗದ ಸರಕಾರದ ಇಲಾಖೆಗಳ ಬೆಂಬಲ, ಬೆಲೆ ಏರಿಕೆಯ ಬಿಸಿ, ಹೆಚ್ಚುತ್ತಿರುವ ನಿರ್ವಹಣಾ ವೆಚ್ಚದಂತಹ ಹಲವು ಹೊರೆಗಳ ನಡುವೆ ಪತ್ರಿಕೆ ತನ್ನ ಬದ್ಧತೆಯನ್ನು ಕಾಪಾಡಿಕೊಂಡು ಹೊರ ಬರುತ್ತಿದೆ. ಜನಶಕ್ತಿಯಂತಹ ಜನ ಮಾಧ್ಯಮಕ್ಕೆ ಸಹೃದಯಿ ಓದುಗರೇ ನಿಜ ಬೆಂಬಲಿಗರು. ಈ ದೆಸೆಯಲ್ಲಿ ಪತ್ರಿಕೆಯ ಪ್ರಸಾರಾಂದೋಲನವನ್ನು ಸಂಪಾದಕ ಮಂಡಳಿ ಹಮ್ಮಿಕೊಂಡಿದ್ದು ತಾವು ಚಂದಾದಾರರಾಗಬೇಕಾಗಿ ವಿನಂತಿಸುತ್ತೇವೆ.

ಯು.ಬಸವರಾಜ	ಡಾ. ಕೆ.ಪ್ರಕಾಶ	ಡಾ. ಎಸ್.ವೈ.ಗುರುಶಾಂತ್
ಪ್ರಕಾಶಕರು	ಸಂಪಾದಕರು	ಕಾರ್ಯನಿರ್ವಾಹಕ ಸಂಪಾದಕರು

ನೂಹ್ ಮತ್ತು ಗುರ್‌ಗಾಂವ್‌ಗೆ ಸಿಪಿಐ(ಎಂ) ನಿಯೋಗದ ಭೇಟಿ

“ಕೋಮು ಧ್ರುವೀಕರಣದ ಉದ್ದೇಶದಿಂದಲೇ ಚೆನ್ನಾಗಿ ಸಂಯೋಜಿಸಿದ ಹುನ್ನಾರದ ಫಲಿತಾಂಶ”

ರಾಜ್ಯಸಭಾ ಸಂಸದರಾದ ಎ.ಎ. ರಹೀಮ್ ಮತ್ತು ವಿ. ಶಿವದಾಸನ್, ಸಿಪಿಐ(ಎಂ) ಹರಿಯಾಣ ರಾಜ್ಯ ಕಾರ್ಯದರ್ಶಿ ಸದಸ್ಯರಾದ ಇಂದರ್‌ಜಿತ್ ಸಿಂಗ್ ಮತ್ತು ಇತರರನ್ನು ಒಳಗೊಂಡ ಪೊಲಿಟ್‌ಬ್ಯೂರೋ ಸದಸ್ಯ ನೀಲೋತ್ಪಲ್ ಬಸು ನೇತೃತ್ವದ ಸಿಪಿಐ(ಎಂ) ನಾಯಕರ ನಿಯೋಗವು ಆಗಸ್ಟ್ 10 ರಂದು ನೂಹ್ ಮತ್ತು ಗುರ್‌ಗಾಂವ್‌ಗೆ ಭೇಟಿ ನೀಡಿತ್ತು. ಜುಲೈ 31 ಮತ್ತು ನಂತರದ ವ್ಯಾಪಕ ಹಿಂಸಾಚಾರದ ಪರಿಸ್ಥಿತಿ. ಮೇವಾತ್‌ನ ಹಿಂಸಾಚಾರ ಪೀಡಿತ ಪ್ರದೇಶವನ್ನು ತಲುಪಿದ ಮೊದಲ ವಿರೋಧ ಪಕ್ಷದ ನಿಯೋಗ ಇದಾಗಿದೆ. **ಭೇಟಿಯ ನಂತರ ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ:**

ಹಿಂಸಾಚಾರವು ಅಕಸ್ಮಾತ್ತಾಗಿ ನಡೆದದ್ದಲ್ಲ, ಬದಲಾಗಿ ಪಕ್ಕದ ರಾಜಸ್ಥಾನ ವಿಧಾನಸಭೆಗೆ ಮುಂಬರುವ ಚುನಾವಣೆ ಮತ್ತು 2024ರ ಲೋಕಸಭೆ ಚುನಾವಣೆಯಲ್ಲಿ ಚುನಾವಣಾ ಲಾಭ ಗಳಿಸುವ ಸಲುವಾಗಿ ಕೋಮು ಧ್ರುವೀಕರಣದ ಉದ್ದೇಶದಿಂದ ಚೆನ್ನಾಗಿಯೇ ಸಂಯೋಜಿತ ಹುನ್ನಾರದ ಫಲಿತಾಂಶವಾಗಿದೆ.

ಗೋಕಾವಲುಕೋರರ ಸಶಸ್ತ್ರ ಪಡೆಗಳು ಯಾವುದೇ ಭಯವಿಲ್ಲದೆ ಜಾನುವಾರು ಸಾಕಣೆದಾರರು ಮತ್ತು ವ್ಯಾಪಾರಿಗಳನ್ನು ಹೊಡೆದು ಸಾಯಿಸುವ ಘಟನೆಗಳ ಒಂದು ಸರಣಿಯೇ ಇಲ್ಲಿ ನಡೆದಿದೆ. ಇದರಲ್ಲಿ ಇತ್ತೀಚಿನದ್ದು ಫೆಬ್ರವರಿಯಲ್ಲಿ ಪಕ್ಕದ ರಾಜಸ್ಥಾನದ ಘಕ್ಮಿಕಾ ಎಂಬ ಹಳ್ಳಿಯ ಇಬ್ಬರು ಮಿಯೋ ಯುವಕರನ್ನು ಅಪಹರಿಸಿ ಹರ್ಯಾಣದ ಭಿವಾನಿಯ ಲೋಹರು ಗ್ರಾಮದಲ್ಲಿ ಸುಟ್ಟು ಕೊಂದ ಅತ್ಯಂತ ಕ್ರೂರ ಪ್ರಸಂಗ. ಅಂದಿನಿಂದ ಈ ಘೋರ ಅಪರಾಧದ ಪ್ರಮುಖ ಆರೋಪಿ ಮೋನು ಮಾನೇಸರ್‌ನನ್ನು ರಾಜಸ್ಥಾನ ಪೊಲೀಸರು ಬಂಧಿಸುವುದನ್ನು ತಡೆಯಲು ಹರಿಯಾಣ ಪೊಲೀಸರ ರಕ್ಷಣೆಯಲ್ಲಿದ್ದಾನೆ.

ಮೇವಾತ್ ಪ್ರದೇಶವು ಪರಿಪೂರ್ಣ ಕೋಮು ಸೌಹಾರ್ದಕ್ಕೆ ಹೆಸರುವಾಸಿಯಾಗಿದೆ, ಇಲ್ಲಿ ಕೋಮುಗಲಭೆಗಳ ಇತಿಹಾಸವಿಲ್ಲ. ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ಆಯೋಜಿಸಿದ ಧಾರ್ಮಿಕ ಯಾತ್ರೆಗೆ ಸಂಪೂರ್ಣವಾಗಿ ಹೊರಗಿನಿಂದಲೇ ಶಸ್ತ್ರಾಸ್ತ್ರಗಳನ್ನು ಹೊಂದಿದ ರೌಡಿ ಗುಂಪುಗಳನ್ನು ಸಂಘಟಿಸಲಾಗಿತ್ತು.

ಮೋನು ಮಾನೇಸರ್ ಮತ್ತು ಇತರರಿಂದ ಅತಿರೇಕದ ಮತ್ತು ಕೋಮುಪ್ರಚೋದಕ ವೀಡಿಯೊಗಳು ಯಾತ್ರೆಗೆ ಮುನ್ನ ವೈರಲ್ ಆಗಿದ್ದವು ಎಂಬುದು ಈಗ ತಿಳಿದಿರುವ ಸತ್ಯ. ಆದರೂ ಸ್ಥಳೀಯ ಶಾಸಕರು ಮತ್ತು ನೂಹ್‌ನ ಇತರ ಪ್ರಮುಖರ ಆತಂಕಗಳನ್ನು ಜಿಲ್ಲಾ ಅಧಿಕಾರಿಗಳು ಗಮನಿಸದೆ ಅದಕ್ಕೆ ಅನುಮತಿ ನೀಡಿದರು.

ನೂಹ್ ಪ್ರವೇಶಿಸಿದ ನಂತರ ವಿಎಚ್‌ಪಿ–ಬಜರಂಗದಳದ ಹುನ್ನಾರಗಳ ಅವಹೇಳನಕಾರಿ ಭಾಷೆ ಮತ್ತು ಆಕ್ರಮಣಕಾರಿ ಭಂಗಿಗಳನ್ನು ಬಳಸಿದ ವೀಡಿಯೊಗಳು ಹಿಂಸಾಚಾರಕ್ಕೆ ಕಾರಣವಾದ ಕೆಲವು ಸ್ಥಳೀಯ ಅಂಶಗಳೊಂದಿಗೆ ಪ್ರಚೋದಕವಾಗಿ ಕೆಲಸ ಮಾಡಿದ್ದು, ಗುಗಾರ್ಂವ್ ಅಂಜುಮನ್ ಮಸೀದಿಯ ಯುವ ಇಮಾಮ್ ಸೇರಿದಂತೆ 6 ಜನರ ದುರದೃಷ್ಟಕರ ಸಾವಿಗೆ ಕಾರಣವಾಯಿತು. ರಾತ್ರಿಯ ಸಮಯದಲ್ಲಿ ಉನ್ಮಾದಗೊಂಡ ಜನಜಂಗುಳಿ ಮಸೀದಿಯನ್ನು ಧ್ವಂಸಗೊಳಿಸಲು ಅನುಮತಿ ನೀಡಲಾಯಿತು ಮತ್ತು ದಾಳಿಯ ಸಾಧ್ಯತೆಯಿದ್ದ ಸ್ಥಳವನ್ನು ರಕ್ಷಿಸಲು ಪೊಲೀಸರನ್ನು ನಿಯೋಜಿಸದ ಕಾರಣ ಇಮಾಮ್ ಅನ್ನು ಗುಂಡಿಕ್ಕಿ ಕೊಲ್ಲಲಾಯಿತು.



ಅತ್ಯಂತ ಹೀನ ಪ್ರಭುತ್ವ–ಪ್ರಾಯೋಜಿತ ಪ್ರತೀಕಾರದ ಕೃತ್ಯಗಳು ನಡೆದದ್ದು ಒಂದು ವಾರದ ಕರ್ಫ್ಯೂ ಅವಧಿಯಲ್ಲಿಯೇ. ನೂಹ್ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿ ಭಯೋತ್ಪಾದಕ ಆಳ್ವಿಕೆಯನ್ನು ಸೃಷ್ಟಿಸಲು ಹರಿಯಬಿಟ್ಟಿರುವ ಮಿಯೋ ಯುವಕರನ್ನು ವಿವೇಚನೆಯಿಲ್ಲದ ಬಂಧಿಸುವ ಮತ್ತು ಥಳಿಸುವ ಏಕಪಕ್ಷೀಯ ದಮನ ಇನ್ನೂ ಮುಂದುವರೆದಿದೆ. ಕರ್ಫ್ಯೂ ಮತ್ತು ಇಂಟರ್ನೆಟ್ ಕಡಿತದ ಪರಿಸ್ಥಿತಿಯಲ್ಲಿ ಬುಲ್ಡೋಜರ್‌ಗಳನ್ನು ಹರಿಸಿ ಸಾಮೂಹಿಕವಾಗಿ ಅಂಗಡಿಗಳು, ವಸತಿಗಳು, ಶೋರೂಮ್‌ಗಳು ಇತ್ಯಾದಿಗಳನ್ನು ನೆಲಸಮಗೊಳಿಸಲಾಯಿತು, ಇದು ಕರ್ಫ್ಯೂ ಹೇರುವಿಕೆಯ ನಿಜವಾದ ಉದ್ದೇಶವನ್ನು ಬಯಲಿಗೆ ತರುತ್ತದೆ. ಏಕೆಂದರೆ ಕರ್ಫ್ಯೂ ಹೇರುವುದನ್ನು ಯಾವುದೇ ಸ್ಥಳೀಯ ಗಲಭೆಯನ್ನು ತೋರಿಸಿ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ನಲ್ಹಾರ್ ಮೆಡಿಕಲ್ ಕಾಲೇಜು ಮುಂಭಾಗದಲ್ಲಿ ನೆಲಸಮಗೊಂಡ ಅಂಗಡಿಗಳಿಂದ ನೊಂದವರು ತಮ್ಮ ನೋವನ್ನು ನಿಯೋಗಕ್ಕೆ ತಿಳಿಸಿದರು. ಆಗಿರುವ ಅಪಾರ ನಷ್ಟ ಪರಿಹಾರಕ್ಕೆ ಶ್ರಮಿಸುವುದಾಗಿ ಮುಖಂಡರು ಭರವಸೆ ನೀಡಿದರು.

ಪುಟ 14 ಕ್ಕೆ

ಕುಟುಂಬ ಆರೋಗ್ಯ ಸಮೀಕ್ಷೆ 2019–21ರ ವರದಿ 2015–16ರ ಸಮೀಕ್ಷೆಗೆ ಹೋಲಿಸಿದರೆ ಮಕ್ಕಳು ಮತ್ತು ಮಹಿಳೆಯರ ಕೆಲವು ಆರೋಗ್ಯ ಸೂಚಕಗಳು ಗಣನೀಯವಾಗಿ ಕುಸಿದಿರುವುದನ್ನು ತೋರಿಸಿತು. ಇದರಲ್ಲಿನ ಸಂದೇಶಕ್ಕೆ ಗಮನ ನೀಡುವ ಬದಲು ಸರ್ಕಾರ ಈ ಸಂದೇಶ ನೀಡಿದವರನ್ನೇ ಶಿಕ್ಷಿಸ ಹೊರಟಿತು. ಇದಕ್ಕೆ ಮೊದಲು ಹೊಸ ಸೂಚ್ಯಂಕ ಬಿಡುಗಡೆ ಮಾಡಿ, ದೇಶದಲ್ಲಿ ಬಡತನ ಗಣನೀಯವಾಗಿ ಕಡಿಮೆಯಾಗಿದೆ ಎಂದು ಹೇಳಿಕೊಂಡಿತ್ತು. ಇದೀಗ ಪೌಷ್ಟಿಕಾಂಶಕ್ಕೆ ಸಂಬಂಧಿಸಿದಂತೆ ಪರಿಗಣಿಸಬೇಕಾದ ಅಂಶಗಳನ್ನು ತಗ್ಗಿಸುವ ವಿಧಿ–ವಿಧಾನಗಳನ್ನೂ ರೂಪೀಕರಿಸಲಾಗುತ್ತಿದೆಯಂತೆ. ಇದನ್ನು ಅನ್ವಯಿಸಿ ನಮ್ಮ ದೇಶದಲ್ಲೀಗ 'ಶೂನ್ಯ ಬಡತನ' ಎನ್ನುವ ದಾವೆಗಳು ಸದ್ಯದಲ್ಲೇ ಕೇಳಬಂದರೆ ಆಶ್ಚರ್ಯಪಡಬೇಕಾಗಿಲ್ಲ! ರಾಜಕೀಯ ಶಕ್ತಿಯತಪ್ಪು ಬಳಕೆಯಿಂದ ಅಂಕಿ–ಅಂಶಗಳ ಋಜುತ್ವವನ್ನು ಎಷ್ಟರ ಮಟ್ಟಿಗೆ ಬುಡಮೇಲು ಮಾಡಲಾಗುತ್ತಿದೆ ಎಂಬುದು ಅತ್ಯಂತ ಕಳವಳಕಾರಿ ಸಂಗತಿ ಎಂದಷ್ಟೇ ಈ ಬಗ್ಗೆ ಹೇಳಲು ಸಾಧ್ಯ ಎನ್ನುತ್ತಾರೆ ಪ್ರಖ್ಯಾತ ಕೃಷಿ ಆರ್ಥಿಕತಜ್ಞೆ...

ಪ್ರೊ. ಉತ್ಸಾ ಪಟ್ನಾಯಕ್



ಅಂಕಿ–ಅಂಶಗಳ ಸಂದೇಶವನ್ನು ಗಮನಿಸುವ ಬದಲು
ಅಂಕಿ–ಅಂಶಗಳನ್ನೇ ಬುಡಮೇಲು ಮಾಡುವ ರಾಜಕೀಯ

ಕಳೆದ ಮೂರು ದಶಕಗಳ ನವ ಉದಾರವಾದಿ ಧೋರಣೆಗಳಲ್ಲಿ ದೇಶದ ಜನತೆಗೆ ಪೌಷ್ಟಿಕ ಆಹಾರದ ಲಭ್ಯತೆ ನಿಧಾನವಾಗಿ ಮತ್ತು ಖಂಡಿತವಾಗಿಯೂ ಕ್ಷೀಣಿಸುತ್ತಿದೆ. ದೇಶದ ಜನರ ಪೌಷ್ಟಿಕ ಆಹಾರದ ಸೇವನೆಯ ಬಗ್ಗೆ ಪ್ರತಿ ಐದು ವರ್ಷಕ್ಕೊಮ್ಮೆ ಸಮೀಕ್ಷೆ ನಡೆಸಲಾಗುತ್ತದೆ. ಕ್ಯಾಲೋರಿಗಳು ಮತ್ತು ಪ್ರೋಟೀನ್‌ಗಳ ತಲಾವಾರು ಸೇವನೆ ಕಡಿಮೆಯಾಗುತ್ತಿದೆ ಎಂದು (ಆದಾಗ್ಯೂ, ಹೆಚ್ಚಿನ ಆದಾಯ ಹೊಂದಿರುವವರಲ್ಲಿ ಕೊಬ್ಬಿನ ಆಹಾರಗಳ ಸೇವನೆಯು ಹೆಚ್ಚುತ್ತಿದೆ ಎಂದೂ) ಈ ಸಮೀಕ್ಷೆಗಳು ಸೂಚಿಸುತ್ತವೆ. ಅಪೌಷ್ಟಿಕತೆಯಲ್ಲಿ ಇಳಿಕೆ ಮೊದಲು ಗ್ರಾಮೀಣ ಪ್ರದೇಶದಲ್ಲಿ ಕಾಣಿಸಿಕೊಂಡು ನಂತರ ನಗರ ಪ್ರದೇಶಗಳಲ್ಲಿಯೂ ಕಾಣಿಸಿಕೊಂಡಿತು. ಧಾನ್ಯಗಳು ಮತ್ತು ಬೇಳೆಕಾಳುಗಳು ನಮ್ಮ ಜನರಿಗೆ ಶಕ್ತಿ ಮತ್ತು ಪ್ರೊಟೀನ್ ಒದಗಿಸುವ ಅತ್ಯಂತ ಪ್ರಮುಖ ಮೂಲಗಳು. ಇದರಲ್ಲಿ ಧಾನ್ಯಗಳ ಪಾಲೇ 90ಶೇ., ಇದು ಸರಾಸರಿಯಾಗಿ ಗ್ರಾಮೀಣ ನಾಗರಿಕರು ಪಡೆಯುವ ಶಕ್ತಿಯ ಮತ್ತು ಪ್ರೊಟೀನಿನ ಮೂರನೇ ಎರಡರಷ್ಟನ್ನು ಒದಗಿಸುತ್ತದೆ. ಆದರೆ ನವ ಉದಾರವಾದಿ ಸುಧಾರಣೆಗಳಲ್ಲಿ ಇತ್ತೀಚೆಗೆ ಹಲವು ವರ್ಷಗಳಿಂದ ಇದರ ಬಳಕೆಯ ಮಟ್ಟ (ಆಹಾರವಾಗಿ ನೇರ ಸೇವನೆ ಮತ್ತು ಹಾಲು, ಮೊಟ್ಟೆ, ಕೋಳಿ ಮಾಂಸ ಮುಂತಾದ ಪ್ರಾಣಿಜನ್ಯ ಉತ್ಪನ್ನಗಳಿಗೆ ಮೇವಾಗಿ) ಎಷ್ಟೊಂದು ತೀವ್ರವಾಗಿ ಕುಸಿದಿದೆಯೆಂದರೆ, ಇದು ಆಫ್ರಿಕನ್ ದೇಶಗಳಲ್ಲಿನ ಮಟ್ಟಕ್ಕಿಂತ ಬಹಳ ಕೆಳಗಿದೆ, ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದಿರುವ ಹಲವು ದೇಶಗಳಿಗಿಂತಲೂ ಕೆಳಗಿದೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ) 2019ರಲ್ಲಿ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ತಲಾವಾರು ಆಹಾರ ಧಾನ್ಯಗಳ ವಿನಿಮಯವು 171 ಕೆ.ಜಿ. (ಇದರಲ್ಲಿ ನಾವು ಸೇವಿಸುವ ಹಾಲು, ಮೊಟ್ಟೆ, ಕೋಳಿ ಉತ್ಪಾದನೆಗೆ ಬೇಕಾದ ಮೇವಿನಲ್ಲಿ ಬಳಸುವ ಧಾನ್ಯಗಳನ್ನು ಕೂಡ ಒಟ್ಟಿಗೆ ಲೆಕ್ಕ ಹಾಕಲಾಗುತ್ತದೆ) ಇದೇ ಆಫ್ರಿಕಾ ಖಂಡದಲ್ಲಿ 190 ಕೆ.ಜಿ. ಕಡಿಮೆ ಅಭಿವೃದ್ಧಿಶೀಲ ರಾಷ್ಟ್ರಗಳು 205 ಕೆ.ಜಿ. ವಿಶ್ವದ ಸರಾಸರಿ 304 ಕೆ.ಜಿ. ಚೀನಾ ಮತ್ತು ಬ್ರೆಜಿಲ್‌ನಲ್ಲಿ ಇದು 360 ಕೆಜಿಗಿಂತ ಹೆಚ್ಚು. ರಷ್ಯಾ 407 ಕೆ.ಜಿ. ಅಭಿವೃದ್ಧಿ ಹೊಂದಿದ ಕೈಗಾರಿಕೀಕರಣಗೊಂಡ ದೇಶಗಳಲ್ಲಿ ಇದು 494 ಕೆ.ಜಿ. ಯುರೋಪಿಯನ್ ಯೂನಿಯನ್ ದೇಶಗಳಲ್ಲಿ, ಅಮೆರಿಕದಲ್ಲಿ ಇದು 590 ಕೆಜಿ!



ಚಿತ್ರಕೃಪೆ: ಡೌನ್ ಟು ಅರ್ಥ್

ಮೇಲಾಗಿ, ಕಳೆದ ಕೆಲವು ದಶಕಗಳಿಂದ ಆಹಾರದ ಮೇಲಿನ ತಲಾವಾರು ನಿಜವೆಚ್ಚವು(ಬೆಲೆ ಸೂಚ್ಯಂಕಗಳನ್ನು ಆಧರಿಸಿದ್ದು) ವಾಸ್ತವಿಕವಾಗಿ ಇಳಿಮುಖವಾಗುತ್ತಿದೆ. ಒಂದೆಡೆ, ಉನ್ನತ ಜಿಡಿಪಿ ಬೆಳವಣಿಗೆಯನ್ನು ದಾಖಲಿಸುವ ದೇಶದಲ್ಲಿ, ಇನ್ನೊಂದೆಡೆಯಲ್ಲಿ, ಮೊದಲೇ ಅಸಮರ್ಪಕವಾಗಿದ್ದ ಆಹಾರದ ಮೇಲಿನ ತಲಾ ವೆಚ್ಚದಲ್ಲಿ ಮತ್ತಷ್ಟು ಕುಸಿತವನ್ನು ಕಾಣುತ್ತಿರುವುದು ಬಹಳ ವಿಚಿತ್ರವೇ ಸರಿ. ಮತ್ತು ಈ ಅಭೂತಪೂರ್ವ ಪ್ರವೃತ್ತಿಯು ಆದಾಯದ ಅಸಮಾನತೆಯ ತೀವ್ರ ಹೆಚ್ಚಳಕ್ಕೆ ಅನುಗುಣವಾಗಿಯೇ ಇದೆಯಷ್ಟೇ ಅಲ್ಲ, ನಮ್ಮ ಜನಗಳಲ್ಲಿ ಪೌಷ್ಠಿಕ ಬಡತನಕ್ಕೂ ಅನುಗುಣವಾಗಿದೆ ಎನ್ನಬಹುದು.

ಕೆಲವು ಅರ್ಥಶಾಸ್ತ್ರಜ್ಞರು ದೀರ್ಘಕಾಲದಿಂದ ಹೀಗೆ ಪೌಷ್ಟಿಕಾಂಶ ಸೇವನೆ ಕ್ಷೀಣಿಸುತ್ತಿರುವ ಬಗ್ಗೆ ಬಗೆ–ಬಗೆಯ ತಪ್ಪು ತರ್ಕಗಳನ್ನು ನೀಡುತ್ತಿದ್ದಾರೆ– ಯಾಂತ್ರೀಕರಣದಿಂದಾಗಿ ನಮಗೆ ಶಕ್ತಿಯ ಅಗತ್ಯ ಕಡಿಮೆಯಾಗಿದೆ, ವಯೋ ರಚನೆಯಲ್ಲಿ ಬದಲಾವಣೆಗಳು, ಜನರ ಅಭಿರುಚಿಗಳಲ್ಲಿ ಬದಲಾವಣೆಗಳು ಇತ್ಯಾದಿ. ಇವೆಲ್ಲ ಶುದ್ಧ ನೆವಗಳಲ್ಲದೆ ಬೇರೇನೂ ಅಲ್ಲ ಎಂಬುದು ಜಗತ್ತಿನ ಹೆಚ್ಚು ಜನಸಂಖ್ಯೆಯ ಪ್ರದೇಶಗಳನ್ನು, ನಮ್ಮಂತದೇ ವಯೋ ರಚನೆಯನ್ನು ಮತ್ತು ನಮಗಿಂತಲೂ ಹೆಚ್ಚಿನ ಮಟ್ಟದ ಯಾಂತ್ರೀಕರಣ ಕಂಡಿರುವ ದೇಶಗಳೊಂದಿಗೆ ಹೋಲಿಸಿದಾಗ ಮನವರಿಕೆಯಾಗುತ್ತದೆ. ಅಲ್ಲಿಯ ಜನಗಳು ನಮ್ಮ ಜನಗಳಿಗಿಂತ ಹೆಚ್ಚು ಅಹಾರ ಸೇವಿಸುತ್ತಾರೆ ಮತ್ತು ಅವರ ಪೋಷಕಾಂಶಗಳ ಮಟ್ಟ ಬಹಳ ಹೆಚ್ಚಿದೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ) 2019ರಲ್ಲಿ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ (ಇವು ಇಲ್ಲಿಯವರೆಗೆ ಲಭ್ಯವಿರುವ ಇತ್ತೀಚಿನ ಅಂಕಿಅಂಶಗಳು), ಭಾರತದಲ್ಲಿ ತಲಾವಾರು ಆಹಾರ ಧಾನ್ಯಗಳ ಬಳಕೆ(ಆಹಾರವಾಗಿ ಮತ್ತು ಪಶು ಮೇವುಗಳಾಗಿ ಒಟ್ಟಾಗಿ) ಅತ್ಯಂತ ಕೆಳಗೆ 171 ಕೆ.ಜಿ., ಆಫ್ರಿಕಾ ದಲ್ಲಿ 190 ಕೆ.ಜಿ., ಕಡಿಮೆ ಅಭಿವೃದ್ಧಿಯ ರಾಷ್ಟ್ರಗಳಲ್ಲಿ 205 ಕೆ.ಜಿ., ವಿಶ್ವದ ಸರಾಸರಿ 304 ಕೆ.ಜಿ., ಚೀನಾ ಮತ್ತು ಬ್ರೆಜಿಲ್‌ನಲ್ಲಿ 360 ಕೆಜಿ ಮತ್ತು ರಷ್ಯಾದಲ್ಲಿ 407 ಕೆ.ಜಿ. ಅಭಿವೃದ್ಧಿ ಹೊಂದಿದ ಕೈಗಾರಿಕೀಕರಣಗೊಂಡ ದೇಶಗಳಲ್ಲಿ ಇದು 494 ಕೆ.ಜಿ. ಯುರೋಪಿಯನ್ ಒಕ್ಕೂಟದ ದೇಶಗಳಲ್ಲಿ, ಮತ್ತು ಅಮೆರಿಕದಲ್ಲಿ 590 ಕೆಜಿ. ಇಲ್ಲಿ ಒಂದು ವಿಷಯ ನೆನಪಿಡಬೇಕು. ಎಫ್‌ಎಒ ತಾನಾಗಿಯೇ ಈ ದತ್ತಾಂಶಗಳನ್ನು ಸಂಗ್ರಹಿಸುವುದಿಲ್ಲ, ಆಯಾಯ ದೇಶಗಳ ಸರಕಾರಗಳು ಒದಗಿಸಿದ ಮಾಹಿತಿಗಳನ್ನೇ ಬಳಸಿ ಲೆಕ್ಕ ಹಾಕುತ್ತದೆ. ಆದ್ದರಿಂದ, ವಿಶ್ವ ಹಸಿವಿನ ಸೂಚ್ಯಂಕದಲ್ಲಿ ಭಾರತವು ಸುಮಾರಾಗಿ ತಳದಲ್ಲೇ, 121 ದೇಶಗಳಲ್ಲಿ 107 ನೇ ಸ್ಥಾನದಲ್ಲಿದೆ ಎಂಬುದರಲ್ಲಿ ಆಶ್ಚರ್ಯವೇನಿಲ್ಲ.

ಕಳೆದ ವರ್ಷ ಸ್ವಲ್ಪ ಸಮಯದ ವರೆಗೆ 'ಕುಟುಂಬಗಳ ಬಳಕೆ ವೆಚ್ಚದ ಪ್ರಮುಖ ಸೂಚ್ಯಂಕಗಳು, 2017–18' ಎಂಬ ರಾಷ್ಟ್ರೀಯ ಮಾದರಿ ಸಮೀಕ್ಷೆ(ಎನ್‌ಎಸ್‌ಎಸ್) ವರದಿ ಸಾರ್ವಜನಿಕವಾಗಿ ಆನ್ ಲೈನಿನಲ್ಲಿ ಲಭ್ಯವಾಗಿತ್ತು. ಅದು 2011 ಕ್ಕೆ ಹೋಲಿಸಿದರೆ 2017–18 ರಲ್ಲಿ ಎಲ್ಲ ಸರಕು ಮತ್ತು ಸೇವೆಗಳ ಮೇಲಿನ ಜನರ ತಲಾ ನಿಜವೆಚ್ಚವು ಮೊತ್ತಮೊದಲ ಬಾರಿಗೆ ಇಳಿದುದನ್ನು ತೋರಿಸಿತು. ಹಿಂದಿನ ದಶಕಗಳಲ್ಲಿ ಆಹಾರದ ಮೇಲಿನ ನಿಜ ವೆಚ್ಚದಲ್ಲಿನ ಇಳಿಕೆಯಾಗುತ್ತ ಬರುತ್ತಿರುವುದು ಗಮನಕ್ಕೆ ಬಂದಿತ್ತು. ಈಗ ಇದರ ಜೊತೆಗೆ, ಎಲ್ಲಾ ರೀತಿಯ ವೆಚ್ಚಗಳಲ್ಲಿ ಇಳಿಕೆಯೂ ಸೇರಿಕೊಂಡಂತಾಗಿದೆ. ಈ ವರದಿಯನ್ನು ಸರಕಾರ ಬೇಗನೇ ಪೋರ್ಟಲ್‌ನಿಂದ ತೆಗೆದುಹಾಕಿತು. ಇದು ಒಂದು ಅತ್ಯಂತ ಪ್ರಮುಖ ಮಾಹಿತಿಯನ್ನು ಸಾರ್ವಜನಿಕರಿಗೆ ನಿರಾಕರಿಸುವ ಒಂದು ಅಭೂತಪೂರ್ವ ಕ್ರಮವಾಗಿತ್ತು.

ಇದೀಗ ತೀರಾ ಇತ್ತೀಚೆಗೆ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿರುವ ಮುಂಬೈನ ಇಂಟರ್‌ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಪಾಪ್ಯುಲೇಶನ್ ಸೈನ್ಸಸ್(ಅಂತರಾಷ್ಟ್ರೀಯ ಜನಸಂಖ್ಯಾ ವಿಜ್ಞಾನಗಳ ಸಂಸ್ಥೆ)ಯ ನಿರ್ದೇಶಕರನ್ನು ಕೇಂದ್ರ ಸರ್ಕಾರ ಅಮಾನತುಗೊಳಿಸಿರುವ ಒಂದು ವಿಲಕ್ಷಣ ಬೆಳವಣಿಗೆಯ ಹಿನ್ನೆಲೆ. ನಿರ್ದಿಷ್ಟ ಅವಧಿಗಳಲ್ಲಿ



ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ಇದಕ್ಕೆ ವಹಿಸಲಾಗಿದೆ. 2019–21 ಕ್ಕೆ ಸಂಬಂಧಿಸಿದ 5ನೇ ಸಮೀಕ್ಷಾ ವರದಿ 2015–16ರ 4 ನೇ ಸಮೀಕ್ಷೆಗೆ ಹೋಲಿಸಿದರೆ ಮಕ್ಕಳು ಮತ್ತು ಮಹಿಳೆಯರ ಕೆಲವು ಆರೋಗ್ಯ ಸೂಚಕಗಳು ಗಣನೀಯವಾಗಿ ಕುಸಿದಿರುವುದನ್ನು ತೋರಿಸಿತು. ಇದರಲ್ಲಿನ ಸಂದೇಶಕ್ಕೆ ಗಮನ ನೀಡುವ ಬದಲು ಸರ್ಕಾರ ಈ ಸಂದೇಶ ನೀಡಿದವರನ್ನೇ ಶಿಕ್ಷಿಸುವ ತರ್ಕಬಾಹಿರ ನಿರ್ಧಾರವನ್ನು ಕೈಗೊಂಡಿತು. ಈ ಸಂಸ್ಥೆಯ ನಿರ್ದೇಶಕರು ಒಬ್ಬ ಪ್ರಾಮಾಣಿಕ ಅಧ್ಯಯನಕಾರ.

ಎಲ್ಲಾ ಆರೋಗ್ಯ ಸೂಚಕಗಳು ಕೇವಲ ಪೋಷಕಾಂಶಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮೂಲಕ, ರೋಗಕಾರಕ ಸೊಳ್ಳೆಗಳ ಹರಡುವಿಕೆಯನ್ನು ನಿಯಂತ್ರಿಸುವ ಮೂಲಕ, ಕರುಳಿನ ಹುಳುಗಳನ್ನು ತೊಡೆದುಹಾಕಲು ಮತ್ತು ನೈರ್ಮಲ್ಯವನ್ನು ಸುಧಾರಿಸುವ ಮೂಲಕ ಆರೋಗ್ಯ ಪರಿಸ್ಥಿತಿಗಳನ್ನು ಸುಧಾರಿಸಬಹುದು. ಹೆಚ್ಚಿನ ದೇಶಗಳಂತೆ, ನಮ್ಮ ದೇಶದಲ್ಲಿ ಈ ವಿಷಯಗಳಲ್ಲಿ ನಿಧಾನವಾಗಿಯಾದರೂ ಪ್ರಗತಿಯಾಗಿದೆ. ಆದರೆ, ಇತರ ಆರೋಗ್ಯ ಸೂಚಕಗಳು ಹೆಚ್ಚಾಗಿ ಪೌಷ್ಟಿಕಾಂಶದ ಸೇವನೆಯ ಮೇಲೆ ಅವಲಂಬಿತವಾಗಿದೆ. ಅಂತಹ ಆಹಾರವು ಲಭ್ಯವಿಲ್ಲದಿದ್ದಾಗ, ಆ ಸೂಚಕಗಳು ಹದಗೆಡುತ್ತವೆ.

4ನೇ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆಗೆ ಹೋಲಿಸಿದರೆ 5ನೇ ಸಮೀಕ್ಷೆಯಲ್ಲೂ ತಾಯಿ ಮತ್ತು ಮಕ್ಕಳ ಮರಣ ಪ್ರಮಾಣ ಇಳಿಕೆಯಾಗಿದೆ (ಕಳೆದ ಬಾರಿಗಿಂತ ಸ್ವಲ್ಪ ಕಡಿಮೆಯಾಗಿದೆ). ಅದೇ ಸಮಯದಲ್ಲಿ, ಮಕ್ಕಳು ಮತ್ತು ವಯಸ್ಕರಲ್ಲಿಯೂ ರಕ್ತಹೀನತೆ ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ವರದಿ ಬಹಿರಂಗಪಡಿಸಿದೆ. ಈ ರಕ್ತಹೀನತೆ ಈಗಾಗಲೇ ತುಂಬಾ ಹೆಚ್ಚಾಗಿದೆ. ಈಗ ಅದು ಇನ್ನೂ ಹೆಚ್ಚಿದೆ. 6 ತಿಂಗಳಿಂದ 5 ವರ್ಷ ವಯಸ್ಸಿನ ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣವು 2015–16 ರಲ್ಲಿ ಶೇ. 59 ರಿಂದ 2019–21 ರಲ್ಲಿ ಶೇ. 67 ಕ್ಕೆ ಏರಿದೆ. ಅವರಲ್ಲಿ ತೀವ್ರ ರಕ್ತಹೀನತೆ ಇರುವವರ ಸಂಖ್ಯೆ ಶೇ.30.6ರಿಂದ ಶೇ.38.1ಕ್ಕೆ ಏರಿಕೆಯಾಗಿದ್ದು, ಅತ್ಯಂತ ಆತಂಕಕಾರಿಯಾಗಿದೆ.

ವಯಸ್ಕರಲ್ಲಿ, ವಿಶೇಷವಾಗಿ ಮಹಿಳೆಯರಲ್ಲಿ, ಅದೇ ಅವಧಿಯಲ್ಲಿ ರಕ್ತಹೀನತೆಯು ಶೇ.53 ರಿಂದ ಶೇ. 57 ಕ್ಕೆ ಏರಿತು. ತೀವ್ರ ರಕ್ತಹೀನತೆ ಹೊಂದಿರುವವರು ಶೇ. 28.4 ರಿಂದ 31.4 ಶೇ.ಕ್ಕೆ ಏರಿದರು. ಅದೇ ಪುರುಷರಲ್ಲಿ (49 ವರ್ಷದೊಳಗಿನವರು), ತೀವ್ರ ರಕ್ತಹೀನತೆ ಹೊಂದಿರುವವರು ಶೇ. 23 ರಿಂದ ಶೇ. 25 ಕ್ಕೆ ಏರಿದರು. ಗ್ರಾಮೀಣ ಭಾಗದಲ್ಲಿ ರಕ್ತಹೀನತೆ ಹೆಚ್ಚು. ಇವುಗಳನ್ನು ಸರಿಪಡಿಸಲು ಕ್ರಮಕೈಗೊಳ್ಳುವ ಬದಲು ಸರ್ಕಾರ ಈ ಸತ್ಯಗಳನ್ನೇ ಗುರುತಿಸಲು ನಿರಾಕರಿಸುತ್ತಿದೆ.

ಮಗುವಿನ ಪೌಷ್ಟಿಕತೆಯ ಸೂಚಕಗಳು ನಿರೀಕ್ಷೆಗಿಂತ ಕೆಟ್ಟದಾಗಿದೆ. 2015–16ರಲ್ಲಿ 5 ವರ್ಷದೊಳಗಿನ ಶೇ.36ರಷ್ಟು ಮಕ್ಕಳು ಕಡಿಮೆ ತೂಕ ಹೊಂದಿದ್ದರು. ಶೇ.38 ಪುಟ 14 ಕ್ಕೆ

'ಜನೌಷಧಿ ಯೋಜನೆ' ಕುಂಟುತ್ತಾ ಸಾಗುತ್ತಿದೆ...... ಪುಟ 11 ರಿಂದ

ನಾಗರೀಕರಿಗೆ ಲಾಭ ಎಂದು ಹೇಳಲಾಗುತ್ತದೆ. ಉದಾ: ಯಾವುದೋ ಒಂದು ಬ್ರಾಂಡೆಡ್ ಔಷಧಿ ಬೆಲೆ 100 ರೂ. ಎಂದಿಟ್ಟುಕೊಳ್ಳೋಣ. ಜೆನೆರಿಕ್ ಔಷಧಿಯಲ್ಲಿ ಇದೇ ಔಷಧಿ 40 ರೂ.ಗೆ ಸಿಗುತ್ತದೆ ಎಂದಿಟ್ಟುಕೊಳ್ಳೋಣ. ಇದರ ವ್ಯತ್ಯಾಸ ಶೇ. 60. ಅಂದರೆ, ಔಷಧಿ ಖರೀದಿಸಿದ ನಾಗರೀಕರಿಗೆ 60 ರೂ. ಲಾಭ. ಈ ಲೆಕ್ಕದಲ್ಲಿ ನಾಗರೀಕರಿಗೆ ಸಾವಿರಾರು ಕೋಟಿ ಉಳಿತಾಯವಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದೆ. ಇದರಿಂದ ಔಷಧಿ ಕಂಪನಿಗಳಿಗಾಗಲೀ, ಸರ್ಕಾರಕ್ಕಾಗಲೀ (ಜೆನೆರಿಕ್ ಔಷಧಿಗಳ ಮೇಲೆ ಅಲ್ಪ ಪ್ರಮಾಣದ ತೆರಿಗೆ ವಿನಾಯಿತಿ ಹೊರತುಪಡಿಸಿ) ಯಾವುದೇ ನಷ್ಟವಿಲ್ಲ ಎಂಬುದನ್ನು ಗಮನಿಸಬೇಕು. ಜೆನೆರಿಕ್ ಔಷಧಿ ಮಾರಾಟ ಹೆಚ್ಚಾಗಿದೆ ಮತ್ತು ಔಷಧಿ ಕಂಪನಿಗಳ ಉತ್ಪನ್ನಗಳ ಮಾರಾಟ ಮತ್ತು ಲಾಭ ಹೆಚ್ಚಾಗಿದೆ.

ಜೆನೆರಿಕ್ ಔಷಧದ ಬೆಲೆ ಕಡಿಮೆ ಏಕೆ?

ಜೆನೆರಿಕ್ ನಾಮಕರಣವು ಔಷಧದ ರಾಸಾಯನಿಕ ಹೆಸರು. ಔಷಧೀಯ ಕಂಪನಿಗಳು ಔಷಧಿಗಳಿಗೆ ಅದರ ಡೋಸೇಜ್ ರೂಪ, ಸಾಂದ್ರತೆ ಮತ್ತು ಪೇಟೆಂಟ್ ಅಂತಹ ಸೂತ್ರೀಕರಣಗಳಿಗೆ ಬ್ರಾಂಡ್ ಹೆಸರನ್ನು ನೀಡುತ್ತವೆ. ಕಂಪನಿಗಳು ತಮ್ಮ ಬ್ರ್ಯಾಂಡ್‌ಗಳನ್ನು ಜನಪ್ರಿಯಗೊಳಿಸಲು ಜಾಹೀರಾತು ನೀಡುತ್ತವೆ, ಸ್ವಂತ ಬ್ರಾಂಡ್ ಔಷಧದ ಮಾರಾಟವನ್ನು ಹೆಚ್ಚಿಸಲು ಪ್ರಿಸ್ಕ್ರಿಪ್ಷನ್ ನಡವಳಿಕೆಯ ಮೇಲೆ ಪ್ರಭಾವ ಬೀರುತ್ತವೆ ಮತ್ತು ಬ್ರ್ಯಾಂಡ್ ಸ್ಥಾಪನೆಯಾದ ನಂತರ, ತಮ್ಮ ಬ್ರಾಂಡ್ ಔಷಧಿಗಳಿಗೆ ವಿಪರೀತ ಬೆಲೆ ನಿಗಧಿಪಡಿಸುವ ಮೂಲಕ ಹಣವನ್ನು ಗಳಿಸುತ್ತವೆ. ಬ್ರಾಂಡೆಡ್ ಆವೃತ್ತಿಗೆ ಹೋಲಿಸಿದರೆ, ಅದರ ಜೆನೆರಿಕ್ ಆವೃತ್ತಿಯು ಕಡಿಮೆ ಬೆಲೆಯಲ್ಲಿ ಲಭ್ಯವಿದೆ. ಃಕಖಗ ಫಾರ್ಮಾ ಅಕಖಗ ಗಳು ಮತ್ತು ಖಾಸಗಿ ವಲಯದಿಂದ ಔಷಧಿಗಳ ಸೋರ್ಸಿಂಗ್ ಮೂಲಕ ಜನ್ ಔಷಧಿ ಯೋಜನೆಯಲ್ಲಿ ಜೆನೆರಿಕ್ ಔಷಧಿಗಳ ಮಾರಾಟದ ಮೇಲೆ ಕೇಂದ್ರೀಕರಿಸುತ್ತದೆ. ಜೆನೆರಿಕ್ ಔಷಧಿಗಳು ಮಾರುಕಟ್ಟೆಯಲ್ಲಿ ಲಭ್ಯವಾದಾಗ, ಇತರ ಬ್ರಾಂಡ್ ಹೆಸರುಗಳ ಅಡಿಯಲ್ಲಿ ಅದೇ ಔಷಧಿಗಳ ಬೆಲೆಯು ಸ್ಪರ್ಧಿಸಲು ಗಣನೀಯವಾಗಿ ಇಳಿಯುತ್ತದೆ. ಭಾರತದಲ್ಲಿ, ಬ್ರಾಂಡೆಡ್ ಔಷಧಿಗಳ ಪೇಟೆಂಟ್ ಅವಧಿ ಮುಗಿದ ನಂತರ ಜೆನೆರಿಕ್ ಔಷಧಿಗಳನ್ನು ಕಾನೂನುಬದ್ಧವಾಗಿ ಉತ್ಪಾದಿಸಬಹುದು.

ಜೆನೆರಿಕ್ ಔಷಧಿಗಳ ರಫ್ತಿನಲ್ಲಿ ಭಾರತ ಪ್ರಮುಖ ರಾಷ್ಟ್ರ

2019–20 (ಏಪ್ರಿಲ್–ಮಾರ್ಚ್) ವರ್ಷದಲ್ಲಿ 20.0 ಶತಕೋಟಿ ಅಮೆರಿಕನ್ ಡಾಲರ್ ಮೌಲ್ಯದ ಔಷಧಗಳನ್ನು ರಫ್ತು ಮಾಡುವ ಮೂಲಕ ವಿಶ್ವದ ಜೆನೆರಿಕ್ ಔಷಧಿಗಳ ಮಾರುಕಟ್ಟೆಯಲ್ಲಿ ಭಾರತವು ಪ್ರಮುಖ ರಾಷ್ಟ್ರವಾಗಿದೆ. ಭಾರತವು ಯುನೈಟೆಡ್ ಸ್ಟೇಟ್ಸ್ ಮತ್ತು ಯುರೋಪ್ ಒಕ್ಕೂಟದ ರಾಷ್ಟ್ರಗಳಿಗೆ ಜೆನೆರಿಕ್ ಔಷಧಿಗಳನ್ನು ರಫ್ತು ಮಾಡುತ್ತದೆ. ಜನೌಷಧಿ ಯೋಜನೆಯಿಂದಾಗಿ ಈ ಔಷಧಿ ಉತ್ಪಾದನಾ ಕಂಪನಿಗಳು ಭಾರತದಲ್ಲೂ ತನ್ನ ಮಾರುಕಟ್ಟೆ ವಿಸ್ತರಿಸಿಕೊಳ್ಳಲು ಅನುಕೂಲವಾಗಿದೆ.

ಔಷಧಿಗಳ ಬೆಲೆಯನ್ನು ನಿಯಂತ್ರಿಸುವ ಸಲುವಾಗಿ ಜನೌಷಧಿ ಕೇಂದ್ರಗಳಲ್ಲಿ ಮಾರಾಟವಾಗುವ ಔಷಧಿಗಳಿಗೆ ಕೇಂದ್ರ ಸರ್ಕಾರ ಶೇ. 4 ಏಕರೂಪದ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಮತ್ತು ಅಬಕಾರಿ ಸುಂಕದಲ್ಲಿ ಶೇ. 8ರಷ್ಟು ಕಡಿತ ಮಾಡಿದೆ.

ರಾಜ್ಯದಲ್ಲೂ ಬೇಕಿದೆ 'ನಗರ ಉದ್ಯೋಗ ಖಾತ್ರಿ ...... ಪುಟ 8 ರಿಂದ

ಭರವಸೆಯೊಂದಿಗೆ ವೇದಾಂತದೊಂದಿಗೆ 'ನವೀಕರಿಸಬಹುದಾದ ಇಂಧನ' ವಲಯದ ಅಡಿಯಲ್ಲಿ 1.29 ಲಕ್ಷ ಕೋಟಿ ಮೌಲ್ಯದ ತಿಳಿವಳಿಕೆ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಈ ಹೂಡಿಕೆಗಳು ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡುವುದಿಲ್ಲ. ಏಕೆಂದರೆ, ಇಂತಹ ಉದ್ಯಮಗಳಿಗೆ ಕಾರ್ಮಿಕರ ಅವಶ್ಯಕತೆ ಅಷ್ಟೇನೂ ಇರುವುದಿಲ್ಲ.

ಕೇರಳದ 'ಅಯ್ಯಂಕಾಳಿ ನಗರ ಉದ್ಯೋಗ ಖಾತ್ರಿ ಯೋಜನೆ'; ದೇಶಕ್ಕೊಂದು ಮಾದರಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತೆ ಕೇರಳ ರಾಜ್ಯದ ಎಡರಂಗ ಸರ್ಕಾರವು 'ಅಯ್ಯಂಕಾಳಿ ನಗರ ಉದ್ಯೋಗ ಖಾತ್ರಿ ಯೋಜನೆ'ಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಯನ್ನು ನಗರ ವ್ಯವಹಾರಗಳ ನಿರ್ದೇಶನಾಲಯ ಕೇರಳ ವಿಭಾಗವು ಜಾರಿಗೊಳಿಸಿದೆ. ವರ್ಷದಲ್ಲಿ ಸಾಕಷ್ಟು ಕೆಲಸ ಇಲ್ಲದಿದ್ದಾಗ ಕುಟುಂಬಕ್ಕೆ 100 ದಿನ ಕೆಲಸ ನೀಡುವ ಮೂಲಕ ಬಡವರಿಗೆ ಆಸರೆಯಾಗುವುದು ಈ ಯೋಜನೆಯ ಉದ್ದೇಶವಾಗಿದೆ. ಪಾಲಿಕೆ ಮತ್ತು ಪುರಸಭೆಗಳಲ್ಲಿ ಹೆಸರು ನೋಂದಾಯಿಸಿದ 15 ದಿನಗಳೊಳಗೆ ಜಾಬ್ ಕಾರ್ಡ್ ನೀಡಲಾಗುವುದು ಮತ್ತು ಕೆಲಸಕ್ಕೆ ಅರ್ಜಿ ಸಲ್ಲಿಸಿದ 15 ದಿನಗಳಲ್ಲಿ ಕೆಲಸ ನೀಡಲಾಗುವುದು. 5 ಕಿ.ಮೀ ವ್ಯಾಪ್ತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗದಿದ್ದಲ್ಲಿ ಕೂಲಿ ದರದ ಶೇ.10ರಷ್ಟು ಹೆಚ್ಚುವರಿಯಾಗಿ ನೀಡಲಾಗುತ್ತದೆ. ಈ ಯೋಜನೆಯ ಫಲಾನುಭವಿಗಳಲ್ಲಿ ಶೇ. 50 ರಷ್ಟು ಮಹಿಳೆಯರು.

ಕೇರಳದ ಮಾದರಿಯಲ್ಲಿ ವಿವಿಧ ರಾಜ್ಯ ಸರ್ಕಾರಗಳು ನಗರ ಉದ್ಯೋಗ ಯೋಜನೆಗಳನ್ನು ಜಾರಿಗೆ ತರುತ್ತಿವೆ. ಮಧ್ಯಪ್ರದೇಶದಲ್ಲಿ 'ಮುಖ್ಯಮಂತ್ರಿ ಯುವ ಸ್ವಾಭಿಮಾನ್ ಯೋಜನೆ', ಒಡಿಶಾದಲ್ಲಿ 'ಉನ್ನತಿ ನಗರ ವೇತನ ಉದ್ಯೋಗ', ಜಾರ್ಖಂಡ್‌ನಲ್ಲಿ 'ಮುಖ್ಯಮಂತ್ರಿ ಶ್ರಮಿಕ ಯೋಜನೆ', ಹಿಮಾಚಲ ಪ್ರದೇಶದಲ್ಲಿ 'ಮುಖ್ಯಮಂತ್ರಿ ಸಹಾರಿ ಆಜೀವಿಕಾ ಗ್ಯಾರಂಟಿ ಯೋಜನೆ', ತಮಿಳುನಾಡಿನಲ್ಲಿ ಎಸ್. ಅರ್ಬನ್ ಎಂಪ್ಲಾಯ್ಮೆಂಟ್.

ಮತ್ತೊಂದೆಡೆ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಂಬಲ ಬೆಲೆ ಸಿಗದ ಕಾರಣ, ಕೃಷಿ ಲಾಭದಾಯಕವಲ್ಲ ಎಂಬಂತಾಗಿದೆ. ರೈತರು ನಿರಂತರವಾಗಿ ನಷ್ಟ ಅನುಭವಿಸುವಂತಾಗಿದೆ. ಕೃಷಿ ಕ್ಷೇತ್ರವನ್ನು ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸುವ ಗುರಿಯೊಂದಿಗೆ ಸರ್ಕಾರ ರೈತರನ್ನು ಕಡೆಗಣಿಸುತ್ತಿದೆ. ಇದು ರೈತರನ್ನು ಬಲವಂತವಾಗಿ ಕೃಷಿಯಿಂದ ಹೊರಗಟ್ಟುತ್ತಿದೆ. ಕ್ರಮೇಣ ಕೃಷಿ ಮಾಡುವ ಪ್ರದೇಶ ಕಡಿಮೆಯಾಗುತ್ತದೆ. ಈ ವರ್ಷ ಸಕಾಲಕ್ಕೆ ಮಳೆಯಾಗದ ಕಾರಣ ಹಲವು ಜಿಲ್ಲೆಗಳಲ್ಲಿ ಬೆಳೆ ಉತ್ಪಾದನೆ ಗಣನೀಯವಾಗಿ ಕುಸಿದಿದೆ. ಇದರಿಂದ ನಗರಗಳಿಗೆ ವಲಸೆ ಹೆಚ್ಚಾಗಲಿದೆ. ಇಂತಹ ಸಂದರ್ಭಗಳಲ್ಲಿ ನಗರ ಪ್ರದೇಶದ ಬಡವರಿಗೆ ಉದ್ಯೋಗ ಕಲ್ಪಿಸಲು ಸರ್ಕಾರ ಮೊದಲ ಆದ್ಯತೆ ನೀಡಬೇಕು. ದೇಶಾದ್ಯಂತ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಲು ಕೇಂದ್ರದ ಜತೆ ಹೋರಾಟ ನಡೆಸಬೇಕು. ನಗರ ಉದ್ಯೋಗ ಖಾತ್ರಿ ಯೋಜನೆ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ರಾಜ್ಯದ ಸಂಸದರು ಪ್ರಾಮಾಣಿಕವಾಗಿ ಶ್ರಮಿಸಬೇಕು. ಇತರೆ ರಾಜ್ಯಗಳಂತೆ ನಮ್ಮ ರಾಜ್ಯದಲ್ಲೂ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತರಬೇಕು. ಹಣ ವರ್ಗಾವಣೆ ಯೋಜನೆಗಳನ್ನು ಜಾರಿಗೆ ತಂದರಷ್ಟೇ ಸಾಕಾಗುವುದಿಲ್ಲ. ಜನರಿಗೆ ಉದ್ಯೋಗ ನೀಡಿ ಅವರು ಹೆಮ್ಮೆಯಿಂದ ಬದುಕುವಂತೆ ನೋಡಿಕೊಳ್ಳಬೇಕು.

ಅಂಕಿ–ಅಂಶಗಳನ್ನೇ ಬುಡಮೇಲು ಮಾಡುವ ರಾಜಕೀಯ...... ಪುಟ 13 ರಿಂದ

ರಷ್ಟು ಮಕ್ಕಳು ತಮ್ಮ ವಯಸ್ಸಿಗೆ ತಕ್ಕ ಎತ್ತರವನ್ನು ಹೊಂದಿರಲಿಲ್ಲ. 2019–20 ರ ಹೊತ್ತಿಗೆ, ಕಡಿಮೆ ತೂಕದ ಶೇಕಡಾವಾರು ಪ್ರಮಾಣವು 32 ಕ್ಕೆ ಸ್ವಲ್ಪ ಕಡಿಮೆಯಾಗಿದೆ ಮತ್ತು ಕಡಿಮೆ ಎತ್ತರದವರ ಶೇಕಡಾವಾರು 36 ಕ್ಕೆ ಇಳಿದಿದೆ. ಎತ್ತರಕ್ಕೆ ತಕ್ಕ ಕಡಿಮೆ ತೂಕ ಇಲ್ಲದವರ ಶೇಕಡಾವಾರು ಪ್ರಮಾಣವು 21 ರಿಂದ 19 ಕ್ಕೆ ಕಡಿಮೆಯಾಗಿದೆ. ಐದು ವರ್ಷಗಳ ಹಿಂದೆ ಈ ಸೂಚಕಗಳು ಐದು ರಾಜ್ಯಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಕೆಟ್ಟದಾಗಿದ್ದವು.ಈ ಅವಧಿಯಲ್ಲಿ ಆ ಐದು ರಾಜ್ಯಗಳಲ್ಲಿ ಸ್ವಲ್ಪ ಸುಧಾರಣೆಯಾಗಿದೆ ಮತ್ತು ರಾಷ್ಟ್ರಮಟ್ಟದಲ್ಲೂ ಸುಧಾರಣೆಯಾಗಿದೆ. ಹೆಚ್ಚಿನ ರಾಜ್ಯಗಳಲ್ಲಿ ಮತ್ತಷ್ಟು ಸರಿಪಡಿಸುವ ಕ್ರಮದ ಅಗತ್ಯವಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರ ಹೊಸ ಸೂಚ್ಯಂಕ ಬಿಡುಗಡೆ ಮಾಡಿ, ಅದನ್ನು ಆಧರಿಸಿ, ದೇಶದಲ್ಲಿ ಬಡತನ ಗಣನೀಯವಾಗಿ ಕಡಿಮೆಯಾಗಿದೆ ಎಂದು ಹೇಳಿಕೊಂಡಿದೆ. ಆದರೆ ಕಳೆದ 70 ವರ್ಷಗಳಿಂದ ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬಡತನ ಅಂದರೆ ಏನು ಎಂದು ಅರ್ಥಮಾಡಕೊಳ್ಳಲಾಗುತ್ತಿದೆಯೋ ಅದಕ್ಕೂ ಮತ್ತು ಈ ಹೊಸ ಸೂಚ್ಯಂಕಕ್ಕೂ ಏನೇನೂ ಸಂಬಂಧವಿಲ್ಲ. ಈ ಹೊಸ ಸೂಚ್ಯಂಕ ನೀರು, ವಿದ್ಯುತ್ ಸಂಪರ್ಕ, ಶೀಟ್ ಮನೆ ಅಥವಾ ಸ್ಲ್ಯಾಬ್ ಮನೆ, ಬ್ಯಾಂಕ್ ಖಾತೆ (ಶೂನ್ಯ ಬ್ಯಾಲೆನ್ಸ್ ಇದ್ದರೂ) ಮುಂತಾದ ಆಧುನಿಕ ಸೌಕರ್ಯಗಳ ಲಭ್ಯತೆಯ ಒಂದು ಸರಾಸರಿ. ಇದರಲ್ಲಿ 'ಪೌಷ್ಟಿಕತೆ'ಗೆ ಕೇವಲ ಆರನೇ ಒಂದರಷ್ಟು ತೂಕ. ಸಾಕಷು 'ಪೌಷ್ಟಿಕತೆ' ಎಂಬುದನ್ನೂ 'ದೇಹ ದ್ರವ್ಯರಾಶಿ ಸೂಚ್ಯಂಕ' (ಬಾಡಿ ಮಾಸ್ ಇಂಡೆಕ್ಸ್–ಬಿಎಂಐ) ದ ಆಧಾರದಲ್ಲಿ ಪರಿಗಣಿಸಲಾಗಿದೆ ಅಂದರೆ ಒಬ್ಬ ವ್ಯಕ್ತಿಯ ದೇಹದ ತೂಕ ಮತ್ತು ಎತ್ತರದ ಮೂಲಕ ಮೂಲಕ ಅಳೆಯಲಾಗುತ್ತದೆ. ಇದು 18.8ರ ಕೆಳಗೆ ಇರಬಾರದು ಅಷ್ಟೇ. ಈ ಬಡತನ ಸೂಚ್ಯಂಕದ ಪ್ರಕಾರ ಕೈಗಾರೀಕರಣದಲ್ಲಿ ಮುಂದುವರೆದಿರುವ ಬಂಡವಾಳಶಾಹೀ ಸಮಾಜಗಳಲ್ಲಿ ಬಡತನವೇ ಇಲ್ಲ!

ಭಾರತದಲ್ಲಿ ಗ್ರಾಮೀಣ ಪ್ರದೇಶಗಳಲ್ಲಾಗಲೀ, ನಗರಪ್ರದೇಶಗಳಲ್ಲಾಗಲೀ ಪೌಷ್ಟಿಕತೆಯಿಂದ ವಂಚಿತರಾದವರ ಪ್ರಮಾಣ ಗಮನಾರ್ಹವಾಗಿದೆ. ನಮ್ಮ ದೇಶದಲ್ಲಿ ಆರೋಗ್ಯವಂತರಲ್ಲಿ ವಯಸ್ಸಿಗನುಗುಣವಾಗಿ ಇರಬೇಕಾದ ತೂಕ ಮತ್ತು ಎತ್ತರ ಇಲ್ಲದವರ ಪ್ರಮಾಣವೂ ಗಮನಾರ್ಹವಾಗಿದೆ. ಆದ್ದರಿಂದ ಒಂದು ಅನುಪಾತವಾಗಿರುವ 'ಬಾಡಿ ಮಾಸ್ ಇಂಡೆಕ್ಸ್' ಎಂಬುದನ್ನು ಸಂದೇಹದ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ನಮ್ಮಲ್ಲಿ ಹೆಚ್ಚಿನ ಜನರ ಎತ್ತರವೂ ಕಡಿಮೆ, ಮತ್ತು ದೇಹದ ತೂಕವೂ ಕಡಿಮೆ. ಎರಡೂ ಕಡಿಮೆ ಇರುವುದರಿಂದ ಇವೆರಡರ ಅನುಪಾತವನ್ನು ಆಧರಿಸಿರುವ ಸೂಚಕವು ಕೋಟಿಗಟ್ಟಲೆ ಅಪೌಷ್ಟಿಕತೆಯಿಂದ ನರಳುವ ಜನರ ಅಪೌಷ್ಟಿಕತೆಯ ಮಟ್ಟವನ್ನು ಬಿಂಬಿಸಲಾರದು.

ಇದೀಗ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು ಪೌಷ್ಟಿಕಾಂಶಕ್ಕೆ ಸಂಬಂಧಿಸಿದಂತೆ ಪರಿಗಣಿಸಬೇಕಾದ ಅಂಶಗಳನ್ನು ತಗ್ಗಿಸುವ ವಿಧಿ–ವಿಧಾನಗಳನ್ನೂ ರೂಪೀಕರಿಸುತ್ತಿದೆ ಎಂದು ವರದಿಯಾಗಿದೆ. ರಾಜಕೀಯ ಶಕ್ತಿಯ ತಪ್ಪು ಬಳಕೆಯಿಂದ ಅಂಕಿ–ಅಂಶಗಳ ಋಜುತ್ವವನ್ನು ಎಷ್ಟರ ಮಟ್ಟಿಗೆ ಬುಡಮೇಲು ಮಾಡಲಾಗುತ್ತಿದೆ ಎಂಬುದು ಅತ್ಯಂತ ಕಳವಳಕಾರಿ ಸಂಗತಿ ಎಂದಷ್ಟೇ ಈ ಬಗ್ಗೆ ಹೇಳಲು ಸಾಧ್ಯ.

ಇಂತಹ ಕಸರತ್ತಿನ ಹೊಸ ಸೂಚ್ಯಂಕಗಳನ್ನು ಅನ್ವಯಿಸಿ ನಮ್ಮ ದೇಶದಲ್ಲೀಗ 'ಶೂನ್ಯ ಬಡತನ' ಎನ್ನುವ ದಾವೆಗಳು ಸದ್ಯದಲ್ಲೇ ಕೇಳಬಂದರೆ ಆಶ್ಚರ್ಯಪಡಬೇಕಾಗಿಲ್ಲ!

ಅನು: ಸಿಚಿ

ನೂಹ್ ಮತ್ತು ಗುರ್‌ಗಾಂವ್‌ಗೆ ಸಿಪಿಐ(ಎಂ) ನಿಯೋಗದ ಭೇಟಿ....... ಪುಟ 12 ರಿಂದ

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಸೋಮವಾರ ತಾನಾಗಿಯೇ ಇದನ್ನು ಪರಿಗಣನೆಗೆ ತಗೊಂಡು ನೆಲಸಮಗೊಳಿಸುವುದನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಆದೇಶಿಸಿರುವುದೇ ನೆಲಸಮಗೊಳಿಸುವ ಕೃತ್ಯದ ಗುರುತ್ವವನ್ನು ತಿಳಿಸುತ್ತದೆ. ನೂಹ್ ಮೂಲಕ ಹಾದುಹೋಗುವ ಯಾರಾದರೂ ರಸ್ತೆಯ ಎರಡೂ ಬದಿಗಳಲ್ಲಿ ವಿನಾಶದ ಜಾಡನ್ನು ಕಾಣದಿರಲು ಸಾಧ್ಯವಿಲ್ಲ. ಅಂಗಡಿಕಾರರು ಮತ್ತು ಇತರ ರಸ್ತೆ ಬದಿಯ ನಿವಾಸಿಗಳ ಹಿಂಸಾಚಾರದಿಂದಾಗಿ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಕೆಡವಲಾಗುತ್ತಿದೆ ಎಂದು ಮ್ಯಾಜಿಸ್ಟ್ರೇಟ್ ಮಾಧ್ಯಮಗಳಿಗೆ ಬಹಿರಂಗವಾಗಿ ಹೇಳುವುದಕ್ಕಿಂತ ಹೆಚ್ಚು ನಾಚಿಕೆಗೇಡಿನ ಸಂಗತಿ ಏನಿದೆ? ತಮಗೆ ರಕ್ಷಣೆಯಿಲ್ಲ ಎಂಬ ಭಾವನೆಯಿಂದ ವಲಸೆ ಕಾರ್ಮಿಕರು ತಮ್ಮ ಮನೆಗಳಿಗೆ ತೆರಳುತ್ತಿದ್ದಾರೆ, ಏಕೆಂದರೆ ಪೊಲೀಸರು ಸುರಕ್ಷತೆಯ ಬಗ್ಗೆ ಅವರ ಆತಂಕಗಳನ್ನು ಪರಿಹರಿಸಲು ವಿಫಲರಾಗಿದ್ದಾರೆ.

ಪಕ್ಷದ ತಂಡವು ಪಟ್ಟಣದ ಗಣ್ಯರನ್ನು ಭೇಟಿ ಮಾಡಿದಾಗ, ಮುಸ್ಲಿಮರಿಗೆ ಸರಿಯಾದ ಪಾಠ ಕಲಿಸಲಾಗಿದೆ ಎಂಬ ನಿಸ್ಸಂದಿಗ್ಧ ಸಂದೇಶವನ್ನು ದೇಶದಾದ್ಯಂತ ರವಾನಿಸಲು ಇನ್ನೂ ಎಷ್ಟೊಂದು ಭಯ ಮತ್ತು ಭೀತಿಯನ್ನು ಸೃಷ್ಟಿಸಲಾಗುತ್ತಿದೆ ಎಂಬುದು ತಿಳಿಯಿತು.

ಯಾವುದೇ ರೀತಿಯ ಕೋಮು ಪ್ರಚೋದನೆಗಳಿಗೆ ಬಲಿಯಾಗದೆ ತಮ್ಮ ಭವ್ಯವಾದ ಇತಿಹಾಸಕ್ಕೆ ತಕ್ಕಂತೆ ತಮ್ಮ ನಡುವೆ ಶಾಂತಿಯನ್ನು ಕಾಪಾಡಿಕೊಂಡಿದ್ದಕ್ಕಾಗಿ ಎರಡೂ ಸಮುದಾಯಗಳ ಜನರನ್ನು ಪಕ್ಷವು ಶ್ಲಾಘಿಸಿದೆ.

ಈಗಾಗಲೇ ಈ ವಿಷಯವನ್ನು ಕೈಗೆತ್ತಿಕೊಂಡಿರುವ ಹೈಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ನ್ಯಾಯಾಂಗ ವಿಚಾರಣೆಯ ಮೂಲಕ ನಿಷ್ಪಕ್ಷಪಾತ ತನಿಖೆಯನ್ನು ಪ್ರಾರಂಭಿಸಬಹುದು ಎಂದು ಪಕ್ಷದ ತಂಡ ಅಭಿಪ್ರಾಯಪಟ್ಟಿದೆ.

ಜನರ ಓಡಾಟದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಬೇಕು ಮತ್ತು ಕಾನೂನುಬದ್ಧವಾಗಿ ಸ್ಥಾಪಿಸಲಾದ ಕಾರ್ಯವಿಧಾನದ ಅಡಿಯಲ್ಲಿ ನಿಜವಾದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವ ಮೂಲಕ ಸಾಮಾನ್ಯ ಸ್ಥಿತಿಯನ್ನು ಮರುಸ್ಥಾಪಿಸಬೇಕು, ಮತ್ತು ಅಮಾಯಕರಿಗೆ ಕಿರುಕುಳ ಕೊಡಬಾರದು ಎಂದು ಪಕ್ಷವು ಒತ್ತಾಯಿಸಿದೆ. ಮೋನು ಮಾನೇಸರ್‌ನಂತಹ ಗುರುತಿಸಲಾದ ವ್ಯಕ್ತಿಗಳನ್ನು ಇದುವರೆಗೆ ಬಂಧಿಸದಿರುವುದು ಆಶ್ಚರ್ಯ ಉಂಟು ಮಾಡುತ್ತದೆ ಎಂದು ಪಕ್ಷವು ಹೇಳಿದೆ.









ಮಣಿಪುರದಲ್ಲಿ ಶಾಂತಿ ಮರಳುತ್ತಿದೆ ಎಂದು ಪ್ರಧಾನಿಗಳಿಗೆ ಹೇಳಿದವರಾರು?

ಎಐಡಿಡಬ್ಲ್ಯುಎ ತಂಡದ ಭೇಟಿಯ ನಂತರ ಬೃಂದಾ ಕಾರಟ್ ಪ್ರಶ್ನೆ



ಮಣಿಪುರದ ಇನ್ನೂ ಕುದಿಯುತ್ತಲೇ ಇದೆ, ಅದಕ್ಕೆ ತುರ್ತಾಗಿ ಗುಣಪಡಿಸುವ ಸ್ಪರ್ಶದ ಅಗತ್ಯವಿದೆ. ಆದರೆ, ಮುಖ್ಯಮಂತ್ರಿ ಬಿರೇನ್ ಸಿಂಗ್ ಅಧಿಕಾರದಲ್ಲಿ ಉಳಿದಿರುವ ವರೆಗೆ ಇದು ಸಾಧ್ಯವಿಲ್ಲ. ಹೀಗೆಂದು ಮೇ 3 ರಿಂದ ಜನಾಂಗೀಯ ಹಿಂಸಾಚಾರವನ್ನು ನೋಡುತ್ತಿರುವ ಈ ಈಶಾನ್ಯ ರಾಜ್ಯಕ್ಕೆ ಭೇಟಿ ನೀಡಿದ ನಂತರ ಹಿಂದಿರುಗಿದ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ನಿಯೋಗ ಖಡಾಖಂಡಿತವಾಗಿ ಹೇಳಿದೆ.

ಎಐಡಿಡಬ್ಲ್ಯುಎ ಪೋಷಕಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಆಗಸ್ಟ್ 16ರಂದು ದಿಲ್ಲಿಯಲ್ಲಿ ಮಾತಾಡುತ್ತ, ದೇಶವು ಮಣಿಪುರದೊಂದಿಗೆ ನಿಲ್ಲುತ್ತದೆ ಎಂದೇನೋ ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಸರಿಯಾಗಿಯೇ ಹೇಳಿದ್ದಾರೆ, ಆದರೆ ಕಹಿ ಸತ್ಯವೆಂದರೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಈಗ ಮಣಿಪುರದೊಂದಿಗೆ ನಿಂತಿಲ್ಲ ಎಂದರು. ಭಾರತದ ಒಂದು ರಾಜ್ಯವು ಭೌಗೋಳಿಕವಾಗಿ ಮತ್ತು ಭಾವನಾತ್ಮಕವಾಗಿ ವಿಭಜಿಸಲ್ಪಟ್ಟಿದೆ ಎಂಬುದನ್ನು ನಂಬಲಾಗದು ಎಂದು ಅವರು ಹೇಳಿದರು.

ಆಗಸ್ಟ್ 9ರಿಂದ 11 ರ ವರೆಗೆ ಮಣಿಪುರಕ್ಕೆ ಭೇಟಿನೀಡಿದ ಎಐಡಿಡಬ್ಲ್ಯುಎ ನಿಯೋಗದಲ್ಲಿ ಬೃಂದಾ ಕಾರಟ್‌ರೊಂದಿಗೆ, ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಮಿಯಂ ಧಾವಳೆ ಮತ್ತು ಅಧ್ಯಕ್ಷೆ ಪಿ.ಕೆ.ಶ್ರೀಮತಿ ಇದ್ದರು.

ರಾಜ್ಯದಲ್ಲಿ ಶಾಂತಿ ಮರಳುತ್ತಿದೆ ಎಂದು ಹೇಳುತ್ತಿರುವ ಪ್ರಧಾನಿ ಮೋದಿಯವರಿಗೆ ಮಣಿಪುರದ ಪರಿಸ್ಥಿತಿಯ ಬಗ್ಗೆ ಯಾರು ಸುದ್ದಿ ಕೊಡುತ್ತಿದ್ದಾರೋ ಗೊತ್ತಿಲ್ಲ. ಇಂಫಾಲ್‌ನಿಂದ ಹೊರಹಾಕಲ್ಪಟ್ಟವರು ಹಿಂತಿರುಗುವವರೆಗೂ ಅಲ್ಲಿ ಶಾಂತಿ ಸಾಧ್ಯವಿರುವುದಿಲ್ಲ. ಬುಡಕಟ್ಟು ಪ್ರದೇಶಗಳಿಂದ ಓಡಿಹೋದ ಜನರು ತಮ್ಮ ಮನೆಗಳಿಗೆ ಹಿಂದಿರುಗುವವರೆಗೆ ಶಾಂತಿ ಸಾಧ್ಯವಿರುವುದಿಲ್ಲ. ಇದು ಯುದ್ಧ ವಲಯವಾಗಿದೆ ಮತ್ತು ಮಣಿಪುರದ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮೋದಿ ಜನರನ್ನು ದಾರಿ ತಪ್ಪಿಸಿದ್ದಾರೆ ಎಂದು ಮುಂದುವರೆದು ಬೃಂದಾ ಕಾರಟ್ ಹೇಳಿದರು.

ಎಲ್ಲೆಡೆ ಆಧಾರ್ ಕಾರ್ಡ್‌ಗಳನ್ನು ಪರಿಶೀಲಿಸಲಾಗುತ್ತಿದೆ ಮತ್ತು ನೀವು ಇತರ ಸಮುದಾಯಕ್ಕೆ ಸೇರಿದವರಾಗಿದ್ದರೆ, ನಿಮ್ಮ ಜೀವವನ್ನು ಕಳೆದುಕೊಳ್ಳುವ ನಿರಂತರ ಅಪಾಯವಿದೆ ಎಂದು ಅವರು ಹೇಳಿದರು.

“ನಾವು ಪರಿಹಾರ ಶಿಬಿರಗಳಲ್ಲಿ ಸಾವಿರಾರು ಮಕ್ಕಳನ್ನು ನೋಡಿದ್ದೇವೆ, ಅವರು ತಮ್ಮ ಪರೀಕ್ಷೆಗೆ ಕುಳಿತುಕೊಳ್ಳಲು ಸಾಧ್ಯವಾಗದ ಕಾರಣ ಇಡೀ ವರ್ಷವನ್ನು ಕಳೆದುಕೊಂಡರು. ಈಗಾಗಲೇ ಶೋಷಣೆಗೆ ಒಳಗಾದ ಸಮುದಾಯಗಳನ್ನು ಈ ಸರ್ಕಾರ ಮತ್ತು ಅದರ ನೀತಿಗಳು ಅಂಚಿಗೆ ತಳ್ಳಿವೆ” ಎಂದು ಅವರು ಹೇಳಿದರು.

ಮಣಿಪುರಕ್ಕೆ ಭೇಟಿ ನೀಡಿದ ಈ ತಂಡದ ಪ್ರಕಾರ, 100 ದಿನಗಳ ನಂತರವೂ ನ್ಯಾಯವನ್ನು ನೀಡದಿರುವುದು ಈಗಲೂ ಜನರ "ಅತಿ ದೊಡ್ಡ ಸಂಕಟ".

"ನ್ಯಾಯ ಪ್ರಕ್ರಿಯೆಯು ಒಂದಿಂಚೂ ಕೂಡ ಚಲಿಸಿಲ್ಲ. ಲೈಂಗಿಕ ದೌರ್ಜನ್ಯದ ಸಂತ್ರಸ್ತರಿಗೆ ನ್ಯಾಯವನ್ನು ಇನ್ನೂ ನಿರಾಕರಿಸಲಾಗಿದೆ. ಅವರಿಗೆ ಯಾವುದೇ ಮುಚ್ಚುವಿಕೆ ಇರುವುದಿಲ್ಲ. ನಿನ್ನೆ (ಆಗಸ್ಟ್ 15) ಜನರು ಮರೆತು ಕ್ಷಮಿಸುವ ಮೂಲಕ ಮುನ್ನಡೆಯಬೇಕು ಎಂದು ಬಿರೇನ್ ಸಿಂಗ್ ಹೇಳಿದ್ದಾರೆ. ಅತ್ಯಾಚಾರ ಸಂತ್ರಸ್ತರು ತಮ್ಮ ದೇಹದ ಉಲ್ಲಂಘನೆಯನ್ನು ಮರೆತುಬಿಡಬೇಕು ಎಂದು ಅವರು ಹೇಳುತ್ತಿದ್ದಾರೆಯೇ ಎಂದು ನಾನು ಅವರನ್ನು ಕೇಳಲು ಬಯಸುತ್ತೇನೆ” ಎಂದು ಬೃಂದಾ ಹೇಳಿದರು.

ತಮ್ಮ ಜನಾಂಗ, ತಮ್ಮ ಗುರುತು ಮತ್ತು ಧರ್ಮದ ಕಾರಣದಿಂದ ತಮ್ಮ ಮೇಲೆ ಅಪರಾಧಗಳು ನಡೆದಿವೆ ಎಂದು ಜನರು ಹೇಳಿದ್ದಾರೆ ಎಂದು ಎಐಡಿಡಬ್ಲ್ಯುಎ ತಂಡ ಹೇಳಿದೆ. “ಅದು ಅಲ್ಲಿ ಸಂಭವಿಸಬಹುದಾದರೆ, ಅದು ದೇಶದ ಯಾವುದೇ ಮೂಲೆಯಲ್ಲಿ ಸಂಭವಿಸಬಹುದು. ನ್ಯಾಯಕ್ಕೆ ದೊಡ್ಡ ತಡೆ ಎಂದರೆ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರೇ ಎಂಬುದನ್ನು ನಾವು ಗಮನಿಸಿದ್ದೇವೆ. ಆಡಳಿತದ ಸಂವೇದನಾಹೀನತೆಯು ಅವರಿಗೆ ಹೆಮ್ಮೆಯ ವಿಷಯವಾಗಿದೆ ಏಕೆಂದರೆ ಅವರಿಗೆ ಮೋದಿ ಸರ್ಕಾರದ ಬೆಂಬಲವಿದೆ, ”ಎಂದು ಅವರು ಹೇಳಿದರು.

ಬಿರೇನ್ ಸಿಂಗ್ ಕೇಂದ್ರದೊಂದಿಗೆ "ಸಹಕಾರ" ಮಾಡುತ್ತಿರುವುದರಿಂದ ಅವರನ್ನು ತೆಗೆದುಹಾಕಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಅಮಿತ್ ಶಾ ಸಂಸತ್ತಿನಲ್ಲಿ ನೀಡಿದ ಹೇಳಿಕೆಯನ್ನು ಉಲ್ಲೇಖಿಸಿ, "ಅವರು ಯಾರೊಂದಿಗೆ ಸಹಕರಿಸುತ್ತಿದ್ದಾರೆ ಎಂದು ನಾನು ಕೇಳ ಬಯಸುತ್ತೇನೆ? ಭಾರತದ ಸಂವಿಧಾನದೊಂದಿಗೆ? ಸಂತ್ರಸ್ತರೊಂದಿಗೆ? ” ಎಂದು ಪ್ರಶ್ನಿಸಿದರು.

ಸ್ಥಳೀಯ ಕೈಮಗ್ಗ ಉದ್ಯಮಗಳಲ್ಲಿ ಮಹಿಳೆಯರು ಉದ್ಯೋಗದಲ್ಲಿರುವ ಸ್ಥಳೀಯ ಆರ್ಥಿಕತೆಯನ್ನು ಈ ಪ್ರಕ್ಷುಬ್ಧತೆ ನಿರ್ನಾಮ ಗೊಳಿಸಿದೆ ಎಂದ ಬೃಂದಾ ಕಾರಟ್ “ಆಹಾರ ಧಾನ್ಯಗಳು ಪೂರೈಕೆಯಾಗದ ಕಾರಣ ದಿನಕ್ಕೆ ಒಂದು ಬಾರಿ ತಿನ್ನುವ ಪರಿಸ್ಥಿತಿ ತುಂಬಾ ಭೀಕರವಾಗಿದೆ ಎಂದು ಎರಡೂ ಸಮುದಾಯಗಳ ಬಡ ಮಹಿಳೆಯರು ನಮಗೆ ಹೇಳಿದರು. ಸ್ಥಳೀಯ ಲೇವಾದೇವಿದಾರರಲ್ಲಿ ನಗದು ಖಾಲಿಯಾಗಿರುವುದರಿಂದ ಯಾವುದೇ ಸಾಲವನ್ನು ಪಡೆಯಲು ಸಾಧ್ಯವಿಲ್ಲ" ಎಂದು ಹೇಳಿದರು.

ನಿಯೋಗವು ಚುರಚಂದಪುರಕ್ಕೆ ಭೇಟಿ ನೀಡಿತು, ಇದನ್ನು ಈಗ ಸ್ಥಳೀಯರು 'ಲಮ್‌ಕಾ' ಎಂದು ಕರೆಯುತ್ತಾರೆ ಎಂದು ಮರಿಯಂ ಧವಳೆ ಹೇಳಿದರು. ಸುಮಾರು 250 ಪರಿಹಾರ ಶಿಬಿರಗಳಲ್ಲಿ 15,000 ಕ್ಕೂ ಹೆಚ್ಚು ಜನರಿಗೆ ಆಶ್ರಯ ನೀಡಲಾಗಿದೆ ಎಂದು ಅವರು ಹೇಳಿದರು.

“ಇಡೀ ದೇಶವನ್ನು ಬೆಚ್ಚಿಬೀಳಿಸಿದ ಪಾಡು ಪಟ್ಟ ಯುವತಿ ಮತ್ತು ಹಿರಿಯ ಮಹಿಳೆಯನ್ನು ಭೇಟಿಯಾಗುವುದು ಹೃದಯ ವಿದ್ರಾವಕವಾಗಿತ್ತು. ಈ ಮಹಿಳೆಯರನ್ನು ಪೊಲೀಸರು ದರೋಡೆಗಿಳಿದಿದ್ದ ಜನಜಂಗುಳಿಯ ಕೈಗೆ ಒಪ್ಪಿಸಿದ್ದಾರೆ. ಅವಳನ್ನು ಉಳಿಸುವಲ್ಲಿ ಆಕೆಯ ಹದಿಹರೆಯದ ಸಹೋದರ ಮತ್ತು ತಂದೆ ಪಟ್ಟ ಹತಾಶೆಯನ್ನು ನಮಗೆ ವಿವರಿಸಿದಾಗ ನಮ್ಮ ಅನುಭವಕ್ಕೂ ಬಂತು. ಸಹೋದರನು ತನ್ನ ಸಹೋದರಿಯನ್ನು ಬಿಗಿಯಾಗಿ ಅಂಟಿಕೊಂಡನು. ಹೇಗಾದರೂ, ಸಂತ್ರಸ್ತರಿಬ್ಬರೂ ಪರಿಹಾರ ಶಿಬಿರವನ್ನು ತಲುಪಿದರು, ”ಎಂದು ಅವರು ಹೇಳಿದರು.

ತನ್ನ ಮಗ ಮತ್ತು ಗಂಡನ ಸಾವಿನಿಂದ ಅದಾಗಲೇ ಬಳಲುತ್ತಿದುದರಿಂದ ತನಗೆ ಏನಾಯಿತು ಎಂದು ತನ್ನ ತಾಯಿಗೆ ಹೇಳಲು ಸಾಧ್ಯವಾಗಲಿಲ್ಲ ಎಂದು ಯುವತಿ ಹೇಳಿದ್ದಾಳೆ ಎಂದು ಧವಳೆ ಹೇಳಿದರು. "ಹುಡುಗಿ ತನ್ನ ಭಯಾನಕ ಸತ್ವಪರೀಕ್ಷೆಯನ್ನು ತನ್ನೊಳಗೆ ಹಲವಾರು ದಿನಗಳವರೆಗೆ ಸಮಾಧಿ ಮಾಡಿದ್ದಳು. ವಿಡಿಯೋ ಹೊರಬಿದ್ದ ನಂತರವೇ ತಾಯಿಗೆ ವಿಷಯ ತಿಳಿಯಿತು. ಇದು ಆಕೆಯ ಹೃದಯವನ್ನು ಮುರಿಯಿತು” ಎಂದು ಧವಳೆ ಹೇಳಿದರು.

ಎಐಡಿಡಬ್ಲ್ಯುಎ ತಂಡದ ಭೇಟಿಯ ನಂತರ ಬಿಡುಗಡೆಯಾದ ವರದಿಯು ತಾಯಿಯ ಹೇಳಿಕೆಯನ್ನು ಹೀಗೆ ಉಲ್ಲೇಖಿಸಿದೆ, “ನನ್ನ ದುಃಖವನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ಎಷ್ಟೇ ಹಣ ನೀಡಿದರೂ ನಮ್ಮ ನಷ್ಟವನ್ನು ತುಂಬಲು ಸಾಧ್ಯವಿಲ್ಲ. ನಾವು ಈ ಸರ್ಕಾರದ ವಿರುದ್ಧ ಹೋರಾಡಲು ಸಹಾಯವನ್ನು ಬಯಸುತ್ತೇವೆ ಮತ್ತು ನಮಗಾಗಿ ಪ್ರತ್ಯೇಕ ಆಡಳಿತವನ್ನು ಬಯಸುತ್ತೇವೆ. ನನ್ನ ಮಗ ಮತ್ತು ಗಂಡನ ಮೃತ ದೇಹಗಳನ್ನು ನೋಡಲು ನಾನು ಬಯಸುತ್ತೇನೆ. ದಯವಿಟ್ಟು ಅವನ್ನು ನೋಡಲು ನನಗೆ ಸಹಾಯ ಮಾಡಿ."



ಆಕೆಯ ಪ್ರಕಾರ, ಆ ಶವಗಳು (ಗಂಡ ಮತ್ತು ಮಗ) ಇಂಫಾಲ್‌ನ ಶವಾಗಾರದಲ್ಲಿ ಬಿದ್ದಿವೆ, ಏಕೆಂದರೆ ಬಿಷ್ಣುಪುರದ ಶವಾಗಾರದಲ್ಲಿ 18ಕ್ಕೆ ಮಾತ್ರ ಅವಕಾಶವಿದ್ದರೂ ವಾಸ್ತವವಾಗಿ 39 ದೇಹಗಳನ್ನು ಅಲ್ಲಿ ಇರಿಸಲಾಗಿತ್ತು.

ಆ ಹಿರಿಯ ಮಹಿಳೆ ಹೇಳಿದರು, "ನಾವು ಅನುಭವಿಸಿದ ಕಷ್ಟವನ್ನು ಯಾವುದೇ ಸಮುದಾಯದ ಯಾವುದೇ ಮಹಿಳೆ ಅನುಭವಿಸಬಾರದು. ನನ್ನ ಮಗ ಕಾಲೇಜಿನ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದ, ನಾನು ಅವನನ್ನು ಮಾರ್ಚ್‌ನಿಂದ ನೋಡಿಲ್ಲ, ಈಗ ನಾನು ಅವನನ್ನು ಎಂದಿಗೂ ನೋಡುವುದಿಲ್ಲ. ಇದು ಆದಷ್ಟು ಬೇಗ ಮುಗಿಯಬೇಕೆಂದು ನಾವು ಬಯಸುತ್ತೇವೆ.”

ತಮ್ಮ ಆಗ್ರಹಗಳನ್ನು ಮುಂದಿಡುತ್ತು ಪಿ.ಕೆ. ಶ್ರೀಮತಿ ಅವರು ನ್ಯಾಯದ ಪ್ರಕ್ರಿಯೆ ಪ್ರಾರಂಭವಾಗುವಂತಾಗಲು ಬಿರೇನ್ ಸಿಂಗರನ್ನು ತೆಗೆದುಹಾಕಬೇಕು ಎಂದು ಹೇಳಿದರು. “ಪುನರ್ವಸತಿಯನ್ನು ಖಚಿತಪಡಿಸಲು ಹಿಂಸಾಚಾರದ ಸರಿಯಾದ ಮೌಲ್ಯಮಾಪನ ನಡೆಯಬೇಕು ಎಂದು ನಾವು ಒತ್ತಾಯಿಸುತ್ತೇವೆ. ಅದಲ್ಲದೆ, ಅತ್ಯಾಚಾರ, ಕೊಲೆ, ಸಾಮೂಹಿಕ ಅತ್ಯಾಚಾರ ಮತ್ತು ಹಿಂಸಾಚಾರದ ಎಲ್ಲಾ ಅಪರಾಧಿಗಳನ್ನು ಬಂಧಿಸಬೇಕು. ಆರ್ಥಿಕ ಸ್ಥಿರತೆ ರಾಜ್ಯಕ್ಕೆ ಮರಳುವವರೆಗೆ ಎಲ್ಲಾ ನಿವಾಸಿಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ 10 ಕೆಜಿ ಪಡಿತರವನ್ನು ನೀಡಬೇಕು” ಎಂದು ಅವರು ಹೇಳಿದರು.

2023 ಆಗಸ್ಟ್ 20–27
ಜನಶಕ್ತಿ ಚಂದಾ
ಅಭಿಯಾನ

NEW No. MAG(3)/NPP/205/2021-2022
JANASHAKTHI KANNADA VARA PATRIKE August 21-27, 2023 Price: Rs. 10/- Date of Publication: 18 August 2023 RNI No. KARKAN /2006/17926 Posted on 19-08-2023
Posted at BG PSO, BG - 560026 **Posted at Periodical Rate -** Rs. 2



ಸಂಖ್ಯೆ: PRO/PR/PA/ 259 /23-24

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**